# ದಕ್ಷಿಣಾಮೂರ್ತಿಸ್ತೋತ್ರ



ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

(1880-1975)

ಪ್ರಕಾಶಕರು
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ

# ನಮ್ಮ ಕೆಲವು ಅಧ್ಯಾತ್ಮಗ್ರಂಥಗಳು

## (ಶ್ರೀಶ್ರೀಗಳವರ ಉಪನ್ಯಾಸಮಾಲಿಕೆಗಳು)

1. **ದಕ್ಷಿಣಾಮೂರ್ತಿಸ್ತೋತ್ರ :** ನಮ್ಮಗಳ ಆತ್ಮನು ಅದ್ವಿತೀಯ ಕೂಟಸ್ಥ ನಿರ್ವಿಶೇಷ ಚೈತನ್ಯ ಸ್ವರೂಪನು- ಎಂಬುದನ್ನು ಹೃದಯಂಗಮವಾಗಿ ವಿವರಿಸಿದೆ. ಮೂಲ-ಶ್ಲೋಕ, ವಿವರಣೆಗಳಿವೆ. **ಈಗ ಇದು ನಿಮ್ಮ ಕೈಯಲ್ಲಿದೆ.** **(ನಾಲ್ಕನೆಯ ಮುದ್ರಣ : ೨೦೦೧ ಪುಟಗಳು, ಡೆಮ್ಮಿ ೬ + ೭೨)**

2. **ಬ್ರಹ್ಮವಿದ್ಯೆ :** ಬ್ರಹ್ಮವಿದ್ಯೆಯು ಲೌಕಿಕ ವಿದ್ಯೆಗಳಿಗಿಂತ ಯಾವ ಅಂಶಗಳಲ್ಲಿ ವಿಲಕ್ಷಣವಾಗಿದೆ, ಅದಕ್ಕೆ ಸಾಧಕರು ಅನುಸರಿಸಬೇಕಾದ ಮಾರ್ಗವು ಯಾವದು ? ಎಂಬುದನ್ನೂ ಬ್ರಹ್ಮವಿದ್ಯೆಯ ಸಾಧನ ಸಿದ್ಧಾಂತಗಳ ರಹಸ್ಯವನ್ನೂ ವಿವರಿಸುವ ಉಪದೇಶಗಳಿವೆ. ಬ್ರಹ್ಮವಿದ್ಯೆಯ ಹೆಚ್ಚುಗಾರಿಕೆ, ಜ್ಞಾನಸಾಧನೆಗಳು, ಬ್ರಹ್ಮಾನುದರ್ಶನ ಪ್ರಕಾರ, ಬ್ರಹ್ಮಾತ್ಮಜ್ಞಾನದಿಂದ ಅನರ್ಥ ನಿವೃತ್ತಿ, ಆಚಾರ್ಯೋಪದೇಶ, ಈಶ್ವರಾನುಗ್ರಹ ಮುಂತಾದ ವಿಷಯಗಳ ಮರ್ಮವನ್ನು ತಿಳಿಸಿಕೊಡುವ, 1963 ನೇ ಶಂಕರ ಸಪ್ತಾಹದಲ್ಲಿ ಮಾಡಿದ **ಮೂರು** ಉಪನ್ಯಾಸಗಳಿವೆ.

   **(ದ್ವಿತೀಯ ಮುದ್ರಣ : ೧೯೮೩ ಪು. ಕ್ರೌ. ೪ + ೬೦)**

3. **ಅನುಭವಪರ್ಯಂತವಾದ ಆತ್ಮವಿಚಾರ :** ಶ್ರುತಿ, ಆಗಮ, ಉಪಪತ್ತಿ ಅಥವಾ ತರ್ಕ - ಇವುಗಳ ಮರ್ಮವನ್ನು ಶ್ರೋತೃಗಳಿಗೆ ಹೃದಯಂಗಮವಾಗುವಂತೆ ಪ್ರತಿಪಾದಿಸಿದೆ. ಇದರಲ್ಲಿ (೧) ವೇದಾಂತ ವಿಚಾರಸರಣಿ (೨) ಆತ್ಮವನ್ನು ಶಾಸ್ತ್ರವು ತಿಳಿಸಿಕೊಡುವ ರೀತಿ (೩) ಆಗಮ, ತರ್ಕ (೪) ಅನುಭವಾನುಸಾರಿಯಾದ ತರ್ಕ (೫) ಬ್ರಹ್ಮಾತ್ಮಾನುಭವಕ್ಕೆ ಉಪಾಯಗಳು (೬) ಅಜಾತಿವಾದ ಎಂಬ ಶ್ರೀಶ್ರೀಗಳವರ **ಆರು** ಉಪನ್ಯಾಸಗಳಿವೆ.

   **(ದ್ವಿತೀಯ ಮುದ್ರಣ : ೧೯೮೦ ಪು. ಕ್ರೌ. ೬ + ೬೬)**

4. **ಪರಿಪೂರ್ಣ ದರ್ಶನ :** ಆಚಾರ್ಯರು ಉಪದೇಶಿಸಿರುವ ವೇದಾಂತದ ಆಳವನ್ನು ಕಾಣಬೇಕೆಂಬ ಕುತೂಹಲವುಳ್ಳವರಿಗೂ ಅದರ ವಿಶೇಷವನ್ನು ನಿಷ್ಕೃಷ್ಟವಾಗಿ ತಿಳಿಯಬೇಕೆನ್ನುವವರಿಗೂ ಇದು ಬಹಳ ಉಪಯುಕ್ತವಾದ ಗ್ರಂಥ. ಭೌತಿಕ ವಿಜ್ಞಾನವೂ ವೇದಾಂತವೂ, ಲೌಕಿಕ ವಿಜ್ಞಾನದ ಎಲ್ಲೆಕಟ್ಟು, ಆಕೃತ್ಸ್ನದರ್ಶನಗಳು, ಶಾಸ್ತ್ರ ಪ್ರಮಾಣ, ತರ್ಕಗಳ ಸ್ವರೂಪ, ಬ್ರಹ್ಮಾತ್ಮಾನುಭವ, ವೇದಾಂತಜ್ಞಾನದ ಪ್ರಯೋಜನ- ಎಂಬ **ಎಂಟು** ಉಪನ್ಯಾಸಗಳಿವೆ.

   **(ದ್ವಿತೀಯ ಮುದ್ರಣ : ೧೯೮೩ ಪು. ಕ್ರೌ. ೪ + ೫೮)**

5. **ಸರ್ವವ್ಯವಹಾರಾತೀತವಾದ ಪರಮಾರ್ಥ :** ಸರ್ವವ್ಯವಹಾರಾತೀತವಾದ ನಿತ್ಯಶುದ್ಧಬುದ್ಧಮುಕ್ತಾತ್ಮನಲ್ಲಿ ನೆಲೆನಿಲ್ಲುವ ಪರಮಾನುಭವವೇ ಪರಮಾರ್ಥವಿದ್ಯೆ- ಎಂದು ತಿಳಿಸಿಕೊಡುವ ಉಪದೇಶಗಳಿವೆ. ಭೋಕ್ತೃಭೋಗ್ಯ ವ್ಯವಹಾರ, ಕರ್ತೃಕರ್ಮಫಲ ವ್ಯವಹಾರ, ಜ್ಞಾತೃಜ್ಞಾನಜ್ಞೇಯ ವ್ಯವಹಾರ, ಅವಿದ್ಯಾವ್ಯವಹಾರ ಅಹಂ ಮಮ ವ್ಯವಹಾರ, ವಿದ್ಯಾವಿದ್ಯಾವ್ಯವಹಾರ ಎಂಬ **ಆರು** ಉಪನ್ಯಾಸಗಳಿವೆ. ಶ್ರೀಶ್ರೀಗಳವರು 1962ರಲ್ಲಿ ಮೈಸೂರಿನಲ್ಲಿ ಮಾಡಿದ ಉಪನ್ಯಾಸಗಳಿವು.

   **(ದ್ವಿತೀಯ ಮುದ್ರಣ : ೧೯೯೦ ಪು. ಕ್ರೌ. ೪ + ೪೮)**

ಅಧ್ಯಾತ್ಮಗ್ರಂಥಾವಳಿ

# ದಕ್ಷಿಣಾಮೂರ್ತಿಸ್ತೋತ್ರ

(ವಿವರಣೆ ಸಮೇತ)

ವಿವರಣಕರ್ತರು :
**ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

**ಕ್ರಮಾಂಕ ೧೧೦**

ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ - ೫೭೩೨೧೧
೨೦೦೧

| | | |
|---|---|---|
| ಮೊದಲನೆಯ ಮುದ್ರಣ | 1961 | ( 1000 ಪ್ರತಿಗಳು) |
| ಎರಡನೆಯ ಮುದ್ರಣ | 1978 | ( 1000 ಪ್ರತಿಗಳು) |
| ಮೂರನೆಯ ಮುದ್ರಣ | 1992 | ( 1000 ಪ್ರತಿಗಳು) |
| ನಾಲ್ಕನೆಯ ಮುದ್ರಣ | 2001 | (2000 ಪ್ರತಿಗಳು) |

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಅಕ್ಷರ ಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 213, ಬಾಲಾಜಿ ರಸ್ತೆ,
ತ್ಯಾಗರಾಜನಗರ, ಬೆಂಗಳೂರು - 28
ದೂರವಾಣಿ : 6767016

ಮುದ್ರಕರು :
**ಗಣೇಶ ಮಾರುತಿ ಪ್ರಿಂಟರ್ಸ್**
ನಂ.76, 3ನೇ ಬ್ಲಾಕ್, 6ನೇ ಮುಖ್ಯರಸ್ತೆ
ತ್ಯಾಗರಾಜನಗರ, ಬೆಂಗಳೂರು -61
ದೂರವಾಣಿ : 6662232

# ಮುನ್ನುಡಿ

ಶಾಂಕರಸಂಪ್ರದಾಯದವರು ಈಗ್ಗೆ ಭಾಷ್ಯಪಾಠವನ್ನು ಮಾಡುವಾಗ ಶಾಂತಿಪಾಠದ ಜೊತೆಗೆ **ದಕ್ಷಿಣಾಮೂರ್ತಿಸ್ತೋತ್ರ**ವನ್ನು ಹೇಳಿಕೊಳ್ಳುತ್ತಾರೆ. ಆದ್ದರಿಂದ ಈ ಪ್ರಕರಣಕ್ಕೆ ಬಹಳ ಪ್ರಾಮುಖ್ಯತೆ ಬಂದಿದೆ. ಇದಕ್ಕೆ ಶ್ರೀಸುರೇಶ್ವರಾಚಾರ್ಯರ ಹೆಸರಿನಿಂದ ಪ್ರಸಿದ್ಧವಾಗಿರುವ **ಮಾನಸೋಲ್ಲಾಸ**ವೆಂಬ ವಾರ್ತಿಕವೂ ಇದೆ. ಈ ಗ್ರಂಥವೂ ಕಾರ್ಯಾಲಯದಲ್ಲಿ ದೊರೆಯುತ್ತದೆ.

ಈ ಪ್ರಕರಣವು ನಿಜವಾಗಿ ಶ್ರೀಶಂಕರಭಗವತ್ಪಾದರವರು ಬರೆದದ್ದೆ? ವಾರ್ತಿಕವು ಸುರೇಶ್ವರಾಚಾರ್ಯರ ಕೃತಿಯೆ ?- ಎಂಬ ವಿಷಯದಲ್ಲಿ ಪುರಾತತ್ತ್ವಪರಿಶೀಲಕರಲ್ಲಿ ಮತಭೇದವುಂಟು. ಆದರೂ ಈ ಮತಭೇದವು ಸ್ತೋತ್ರದಲ್ಲಿ ಅಡಕವಾಗಿರುವ ವೇದಾಂತಸಿದ್ಧಾಂತಕ್ಕೇನೂ ಹಾನಿಯನ್ನು ಉಂಟು ಮಾಡುವಂತಿಲ್ಲ.

ಈ ಗ್ರಂಥಕ್ಕೆ ಯಾವದೊಂದು ವ್ಯಾಖ್ಯಾನವನ್ನೂ ಆಧಾರವಾಗಿ ಹಿಡಿಯದೆ, ಸ್ವಭಾವದಿಂದ ಸರಳವಾಗಿ ತೋರುವ ಅಭಿಪ್ರಾಯವನ್ನೇ ಶಾಂಕರಸಿದ್ಧಾಂತಕ್ಕೆ ವಿರೋಧ ವಿಲ್ಲದಂತೆ ಸುಲಭವಾದ ಭಾಷೆಯಿಂದ **ಶ್ರೀಶ್ರೀಗಳವರು** ವಿವರಿಸಿರುತ್ತಾರೆ. ವೇದಾಂತ ಜಿಜ್ಞಾಸುಗಳಿಗೆ ಇದರಿಂದ ಒಂದಿಷ್ಟಾದರೂ ಪ್ರಯೋಜನವಾದರೆ ನಮ್ಮ ಶ್ರಮವು ಸಾರ್ಥಕವಾಗುವದು.

ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಶ್ರೀಶ್ರೀಗಳವರು ಆಗಾಗ್ಗೆ ಬರೆದ ಲೇಖನಗಳನ್ನೆಲ್ಲಾ ಒಟ್ಟುಗೂಡಿಸಿ 1961ರಲ್ಲಿ ಮೊದಲನೆಯಬಾರಿಗೆ ಇದು ಮುದ್ರಿತವಾಯಿತು. 1978ರಲ್ಲಿ ಸಂಸ್ಕರಿಸಿ ಎರಡನೆಯ ಬಾರಿಗೂ, ಪುಸ್ತಕಗಳು ಜನಪ್ರಿಯವಾಗಿದ್ದುದರಿಂದ 1992ರಲ್ಲಿ ಮೂರನೆಯ ಬಾರಿಗೂ ಪ್ರಕಾಶನಗೊಂಡಿತು. ಈಗ ಪುಸ್ತಕಗಳೆಲ್ಲವೂ ಮುಗಿದು ಹೋಗಿದ್ದುದರಿಂದ ಪರಿಷ್ಕರಿಸಿ ನಾಲ್ಕನೆಯ ಬಾರಿಗೆ ಮುದ್ರಿಸಲಾಗಿದೆ.

ವೇದಾಂತಪ್ರಿಯರಾದ ವಾಚಕರು ಎಂದಿನಂತೆ ಸ್ವೀಕರಿಸಿ ಉಪಯೋಗಮಾಡಿ ಕೊಳ್ಳುವರೆಂದು ಆಶಿಸಲಾಗಿದೆ.

ಇತಿ

**ತಾ॥ 25. 3. 2001** **ಪ್ರಕಾಶಕರು.**

# ವಿಷಯಾನುಕ್ರಮಣಿಕೆ


| | ವಿಷಯ | ಪುಟ |
|---|---|---|
| ೧. | ಅದ್ವಯಜ್ಞಾನ | ೧ |
| ೨. | ಪರಮಾತ್ಮನ ಜಗತ್ಕಾರಣತ್ವ | ೯ |
| ೩. | ಚೇತನಾಚೇತನಾತ್ಮಕಜಗತ್ತು ಪರಮಾತ್ಮನೇ | ೧೮ |
| ೪. | ಪರಮಾತ್ಮನು ಸ್ವಯಂಪ್ರಕಾಶನು | ೨೭ |
| ೫. | ದೇಹಾದಿಗಳಲ್ಲಿ ಆತ್ಮತ್ವಭ್ರಾಂತಿ | ೩೩ |
| ೬. | ಆತ್ಮನು ಅದ್ವಿತೀಯಕೂಟಸ್ಥನಿರ್ವಿಶೇಷಚೈತನ್ಯಸ್ವರೂಪನು | ೪೧ |
| ೭. | ಆತ್ಮಪ್ರತ್ಯಯ | ೪೭ |
| ೮. | ಜಗತ್ತಿನಲ್ಲಿ ದೃಶ್ಯಗಳಿಗಿರುವ ಮಿಥ್ಯಾಸಂಬಂಧ | ೫೫ |
| ೯. | ಪರಮೇಶ್ವರನ ಸರ್ವಾತ್ಮಕತ್ವ | ೬೩ |
| ೧೦. | ಸರ್ವಾತ್ಮಭಾವ | ೬೭ |


------

॥ ಓಂ ॥

# ದಕ್ಷಿಣಾಮೂರ್ತಿಸ್ತೋತ್ರ

## ೧. ಅದ್ವಯಜ್ಞಾನ

**ವಿಶ್ವಂ ದರ್ಪಣದೃಶ್ಯಮಾನನಗರೀತುಲ್ಯಂ ನಿಜಾನ್ತರ್ಗತಂ**
**ಪಶ್ಯನ್ನಾತ್ಮನಿ ಮಾಯಯಾ ಬಹಿರಿವೋದ್ಭೂತಂ ಯಥಾ ನಿದ್ರಯಾ ।**
**ಯಃ ಸಾಕ್ಷಾತ್ಕುರುತೇ ಪ್ರಬೋಧಸಮಯೇ ಸ್ವಾತ್ಮಾನಮೇವಾದ್ವಯಂ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥**

ಶ್ರೀಮಚ್ಛಂಕರಭಗವತ್ಪಾದಾಚಾರ್ಯರವರು ಅನುಗ್ರಹಿಸಿರುವರೆಂದು ಪ್ರಸಿದ್ಧವಾಗಿರುವ ಪ್ರಕರಣಗಳಲ್ಲಿ ಶ್ರೀದಕ್ಷಿಣಾಮೂರ್ತಿಸ್ತೋತ್ರವೂ ಒಂದು. ಇದಕ್ಕೆ **ಮಾನಸೋಲ್ಲಾಸ**ವೆಂಬ ವಾರ್ತಿಕವೊಂದು ಇದೆ;[1] ಅದನ್ನು ಶ್ರೀಶಂಕರಾಚಾರ್ಯರವರ ಸಾಕ್ಷಾಚ್ಛಿಷ್ಯರಾದ ಸುರೇಶ್ವರಾಚಾರ್ಯರೇ ಬರೆದಿರುತ್ತಾರೆಂದು ಪ್ರಸಿದ್ಧಿ. ಆಚಾರ್ಯರಲ್ಲಿ ಭಕ್ತಿಯುಳ್ಳವರನೇಕರು ಈ ಸ್ತೋತ್ರವನ್ನು ನಿತ್ಯವೂ ಪಠಿಸುತ್ತಾರೆ. ಈಗ್ಗೆ ಪ್ರಸ್ಥಾನತ್ರಯಭಾಷ್ಯಗಳನ್ನು ಪಾರಾಯಣಮಾಡುವವರೂ ಗುರುಗಳ ಮೂಲಕ ಹೇಳಿಸಿಕೊಳ್ಳುವವರೂ ಶಾಂತಿಮಂತ್ರಗಳ ಜೊತೆಗೆ ಈ ಸ್ತೋತ್ರವನ್ನೂ ಹೇಳಿಕೊಳ್ಳುವ ವಾಡಿಕೆಯಿದೆ. ಈ ಕಾರಣದಿಂದಲೂ ಈ ಸ್ತೋತ್ರಕ್ಕೆ ಪ್ರಾಧಾನ್ಯವಿದೆ. ಇವೆರಡರ ಜೊತೆಗೆ ಈ ಸ್ತೋತ್ರದ ಅರ್ಥವನ್ನು ಅನುಸಂಧಾನಮಾಡಿಕೊಂಡರೆ ಆಗುವ ಹೆಚ್ಚಿನ ಪ್ರಯೋಜನವು ಒಂದಿದೆ. ಅದೇನೆಂದರೆ ಈ ಪ್ರಕರಣದಲ್ಲಿ ಸರ್ವಾತ್ಮತ್ವವನ್ನು ಸ್ಫುಟಗೊಳಿಸಿರುತ್ತದೆ. **ಸರ್ವಾತ್ಮತ್ವ**ವೆಂಬ ಮಾತಿಗೆ ಎರಡರ್ಥವಿದೆ. ನಮಗೆ ಏನೇನು ಕಾಣುತ್ತಿದೆಯೋ, ಯಾವಯಾವದು ಇಂದ್ರಿಯಗಳಿಗೂ ಮನಸ್ಸಿಗೂ ಗೋಚರವಾಗಿದೆಯೋ, ಅದೆಲ್ಲವೂ, ನಮ್ಮ ಒಳಗಿರುವ ಶರೀರೇಂದ್ರಿಯಮನಆದಿಗಳೂ- ಎಲ್ಲವೂ ನಿಜವಾಗಿ ಆತ್ಮನೇ ಎಂಬುದು ಒಂದು ಸರ್ವಾತ್ಮತ್ವ. ಪರಮಾತ್ಮನು ಒಬ್ಬನೇ ಆಗಿದ್ದುಕೊಂಡು, ವ್ಯವಹಾರದಲ್ಲಿ ನಮಗೆ ತೋರುವದೆಲ್ಲವೂ ಆಗಿ ಕಾಣಿಸಿಕೊಳ್ಳುತ್ತಿದ್ದಾನೆ ; ಪರಮಾತ್ಮನಿಗಿಂತ ಬೇರೆಯಾಗಿ ಯಾವದೊಂದೂ ಇಲ್ಲವೇ ಇಲ್ಲ- ಇದೂ ಒಂದು ಬಗೆಯ ಸರ್ವಾತ್ಮತ್ವ. ಇದನ್ನು ಯಾವನು

---

1. ಈ ಗ್ರಂಥವೂ ಅರ್ಥಸಮೇತವಾಗಿ ಕಾರ್ಯಾಲಯದಿಂದ ಪ್ರಕಟವಾಗಿದೆ.

ಮನದಟ್ಟುಮಾಡಿಕೊಳ್ಳುವನೋ ಅವನಿಗೆ ಸರ್ವಾತ್ಮತ್ವವೇ ಬರುತ್ತದೆ- ಎಂದು ಈ ಗ್ರಂಥದ ಕೊನೆಯ ಶ್ಲೋಕದಲ್ಲಿ ಹೇಳಿರುತ್ತದೆ. ಇದೇ ಆಚಾರ್ಯರು ಬೋಧಿಸಿರುವ ವೇದಾಂತದ ಪರಮಸಿದ್ಧಾಂತವಾದ್ದರಿಂದ ಇದನ್ನು ಭಾಷ್ಯಚಿಂತನದ ಕಾಲಕ್ಕೆ ಪಠಿಸುವದು ಯೋಗ್ಯವೇ ಆಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ಜಿಜ್ಞಾಸುಗಳ ಪ್ರಯೋಜನಕ್ಕಾಗಿ ಈ ಗ್ರಂಥದ ಶ್ಲೋಕಗಳನ್ನು ಒಂದೊಂದಾಗಿ ವಿವರಿಸುವದಕ್ಕೆ ಪ್ರಯತ್ನಿಸುವೆವು.

'ಯಾವಾತನು ತನ್ನೊಳಗೆ ಅಡಕವಾಗಿರುವ, ಕನ್ನಡಿಯಲ್ಲಿ ಕಾಣುವ ನಗರಿಗೆ ಸಮಾನವಾದ ವಿಶ್ವವನ್ನು ತನ್ನಲ್ಲಿರುವ ಮಾಯೆಯಿಂದ ನಿದ್ರೆಯಿಂದ (ಕಾಣು ವಂತೆ)- ಹೊರಗೆ ಹುಟ್ಟಿದಂತೆ ಕಾಣುತ್ತಾ, ಪ್ರಬೋಧಸಮಯದಲ್ಲಿ ಅದ್ವಯನಾದ ತನ್ನ ಆತ್ಮನನ್ನೇ ಸಾಕ್ಷಾತ್ಕರಿಸಿಕೊಳ್ಳುವನೋ, ಆ ಶ್ರೀಗುರುಮೂರ್ತಿಯಾದ ಶ್ರೀದಕ್ಷಿಣಾಮೂರ್ತಿಗೆ ಈ ನಮಸ್ಕಾರವು'- ಎಂಬುದು ಶ್ಲೋಕದ **ಅಕ್ಷರಾರ್ಥವು.**

ಈಗ ಇಲ್ಲಿರುವ ಪದಗಳ ಅರ್ಥವನ್ನು ಒಂದೊಂದಾಗಿ ಬಿಡಿಸಿ ನೋಡೋಣ. **ದಕ್ಷಿಣಾಮೂರ್ತಿ** ಎಂಬುದು ಪರಮಶಿವನ ಹೆಸರು. ಸನಕಾದಿ ಗಳಿಗೆ ಶ್ರೀಪರಮಶಿವನು ಮೌನದಿಂದಲೇ ಪರಬ್ರಹ್ಮತತ್ತ್ವವನ್ನುಪದೇಶಿಸಿದ ನೆಂದೂ ಅಷ್ಟರಿಂದಲೇ ಶಿಷ್ಯರಾದ ಋಷಿಗಣಕ್ಕೆಲ್ಲ ಸಂಶಯಗಳು ಕತ್ತರಿಸಿಹೋದ ವೆಂದೂ ಆಗ್ಗೆ ಆತನು ಒಂದು ಆಲದಮರದ ಕೆಳಗೆ ದಕ್ಷಿಣದಿಕ್ಕಿಗೆ ಅಭಿಮುಖನಾಗಿ ಕುಳಿತಿದ್ದನೆಂದೂ ಪೌರಾಣಿಕರ ಹೇಳಿಕೆ. ಆದ್ದರಿಂದ ಆಗ ಪರಮಶಿವನು ಧರಿಸಿದ್ದ ಪರಮಸುಂದರವಾಗಿದ್ದ ಹರೆಯದ ಆಕೃತಿಗೆ ದಕ್ಷಿಣಾಮೂರ್ತಿ ಎಂದು ಹೆಸರಾಯಿತು. ಈಗಲೂ ಕೆಲವರು ಉಪಾಸಕರು ಆ ಹೆಸರಿನಿಂದಲೇ ಆ ಆಕೃತಿಯನ್ನೇ ಧ್ಯಾನಮಾಡುತ್ತಿರುತ್ತಾರೆ. 'ಪರಮೇಶ್ವರನಿಗೆ ನಿಜವಾದ ಗೊತ್ತಾದ ಯಾವದೊಂದು ಆಕೃತಿಯೂ ಇರುವದಿಲ್ಲವಾದರೂ ಭಕ್ತರ ಅನುಗ್ರಹಕ್ಕಾಗಿ ತನ್ನ ಇಚ್ಛಾಮಾತ್ರದಿಂದ ಧರಿಸಿದ ಮಾಯಾಮಯವಾದ ರೂಪವೂ ಇರಬಹುದು' **(ಸ್ಯಾತ್ ಪರಮೇಶ್ವರಸ್ಯಾಪಿ ಇಚ್ಛಾವಶಾತ್ ಮಾಯಾಮಯಂ ರೂಪಂ ಸಾಧಕಾನುಗ್ರಹಾರ್ಥಮ್)** ಎಂದು ಆಚಾರ್ಯರು ಸೂತ್ರಭಾಷ್ಯದಲ್ಲಿ(೧-೧-೨೦) ಬರೆದಿರುತ್ತಾರೆ.

ಆ ದಕ್ಷಿಣಾಮೂರ್ತಿಯಾದ ಪರಮೇಶ್ವರನು **ಶ್ರೀಗುರುಮೂರ್ತಿ**ಯೂ ಆಗಿರಬಹುದೆಂದು ಇದರಿಂದಲೇ ಸಿದ್ಧವಾಗುತ್ತದೆ. ಆತನು ದಕ್ಷಿಣಾಮೂರ್ತಿಯ ರೂಪದಿಂದ ಋಷಿಗಳಿಗೆ ಉಪದೇಶವನ್ನು ಮಾಡಿದಂತೆಯೇ ಈಗಲೂ ತತ್ತ್ವ ಜಿಜ್ಞಾಸುಗಳಿಗೆ ಶ್ರೀಗುರುಮೂರ್ತಿಯ ರೂಪದಿಂದಲೂ ಉಪದೇಶವನ್ನು ಮಾಡಿ

ಅನುಗ್ರಹಿಸುತ್ತಿರುತ್ತಾನೆ. **ಶ್ರೀ** ಎಂದರೆ ಬ್ರಹ್ಮವಿದ್ಯಾರೂಪವಾದ ಕಾಂತಿಯು. ಪರಮಶಿವನು ಬ್ರಹ್ಮವಿದ್ಯಾಸ್ವರೂಪವಾದ ತನ್ನ ಕಾಂತಿಯಿಂದ ನಿತ್ಯವೂ ಕೂಡಿದವನಾಗಿರುತ್ತಾನೆ; ತನ್ನ ಸಂಕಲ್ಪಮಾತ್ರದಿಂದ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಮಾಡಲು **ದಕ್ಷ**ನಾಗಿರುತ್ತಾನೆ ; ಆದರೂ ತನ್ನಲ್ಲಿ ವಿಕಾರವನ್ನು ಹೊಂದುವ ಯಾವ ಮೂರ್ತಿಯೂ ಇಲ್ಲವಾದ್ದರಿಂದ **ಅಮೂರ್ತಿ**ಯೂ ಆಗಿರುತ್ತಾನೆ. ಈ ಅರ್ಥದಲ್ಲಿ ಸ್ವರೂಪದಲ್ಲಿರುವ ಪರಮಾತ್ಮನನ್ನೂ 'ಶ್ರೀದಕ್ಷಿಣಾಮೂರ್ತಿ' ಎನ್ನಬಹುದಾಗಿದೆ. ಅದೇ ಪರಮೇಶ್ವರನೇ 'ದಕ್ಷಿಣಾಮೂರ್ತಿ' ಎಂಬ ಹೆಸರಿನ ಮೂರ್ತಿಯನ್ನು ಹೊಂದಿದಾಗಲೂ ಅದರಲ್ಲಿದ್ದ ಬ್ರಹ್ಮವರ್ಚಸರೂಪವಾದ ಶ್ರೀಯೂ ಆತನ ಉಪದೇಶರೂಪವಾದ ದಕ್ಷತೆಯೂ ಇದ್ದದ್ದರಿಂದ ಆತನು ದಕ್ಷಿಣಾಮೂರ್ತಿಯ ರೂಪದಿಂದಲೂ ತೋರಿಕೊಂಡನೆಂದು ಕಲ್ಪಿಸುವದರಲ್ಲೇನೂ ತಪ್ಪಿಲ್ಲ. ಆ ಪರಮೇಶ್ವರನೇ ಈಗಲೂ ಸಾಧಕರಿಗೆ ಬ್ರಹ್ಮವಿದ್ಯಾವರ್ಚಸ್ಸಿನಿಂದಲೂ ಉಪದೇಶ ದಕ್ಷತೆಯಿಂದಲೂ ಕೂಡಿ ಹಿತವನ್ನು 'ಗೃಣಾತಿ' ಎಂದರೆ ಹೇಳಿಕೊಡುತ್ತಾನಾದ್ದರಿಂದಲೂ ಶಿಷ್ಯಾನುಗ್ರಹಾರ್ಥವಾಗಿ ಮಾನವಮೂರ್ತಿಯನ್ನು ಧರಿಸಿರುತ್ತಾನಾದ್ದರಿಂದಲೂ **ಶ್ರೀಗುರುಮೂರ್ತಿ**ಯೂ ಆಗಿರುತ್ತಾನೆ. ಹೀಗೆ ಪರಮಾತ್ಮನು 'ಯಾವ ಮೂರ್ತಿಯೂ ಇಲ್ಲದೆ ಸರ್ವವ್ಯಾಪಕನಾಗಿದ್ದರೂ ಶ್ರೀದಕ್ಷಿಣಾಮೂರ್ತಿ, ಶ್ರೀಗುರುಮೂರ್ತಿ, ಶಿಷ್ಯಮೂರ್ತಿ- ಎಂಬ ಮೂರು ಮೂರ್ತಿಗಳ ರೂಪದಿಂದ ಕಾಣಿಸಿಕೊಂಡು ವಿದ್ಯಾಸಂಪ್ರದಾಯಪ್ರವರ್ತಕದೇವತೆ, ವಿದ್ಯೋಪದೇಶಕಗುರು, ವಿದ್ಯೆಯನ್ನು ಗ್ರಹಿಸುವ ಶಿಷ್ಯ- ಎಂಬ ಮೂರು ಮೂರ್ತಿಗಳಿಂದ ತನ್ನ ಲೀಲೆಯನ್ನು ತೋರ್ಪಡಿಸಿಕೊಳ್ಳುತ್ತಿರುತ್ತಾನೆ- ಎಂದು ವೇದಾಂತಾಜ್ಞರು ಹೇಳುತ್ತಿರುವರು. 'ಇಂಥ ಅದ್ವೈತಜ್ಞಾನವು ನನಗೆ ಲಭಿಸಲಿ' ಎಂಬ ಅಭಿಸಂಧಿಯಿಂದ ಜಿಜ್ಞಾಸುವು 'ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ' ಶ್ರೀಗುರುಮೂರ್ತಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರವು ಎಂದು ಭಕ್ತಿಪೂರ್ವಕವಾಗಿ ನಮಸ್ಕರಿಸಬೇಕು.

ಈಗ ಈ ಪ್ರಕರಣದಲ್ಲಿ ಪ್ರತಿಪಾದ್ಯವಾಗಿರುವ ಮುಖ್ಯವಿಷಯವನ್ನು ತಿಳಿಸುವ ವಿಶೇಷಣಗಳ ಕಡೆಗೆ ಚಿತ್ತವನು ಹೊರಳಿಸೋಣ. **ವಿಶ್ವ**ವೆಂದರೆ ನಮಗೆ ಏನೇನು ಇಂದ್ರಿಯಗಳಿಗೆ ಗೋಚರವಾಗಿರುವದೋ, ಏನೇನು ಮನಸ್ಸಿಗೆ ತಿಳಿಯ ಬರುವದೋ- ಅದೆಲ್ಲವೂ ಎಂದರ್ಥ. ಆಧ್ಯಾತ್ಮಿಕವಾದ ಇಂದ್ರಿಯ, ಮನಸ್ಸು, ಬುದ್ಧಿ, ಅಹಂಕಾರ- ಇವೆಲ್ಲವೂ ಈ ವಿಶ್ವದಲ್ಲಿಯೇ ಸೇರಿರುತ್ತವೆ. ಈ ವಿಶ್ವವು ಎಲ್ಲಿರುತ್ತದೆ ?- ಎಂದರೆ ಇದೆಲ್ಲ ಆತ್ಮನ ಸ್ವರೂಪದಲ್ಲಿಯೇ ಇರುತ್ತದೆ. ಆತ್ಮನೆಂದರೆ ವ್ಯಾಪಿಸಿಕೊಂಡಿರುವಾತನು. ಮಣ್ಣು, ಮಡಕೆ, ಕುಡಿಕೆ- ಮುಂತಾದವು

ಗಳನ್ನೂ, ಹಗ್ಗವು ತನ್ನಲ್ಲಿ ಕಲ್ಪಿತವಾಗುವ ಹಾವು, ನೆಲದ ಬಿರುಕು, ನೀರಿನ ಕೋಡಿ-ಮುಂತಾದವುಗಳನ್ನೂ ಪೂರ್ಣವಾಗಿ ವ್ಯಾಪಿಸಿಕೊಂಡಿರುವಂತೆ ಪರಮಾತ್ಮನು ಈ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ- ಎಂದು ವಿಭಕ್ತವಾಗಿ ಕಾಣುತ್ತಿರುವ ವಿಶ್ವವನ್ನು ಪೂರ್ತಿಯಾಗಿ ತುಂಬಿಕೊಂಡಿರುತ್ತಾನೆ. ವಿಶ್ವಕ್ಕೆ ಆತ್ಮನ ಆಧಾರದಿಂದಲೇ ಇರವು, ಆತ್ಮನ ಆಧಾರದಿಂದಲೇ ತೋರಿಕೆ ; ಅದರ ತಿರುಳೆಲ್ಲ ಆತ್ಮನೇ. **'ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ'** (ಛಾಂ.೬-೮-೭) ಎಂಬ ಶ್ರುತಿವಚನದಂತೆ ಇದೆಲ್ಲಕ್ಕೂ ತಿರುಳು ಈ ಆತ್ಮನೇ ; ಆತ್ಮನೇ ಇದರ ಪರಮಾರ್ಥವು, ಅವನೇ ಇದರ ಸಾರವು.

ಹೀಗಿದ್ದರೂ ಈ ವಿಶ್ವವು ತನ್ನ ತೋರಿಕೆಯ ರೂಪದಿಂದ ಆತ್ಮನೆಂದಾಗಲಿ ಆತ್ಮನಲ್ಲವೆಂದಾಗಲಿ ಹೇಳುವದಕ್ಕೆ ಬಾರದ್ದಾಗಿರುವದು. ಈ ತೋರಿಕೆಯ ರೂಪವೂ ಅದರ ಹೆಸರೂ ವ್ಯವಹಾರದಲ್ಲಿ ಸತ್ಯವೆಂದೇ ತೋರುತ್ತಿರುವವು. ನೊರೆಯು ತಾನು ತೋರಿಕೊಳ್ಳುವ ಮುಂಚೆಯೂ ತೋರಿಕೊಂಡ ಬಳಿಕವೂ ನಿಜವಾಗಿ ನೀರೇ ಆಗಿದ್ದರೂ ಅದನ್ನು ಬರಿಯ ನೀರೇ ಎಂದಾಗಲಿ, ನೀರಿನ ಪಕ್ಕದಲ್ಲಿರುವ ಸ್ವತಂತ್ರವಾದ ವಸ್ತ್ವಂತರವೆಂದಾಗಲಿ, ಹೇಗೆ ಹೇಳುವದಕ್ಕೆ ಬಾರದಿರುವದೋ ಹಾಗೆಯೇ ಈ ವಿಶ್ವವೂ ತನ್ನ ತೋರಿಕೆಯ ರೂಪದಿಂದ ಆತ್ಮತತ್ತ್ವವೇ ಎಂದಾಗಲಿ, ಅದಕ್ಕಿಂತ ಬೇರೆಯೆಂದಾಗಲಿ - ನಿಶ್ಚಯಿಸುವದಕ್ಕೆ ಬಾರದ ಪದಾರ್ಥವಾಗಿರುತ್ತದೆ.

ಈ ವಿಶ್ವವು ಹೀಗೆ ಆತ್ಮನಲ್ಲಿಯೇ ಆತ್ಮನ ರೂಪದಿಂದಲೇ ಇದ್ದುಕೊಂಡಿದ್ದರೂ ಅಜ್ಞಾನದ ದಶೆಯಲ್ಲಿ ಆತ್ಮನಿಗಿಂತ ಹೊರಗೆ ಇರುವಂತೆ ಆತ್ಮತತ್ತ್ವವನ್ನರಿಯದ ಅವಿವೇಕಿಗಳಿಗೆ ತೋರುತ್ತಿರುವದು. ಹೀಗೆ ತೋರುವದಕ್ಕೆ ಕಾರಣವೇನೆಂದರೆ ಆತ್ಮನಲ್ಲಿರುವ **ಮಾಯೆ.** ಮಾಯೆ ಎಂದರೇನೆಂಬುದನ್ನು ಮನಸ್ಸಿಗೆ ಹತ್ತಿಸಿಕೊಳ್ಳುವದು ಒಳ್ಳೆಯದು. ಏಕೆಂದರೆ ಈ ಶಬ್ದಕ್ಕೆ ಬೇರೆಬೇರೆಯ ದರ್ಶನಗಳಲ್ಲಿ ಬೇರೆಬೇರೆಯ ಅರ್ಥವಿರುತ್ತದೆ. ವೇದಾಂತದಲ್ಲಿ ಅವಿದ್ಯಾಕಲ್ಪಿತವಾಗಿರುವ ನಾಮರೂಪಗಳನ್ನೇ ಮಾಯೆ ಎಂದು ಕರೆದಿದೆ. ಈ ವಿಷಯದಲ್ಲಿ ಸೂತ್ರಭಾಷ್ಯದಲ್ಲಿರುವ ಒಂದು ವಾಕ್ಯವನ್ನು ಇಲ್ಲಿ ಉದಾಹರಿಸುವೆವು : **'ಸರ್ವಜ್ಞಸ್ಯೇಶ್ವರಸ್ಯ ಆತ್ಮಭೂತೇ ಇವ ಅವಿದ್ಯಾಕಲ್ಪಿತೇ ನಾಮರೂಪೇ ತತ್ತ್ವಾನ್ಯತ್ವಾಭ್ಯಾಂ ಅನಿರ್ವಚನೀಯೇ ಸಂಸಾರಪ್ರಪಞ್ಚಬೀಜಭೂತೇ ಸರ್ವಜ್ಞಸ್ಯೇಶ್ವರಸ್ಯ ಮಾಯಾ, ಶಕ್ತಿಃ ಪ್ರಕೃತಿಃ ಇತಿ ಚ ಶ್ರುತಿಸ್ಮೃತ್ಯೋರಭಿಲಪ್ಯೇತೇ'** ಈ ವಾಕ್ಯದ ಅಭಿಪ್ರಾಯವೇನೆಂದರೆ ; ಪರಮಾತ್ಮನು ಚೈತನ್ಯಮಾತ್ರಸ್ವರೂಪನಾಗಿ ಎಲ್ಲವನ್ನೂ ಬೆಳಗಬಲ್ಲವನಾಗಿರುವದರಿಂದ ಸರ್ವಜ್ಞನೆನಿಸಿರುತ್ತಾನೆ. ಸರ್ವಜ್ಞನು ಎಂದರೆ ಎಲ್ಲವನ್ನೂ

ಯಾವಾಗಲೂ ಅರಿಯುತ್ತಲೇ- ಚೈತನ್ಯದಿಂದ ಬೆಳಗುತ್ತಲೇ- ಇರುವವನು ಎಂದೇನೂ ಅರ್ಥವಲ್ಲ. ಏಕೆಂದರೆ ಪ್ರಪಂಚವು ಇಲ್ಲದಾಗಲೂ ಅವನು ಇರುತ್ತಾನೆ; ಉದಾಹರಣೆಗೆ ಪ್ರಲಯದಲ್ಲಿ ಬೆಳಗಬೇಕಾದ ಪ್ರಪಂಚವಿರುವದಿಲ್ಲ ; ಮೋಕ್ಷದಲ್ಲಿಯೂ ಇರುವದಿಲ್ಲ. ಆದರೂ ಪರಮಾತ್ಮನಿಗೆ ಯಾವದು ತೋರಿದರೂ ಬೆಳಗಬಲ್ಲ ಚೈತನ್ಯದ ಬೆಳಕು ಇದೆ. ಇದಲ್ಲದೆ ಈ ಪರಮಾತ್ಮನು ಪ್ರಪಂಚದಲ್ಲಿರುವ ಪದಾರ್ಥಗಳನ್ನು ಒಂದೊಂದಾಗಿ ಬೆಳಗುವದಿಲ್ಲ ; ಸೂರ್ಯನು ತನಗೆ ವಿಷಯವಾದ ಭೂಭಾಗವನ್ನೆಲ್ಲಾ ಒಟ್ಟಿಗೆ ಬೆಳಗುವಂತೆ ಪ್ರಪಂಚವೆಲ್ಲವನ್ನೂ ಬೆಳಗಿ ತೋರಿಸುತ್ತಾನೆ. ಆದ್ದರಿಂದ ಇವನು **ಸರ್ವಜ್ಞನು** ಮತ್ತು ಆಗಲೇ ಹೇಳಿರುವಂತೆ ತಾನು ಬೆಳಗುವದಕ್ಕೆ ಇವನಿಗೆ ಮತ್ತೊಂದರ ಹಂಗು ಇರುವದಿಲ್ಲ ; ಆದ್ದರಿಂದ ಇವನು **ಈಶ್ವರನು**. ಮತ್ತು ಮತ್ತೆ ಯಾವದು ತೋರಿದರೂ ಇವನ ಚೈತನ್ಯದ ಬೆಳಕಿನಿಂದಲೇ ತೋರಬೇಕು, ಅದರ ಇರವಿನಿಂದಲೇ ಇದೆಯೆನಿಸಿ ಕೊಳ್ಳಬೇಕು. ಆದ್ದರಿಂದಲೂ ಇವನು **ಈಶ್ವರನು**. ಹೀಗೆ ಸರ್ವಜ್ಞನೂ ಈಶ್ವರನೂ ಆಗಿರುವ ಈ ಪರಮಾತ್ಮನಲ್ಲಿ ನಾಮರೂಪಗಳು ಅವಿದ್ಯೆಯಿಂದ ಕಲ್ಪಿತವಾಗಿ ತೋರಿಕೊಳ್ಳುತ್ತಿರುವವು. ಈ ವಿಶ್ವವೆಂಬುದೆಲ್ಲವೂ ನಾಮರೂಪಗಳ ರಾಶಿಯೇ ; ಆದ್ದರಿಂದಲೇ - ಅವಿದ್ಯಾಕಲ್ಪಿತವಾಗಿರುವ ಹಾವು ಎಂಬ ನಾಮರೂಪಗಳಿಗೆ ಹಗ್ಗವು ಹೇಗೆ ಆತ್ಮನಾಗಿರುವದೋ ಹಾಗೆ - ಈ ನಾಮರೂಪಪ್ರಪಂಚಕ್ಕೂ ಈ ಪರಮಾತ್ಮನೇ ಆತ್ಮನು, ಎಂದರೆ ಸಾರವಾಗಿರುತ್ತಾನೆ. ನೀರು ತಾನು ಎಂದೆಂದಿಗೂ ನೀರೇ ಆಗಿದ್ದರೂ ಅದರಲ್ಲಿ ನೊರೆಯೆಂಬುದೂ ಹೇಗೆ ಅವಿದ್ಯಾಕಲ್ಪಿತವಾಗಿ ತೋರಿಕೊಳ್ಳುತ್ತಿರುವದೋ, ಅದರಂತೆಯೇ ಈಶ್ವರನಲ್ಲಿ ನಾಮರೂಪಗಳ ರಾಶಿಯಾದ ಪ್ರಪಂಚವು ಅವಿದ್ಯಾಕಲ್ಪಿತವಾಗಿ ತೋರಿಕೊಳ್ಳುತ್ತಿರುವದು. ಇದು ಪ್ರಲಯಕಾಲದಲ್ಲಿ ಅವ್ಯಾಕೃತವಾಗಿರುತ್ತದೆ, ಎಂದರೆ ಬಿಡಿಬಿಡಿಯ ನಾಮರೂಪ ಗಳಾಗಿ ತೋರದೆ, ಆತ್ಮರೂಪದಲ್ಲಿಯೇ ಇದ್ದುಕೊಂಡಿರುವದು. ಸೃಷ್ಟಿಯಾದ ಬಳಿಕ ಬಿಡಿಬಿಡಿಯಾಗಿ ವ್ಯಾಕೃತನಾಮರೂಪಗಳಾಗಿ ತೋರಿಕೊಳ್ಳುತ್ತಿರುವದು.

ಅವ್ಯಾಕೃತವಾಗಿರುವಾಗ ಪ್ರಪಂಚವು ಪರಮಾತ್ಮನಲ್ಲಿ ಒಂದಾಗಿರುವಂತೆ ಇದ್ದು ವ್ಯಾಕೃತವಾಗಿರುವಾಗ ಅದು ಆತ್ಮನಿಗಿಂತ ಹೊರಕ್ಕೆ ಹುಟ್ಟಿಬಂದಂತೆ (ಬಹಿರುದ್ಭೂತಮಿವ) ತೋರುತ್ತದೆ- ಎಂದು ಹೇಳಿದ್ದರಲ್ಲಿ ತಿಳಿದುಕೊಳ್ಳಬೇಕಾದ ಒಂದು ವಿಶೇಷಾರ್ಥವಿದೆ. ಅದೇನೆಂದರೆ ಅವ್ಯಾಕೃತವಾಗಿರಲಿ, ವ್ಯಾಕೃತವಾಗಿರಲಿ ಪ್ರಪಂಚವೆಂಬುದು ಯಾವಾಗಲೂ ನಿಜವಾಗಿ ಆತ್ಮನೇ ಆಗಿರುತ್ತದೆಯೇ ಹೊರತು ಬೇರೆಯಾಗಿರುವದಿಲ್ಲ. ಪ್ರಪಂಚವು ಆತ್ಮನ ಒಂದಂಶದ ಪರಿಣಾಮವಲ್ಲ ; ಏಕೆಂದರೆ ಅದು ತೋರಿಕೊಂಡಮೇಲೂ ಆತ್ಮನು ಮೊದಲು ಇದ್ದಂತೆಯೇ

ಇರುತ್ತಾನೆ, ಆಗ ಅವನಲ್ಲಿ ಒಂದಂಶವು ಮುಕ್ಕಾಯಿತೆಂಬುದೇನೂ ಇರುವದಿಲ್ಲ. ಇದಲ್ಲದೆ ಪ್ರಪಂಚವು ಬಗೆಬಗೆಯಾಗಿ ಹರಡಿಕೊಂಡಿದ್ದರೂ, ಅದು ಆಗಲೂ ಆತ್ಮನನ್ನೇ ಆಶ್ರಯಿಸಿಕೊಂಡಿದ್ದರೂ, ಆತ್ಮನು ಈಗಲೂ ಅದ್ವಯನೇ ಆಗಿರುತ್ತಾನೆ ; ಪ್ರಪಂಚದ ಗುಣವಾಗಲಿ ದೋಷವಾಗಲಿ ಆತ್ಮನಿಗೆ ಹತ್ತಿಕೊಂಡಿರುವದಿಲ್ಲ. ಮಣ್ಣಿನಿಂದಾಗಿರುವ ಮಡಕೆ, ನೀರಿನಿಂದಾಗಿರುವ ನೊರೆ- ಇವುಗಳು ಮಣ್ಣು ನೀರುಗಳಲ್ಲಿ ಆಶ್ರಯಿಸಿಕೊಂಡೇ ತೋರುವಂತೆ ಪ್ರಪಂಚವು ಆತ್ಮನನ್ನು ಆಶ್ರಯಿಸಿಕೊಂಡೇ ಇರುವಂತೆ ಕಾಣುವದಿಲ್ಲ. ಅದು ಅವನಿಗಿಂತ ಹೊರಗೆ ಇರುವಂತೆ 'ಇದು' ಎಂಬ ಅರಿವಿಗೆ ವಿಷಯವಾಗಿಯೇ ಕಾಣುತ್ತಿರುತ್ತದೆ ; ಆತ್ಮನು ಇದನ್ನು ಬೆಳಗುವ ವಿಷಯಿಯಂತೆಯೇ ಕಾಣುತ್ತಾನೆ. ಹೀಗಿದ್ದರೂ ಅದು ನಿಜವಾಗಿ ಆತ್ಮನನ್ನು ಆಶ್ರಯಿಸಿಕೊಂಡೇ ಇರುತ್ತದೆ. ಹುಸಿತೋರಿಕೆಯಾದರೂ ಹೀಗೆ ತನ್ನ ಆಶ್ರಯವನ್ನು ಬಿಟ್ಟು ಬೇರೆಯಾಗಿರುವಂತೆ, ತನ್ನ ಆಶ್ರಯಕ್ಕಿಂತ ಬೇರೆಯ ಸ್ವಭಾವವಾಗಿರುವಂತೆ, ಮತ್ತು ತನ್ನ ಆಶ್ರಯಕ್ಕೆ ತನ್ನ ಸ್ವಭಾವವನ್ನು ಅಂಟಿಸಿರುವಂತೆ ಕಾಣುವದೆಂಬುದಕ್ಕೆ ದೃಷ್ಟಾಂತವುಂಟೆ ? ಈ ಪ್ರಶ್ನೆಗಳಿಗೆಲ್ಲ 'ದರ್ಪಣದೃಶ್ಯಮಾನನಗರೀತುಲ್ಯಮ್' ಕನ್ನಡಿಯಲ್ಲಿ ಕಾಣುವ ನಗರಿಯಂತೆ- ಎಂಬ ವಿಶೇಷಣವು ಉತ್ತರವನ್ನು ಒದಗಿಸುತ್ತದೆ. ಊರ ಹೆಬ್ಬಾಗಿಲಿನಲ್ಲಿ ದೊಡ್ಡದೊಂದು ನಿಲುಗನ್ನಡಿಯನ್ನಿಟ್ಟಿದ್ದರೆ, ಊರಿನ ಬೀದಿಗಳೂ, ಅಂಗಡಿಗಳೂ, ಅವುಗಳಲ್ಲಿಟ್ಟಿರುವ ಮಾರಾಟದ ವಸ್ತುಗಳೂ, ಊರಿನ ಮನೆಗಳೂ, ಬೀದಿಯಲ್ಲಿ ಓಡಾಡುವ ಪ್ರಾಣಿಗಳೂ, ಮನುಷ್ಯರೂ, ಎಲ್ಲವೂ ಆ ಕನ್ನಡಿಯಲ್ಲಿ ಹರಡಿಕೊಂಡು ಒಂದಕ್ಕೊಂದು ಹತ್ತಿರವಾಗಿ ಅಥವಾ ದೂರವಾಗಿ, ಆಯಾ ಗುಣಕ್ರಿಯೆಗಳಿಂದೊಡಗೂಡಿ ಕಾಣುವದಿಲ್ಲವೆ ? ಆದರೆ ಈ ವಸ್ತುಗಳ ಆಕಾರ, ಗಾತ್ರ, ಗುಣ, ದೇಶದಲ್ಲಿ ಕಾಣುವ ದೂರಹತ್ತಿರವೆಂಬ ಕ್ರಮ, ಕಾಲಕೃತವಾದ ಸಕ್ರಮಚಲನೆ- ಇವುಗಳಲ್ಲಿ ಯಾವದಾದರೂ ಆ ಕನ್ನಡಿಯ ಏಕತ್ವಕ್ಕಾಗಲಿ ಸ್ವಚ್ಛತೆಗಾಗಲಿ ಅಡ್ಡಿಯಾಗಿರುವವೆ ? ಅವುಗಳೆಲ್ಲ ಬರಿಯ ತೋರಿಕೆ, ಇರುವದೆಲ್ಲ ಕನ್ನಡಿಯೊಂದೇ- ಎಂದು ವಿವೇಕಿಗಳಿಗೆ ಆಗಲೂ ಗೊತ್ತಾಗಿರುವದಲ್ಲವೆ ? ಇದರಂತೆಯೇ ಆತ್ಮನಲ್ಲಿ ವ್ಯಾಕೃತಪ್ರಪಂಚವು ಅವನಿಗಿಂತ ಹೊರಗೆ ಹುಟ್ಟಿಕೊಂಡಂತೆಯೂ ಅವನಿಗಿಂತ ಬೇರೆಯೇ, ಬೇರೆಯ ಸ್ವಭಾವದ್ದೇ ಎಂತಲೂ ಕಂಡರೂ ನಿಜವಾಗಿ ಅದೆಲ್ಲವೂ ಪರಮಾತ್ಮನೇ ಎಂದು ಶಾಸ್ತ್ರಾಚಾರ್ಯರ ಮಾತಿನಿಂದ ನಂಬಬಹುದಾಗಿದೆ.

ಅಂತೂ ಒಟ್ಟಿನಲ್ಲಿ ನಾಮರೂಪಗಳು ಪರಮಾರ್ಥವಾಗಿ ಪರಮಾತ್ಮನೇ ಆಗಿದ್ದರೂ ಅವಿದ್ಯಾದೃಷ್ಟಿಯವರಿಗೆ ನಾಮರೂಪಗಳೆಂಬ ಹುಸಿತೋರಿಕೆಯ ರೂಪದಿಂದ ಕಾಣಿಸಿಕೊಳ್ಳುವದರಿಂದ ಇದನ್ನು **ಮಾಯೆ** ಎಂದು ಕರೆಯುತ್ತಾರೆ. 'ಮಾಯಾಂ ತು ಪ್ರಕೃತಿಂ ವಿದ್ಯಾತ್' (ಶ್ವೇ.೪-೪೮) ಪ್ರಕೃತಿಯನ್ನು ಮಾಯೆಯೆಂದು ತಿಳಿಯಬೇಕು- ಎಂಬ ಶ್ರುತಿಯು ಇದಕ್ಕೆ ಪ್ರಮಾಣವು.

ನಾಮರೂಪಗಳ ಬೀಜಸ್ಥಿತಿಯನ್ನು **ಮಾಯೆ**ಯೆಂದು ಕರೆಯುವದಕ್ಕೆ 'ಇದು ಅವಿದ್ಯಾಕಲ್ಪಿತವಾಗಿರುವ ಹುಸಿತೋರಿಕೆಯಾಗಿದೆ; ಮಾಯೆಯಂತೆ ತಾನು ತೋರುವ ಕಾಲಕ್ಕೆ ಪರಮಸತ್ಯವಾಗಿ ಕಂಡರೂ ಕಾಲಾನುಕಾಲಕ್ಕೆ ಸ್ವಲ್ಪವೂ ಉಳಿಯದಂತೆ ಬಾಧಿತವಾಗಿಬಿಡುತ್ತದೆ'- ಎಂಬುದೊಂದು ಕಾರಣವು. ಮಾಯೆಯು ಹೇಗೆ ಮಾಯಾವಿಯಾದವನ ಅಧೀನವಾಗಿರುವದೋ ಹಾಗೆ ಇದು ಪರಮೇಶ್ವರನ ಅಧೀನದಲ್ಲಿರುತ್ತದೆ ಎಂಬುದು ಮತ್ತೊಂದು ಕಾರಣವು. ಜೀವನು ಅವಿದ್ಯೆಯ ಅವಸ್ಥೆಯಲ್ಲಿ ಈ ಮಾಯೆಯನ್ನು ಕಾಣುತ್ತಿರುವನು ; ಈ ಮಾಯೆಯಿಂದ ಮೋಹಿತನಾಗಿರುವನು. ಆದರೆ ಸದ್ಗುರುವಿನ ಉಪದೇಶದಿಂದಲೂ ಪರಮೇಶ್ವರನ ಅನುಗ್ರಹದಿಂದಲೂ ಈ ಮಾಯೆಯು ಮೈಗೆರೆಯಲು 'ನಾನು ಜೀವನಲ್ಲ, ಅದ್ವಿತೀಯನಾದ ನಿತ್ಯಶುದ್ಧಬುದ್ಧಮುಕ್ತಸ್ವಭಾವನಾದ ಪರಮಾತ್ಮನೇ' ಎಂಬುದನ್ನು ಕಂಡುಕೊಳ್ಳುವನು. ಆದ್ದರಿಂದಲೂ ನಾಮರೂಪಾತ್ಮಕವಾದ ಈ ಸಂಸಾರ ಬೀಜವನ್ನು ಮಾಯೆ ಎಂದು ಕರೆಯುತ್ತಾರೆ. ಇಲ್ಲಿ ಒಂದು ಶಂಕೆ : ನಮ್ಮ ಆತ್ಮನೇ ಪರಮಾತ್ಮನಾಗಿದ್ದರೆ, ಮತ್ತು ಆ ಪರಮಾತ್ಮನಲ್ಲಿಯೇ ನಾಮರೂಪಗಳ ಪ್ರಪಂಚವೆಲ್ಲವೂ ಅವಿದ್ಯೆಯಿಂದ ಕಲ್ಪಿತವಾಗಿದ್ದರೆ, ಈ ಪ್ರಪಂಚವೆಲ್ಲವೂ ನನ್ನಲ್ಲಿ ಕಾಣುತ್ತಿರುವ ಬರಿಯ ತೋರಿಕೆ ಎಂದು ನಮಗೇಕೆ ತಿಳಿಯಬರುವದಿಲ್ಲ ? ನಮ್ಮ ಹೊರಗೇ ಈ ವಿಶ್ವವೆಲ್ಲವೂ ಇರುವಂತೆಯೂ ನಾವೇ ಈ ವಿಶ್ವದೊಳಗೆ ಇದ್ದುಕೊಂಡು ಸಂಸಾರವನ್ನು ಅನುಭವಿಸುತ್ತಿರುವಂತೆಯೂ ತೋರುತ್ತಿರುವದೇಕೆ? ಇದೂ ಅಲ್ಲದೆ, ಪರಮಾತ್ಮಸ್ವರೂಪವೇ ಆಗಿರುವ ನಮ್ಮಲ್ಲಿ ಅವಿದ್ಯೆ ಹೇಗೆ, ಏತಕ್ಕೆ, ಯಾವಾಗ ಬಂದುಸೇರಿಕೊಂಡಿತು ? ಸರ್ವಜ್ಞನಾದ ಈಶ್ವರನಾದ ಪರಮಾತ್ಮನಿಗೆ ಅವಿದ್ಯೆಯು ಬಂದು ಮೆಟ್ಟಿಕೊಂಡದ್ದು ಹೇಗೆ ?

ಈ ಶಂಕೆಗೆ ಪರಿಹಾರವನ್ನು 'ಯಥಾ ನಿದ್ರಯಾ' ನಿದ್ರೆಯಿಂದ ಹೊರಗೆ ಕಾಣುವಂತೆ- ಎಂಬ ದೃಷ್ಟಾಂತದಿಂದ ಹೇಳಿರುತ್ತಾರೆ. ನಿದ್ರೆಯಲ್ಲಿ ಕನಸನ್ನು ಕಾಣುವಾತನಿಗೆ ತೋರುತ್ತಿರುವ ಕನಸಿನ ಪ್ರಪಂಚವು ಅವನ ಹೊರಗೇ ಇರುವಂತೆ ಭಾವನೆಯಾಗಿರುತ್ತದೆ ; ತಾನು ಆ ಪ್ರಪಂಚದ ಒಳಗೆ ಇದ್ದುಕೊಂಡೇ ಸಂಸಾರವನ್ನು

ಮಾಡುತ್ತಿರುವಂತೆ ತೋರುತ್ತಿರುತ್ತದೆ. ಆ ಕನಸಿನ ಪ್ರಪಂಚದಲ್ಲಿ ತೋರುವ ಯಾವ ವಸ್ತುಗಳೂ ಹುಸಿತೋರಿಕೆ ಎಂದು ಆಗ ಮನಸ್ಸಿಗೆ ಬರುವದಿಲ್ಲ. ಅಲ್ಲಿರುವ ವಸ್ತುಗಳ ತತ್ತ್ವವನ್ನು ನಾವು ವಿಚಾರಿಸಿಕೊಂಡು ಅರಿತುಕೊಳ್ಳಬೇಕಾಗಿರುತ್ತದೆ ; ಅವುಗಳಲ್ಲಿ ನಮಗೆ ಬೇಕಾದವನ್ನು ಪ್ರಯತ್ನಪೂರ್ವಕವಾಗಿಯೇ ಬಳಸಿಕೊಳ್ಳಬೇಕಾಗುತ್ತದೆ ; ಬೇಡವಾದವನ್ನು ಬಿಟ್ಟು ತೊಲಗಬೇಕಾಗುತ್ತದೆ, ಅಥವಾ ಅವನ್ನೇ ಅತ್ತಸರಿಯಿಸಬೇಕಾಗುತ್ತದೆ. ಅಲ್ಲವೆ ? ''ಇದೆಲ್ಲವೂ ಕನಸು ; ನನ್ನ ನಿದ್ರೆಯಿಂದ ತೋರುವ ಹುಸಿತೋರಿಕೆ'' ಎಂಬ ಅರಿವೇನೂ ಅಲ್ಲಿರುವದಿಲ್ಲ. ಅಲ್ಲವೆ ? ಇಷ್ಟೆಲ್ಲ ಆದರೂ ಎಚ್ಚರವಾದರೆ ಸಾಕು, ಕೂಡಲೆ ಅಲ್ಲಿರುವ ನಾಮರೂಪಾತ್ಮಕವಾದ ಪ್ರಪಂಚವಾಗಲಿ, ಅವುಗಳಿಂದ ನಮಗೆ ಆಗುವ ಶೀತೋಷ್ಣಾದಿವೇದನೆಗಳಾಗಲಿ, ಅವುಗಳಿಂದಾಗುವ ಸುಖದುಃಖಗಳಾಗಲಿ, ಒಂದಿಷ್ಟೂ ಉಳಿಯದಂತೆ ಹೋಗಿಬಿಡುತ್ತವೆ. ಅಲ್ಲವೆ ? ಆಗ್ಗೆ ನಮಗೆ ಕನಸಿನ ಪ್ರಪಂಚವು ಹೇಗೆ, ಏತಕ್ಕೆ, ಯಾವಾಗ ಬಂದು ಗಂಟುಬಿದ್ದಿತೆಂಬುದು ತಿಳಿಯದೆ ಇದ್ದರೂ ಎಚ್ಚರವಾಗುತ್ತಲೂ ಕನಸು, ಕನಸಿನ ಪ್ರಪಂಚ, ಆ ಪ್ರಪಂಚದ ವಿಷಯಕ್ಕೆ ನಮಗಿದ್ದ ತಪ್ಪುಭಾವನೆ- ಎಲ್ಲವೂ ಹೇಳಹೆಸರಿಲ್ಲದಂತೆ ಮಾಯವಾಗಿ ಬಿಡುತ್ತದೆಯಷ್ಟೆ ? ಇದರಂತೆ ಈಗ ನಮ್ಮ ಹೊರಗೆ ಇರುವಂತೆ ತೋರುವ ಪ್ರಪಂಚ, ಇದರಿಂದ ನಮಗೆ ಆಗುತ್ತಿರುವ ವೇದನೆಗಳು, ಸುಖದುಃಖಗಳು, ಇದರ ವಿಷಯಕ್ಕೆ ನಮಗಿರುವ ಅಜ್ಞಾನ- ಇವೆಲ್ಲವೂ ಶ್ರೀಗುರುಮೂರ್ತಿಯಾದ ಶ್ರೀದಕ್ಷಿಣಾಮೂರ್ತಿಯ ಅನುಗ್ರಹದಿಂದ ನಮ್ಮ ಆತ್ಮತತ್ತ್ವದ ಸಾಕ್ಷಾತ್ಕಾರವಾದಾಗ ಸ್ವಲ್ಪವೂ ಉಳಿಯುವದಿಲ್ಲ ; ಆಗ ಈ ಶಂಕೆಯೂ ನಿರಾಧಾರವೆಂದು ನಿಶ್ಚಿತವಾಗಿ ಬಿಡುವದು. ಏಕೆಂದರೆ ಅದ್ವಯಾತ್ಮನೇ ಎಂದೆಂದಿಗೂ ನನ್ನ ಪರಮಾರ್ಥಾತ್ಮನು- ಎಂಬುದು ಆಗ ಮನದಟ್ಟಾಗಿ ಬಿಟ್ಟಿರುತ್ತದೆ.

ಇನ್ನು ಅದ್ವಯನಾದ ಆತ್ಮನೆಂದರೆ ಏನು ? ಅವನನ್ನು ಸಾಕ್ಷಾತ್ಕರಿಸಿ ಕೊಳ್ಳುವದೆಂದರೇನು ? ಎಂಬೀ ಎರಡು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವದು ಉಳಿದಿರುತ್ತದೆ. ದ್ವಯವೆಂದರೆ ಗ್ರಾಹ್ಯ, ಗ್ರಾಹಕ- ಅರಿಯುವದು, ಅರಿಯಲ್ಪಡುವದು- ಎಂಬ ರೂಪದಲ್ಲಿ ತೋರುವ ಎಂಗಡವು. ಇಲ್ಲಿಯೂ ಕನಸಿನ ದೃಷ್ಟಾಂತವನ್ನು ಮನಸ್ಸಿಗೆ ತಂದುಕೊಳ್ಳಬೇಕು. ಕಣ್ಣಿನಿಂದ ರೂಪವನ್ನು ನೋಡುವದು, ಕಿವಿಯಿಂದ ಶಬ್ದವನ್ನು ಕೇಳುವದು, ಮೂಗಿನಿಂದ ಗಂಧವನ್ನು ಮೂಸುವದು, ಮನಸ್ಸಿನಿಂದ ವಿಷಯವನ್ನು ಆಲೋಚಿಸುವದು- ಹೀಗೆ ಒಳಗೆ ಅರಿಯುವ ಕರಣಗಳೂ ಹೊರಗೆ ಅವುಗಳಿಂದ ಅರಿಯಲ್ಪಡುವ ವಿಷಯಗಳೂ ಕನಸಿನಲ್ಲಿ ತೋರುತ್ತಿದ್ದರೂ ಆಗ ಇದ್ದವನು ಕನಸನ್ನು

ಕಂಡವನೊಬ್ಬನೇ ; ಅವನಲ್ಲಿ ಗ್ರಾಹ್ಯಗ್ರಾಹಕಭೇದವು ಯಾವದೂ ನಿಜವಾಗಿರಲಿಲ್ಲ. ಆ ಗ್ರಾಹ್ಯಗ್ರಾಹಕಪ್ರಪಂಚವು ಅವನ ಹೊರಗೂ ಇರಲಿಲ್ಲ. ಕನಸನ್ನು ಕಂಡ ಆತ್ಮನೊಬ್ಬನೇ ಅಲ್ಲಿ ಗ್ರಾಹ್ಯಗ್ರಾಹಕರೂಪದ 'ದ್ವಯ' ಪ್ರಪಂಚವಾಗಿ ತೋರಿಕೊಂಡಿದ್ದನು. ಅಲ್ಲವೆ ? ಅದರಂತೆ ಎಚ್ಚರದಲ್ಲಿಯೂ ಗ್ರಾಹ್ಯಗ್ರಾಹಕಗಳೆಂದು ವಿಭಕ್ತವಾಗಿ ತೋರುತ್ತಿರುವ ವಿಶ್ವವು ಅದ್ವಯನಾದ ಆತ್ಮಮಾತ್ರವೇ ಎಂದು ಜ್ಞಾನವಾಗುತ್ತಲೂ ತೋರಿಬಿಡುತ್ತದೆ. ಕನಸು ಹೋಗುತ್ತಲೂ ಎಚ್ಚರವು ಬಂದಮಾತ್ರದಿಂದಲೇ ಕನಸಿನ ತತ್ತ್ವವು ಅದ್ವಯಮಾತ್ರವೆಂಬ ಅರಿವು ಹೇಗೆ ಆಯಿತೋ ಹಾಗೆಯೇ ಗುರುದೇವತಾನುಗ್ರಹದಿಂದ ನಮಗೆ ಪರಮಾರ್ಥಜ್ಞಾನವಾದ ಸಮಸಮಯದಲ್ಲಿಯೇ 'ನಾನು ಎಂದೆಂದಿಗೂ ಅದ್ವಯಾತ್ಮನು' ಎಂಬ ಅನುಭವವುಂಟಾಗಿಬಿಡುತ್ತದೆ. ಇದೇ **ಅದ್ವಯಾತ್ಮನ ಸಾಕ್ಷಾತ್ಕಾರವು.**

ಈ ಸಾಕ್ಷಾತ್ಕಾರವಾಗುವದಕ್ಕೆ ಶ್ರೀಗುರುಮೂರ್ತಿಯ ರೂಪದಲ್ಲಿರುವ ಶ್ರೀದಕ್ಷಿಣಾಮೂರ್ತಿಯಾದ ಪರಮೇಶ್ವರನನ್ನು ನಾವು ನಿರಂತರವಾಗಿ ಧ್ಯಾನ ಮಾಡುತ್ತಿರಬೇಕು. 'ಯಾರಿಗೆ ಪರಮೇಶ್ವರನಲ್ಲಿ ಪರಭಕ್ತಿಯಿರುವದೋ, ಗುರುಪರಮೇಶ್ವರರಿಗೆ ಒಂದಿಷ್ಟೂ ಭೇದವಿಲ್ಲವೆಂಬ ದೃಢವಿಶ್ವಾಸವೂ ಇರುವದೋ ಅಂಥ ಶ್ರದ್ಧಾವಂತರಿಗೆ ಮಾತ್ರವೇ ವೇದಾಂತೋಪದೇಶದ ತತ್ತ್ವಗಳು ಮನದಟ್ಟಾಗುವವು' ಎಂದು ಶ್ರುತಿವಾಕ್ಯವಿದೆ. ಇದನ್ನು ತಿಳಿಯಹೇಳುವದಕ್ಕೆ ಈ ಸ್ತೋತ್ರದಲ್ಲಿ **'ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ'** ಎಂಬ ಧ್ರುವಪದವನ್ನು ಪ್ರತಿಶ್ಲೋಕದಲ್ಲಿಯೂ ಇಟ್ಟಿದೆ. ಆದ್ದರಿಂದ ವಾಙ್ಮನಃಕಾಯಗಳಿಂದ ಪರಮೇಶ್ವರಾಭಿನ್ನನಾದ ಗುರುಮೂರ್ತಿಯನ್ನು ಶ್ರದ್ಧಾಭಕ್ತಿಯಿಂದ ಪೂಜಿಸುತ್ತಿರಬೇಕು.

ಃಃಃಃಃಃಃಃಃ

## ೨. ಪರಮಾತ್ಮನ ಜಗತ್ಕಾರಣತ್ವ

**ಬೀಜಸ್ಯಾನ್ತರಿವಾಙ್ಕುರೋ ಜಗದಿದಂ ಪ್ರಾಙ್ನಿರ್ವಿಕಲ್ಪಂ ಪುನ-**

**ರ್ಮಾಯಾಕಲ್ಪಿತದೇಶಕಾಲಕಲನಾವೈಚಿತ್ರ್ಯಚಿತ್ರೀಕೃತಮ್ ।**

**ಮಾಯಾವೀವ ವಿಜೃಮ್ಭಯತ್ಯಪಿ ಮಹಾಯೋಗೀವ ಯಃ ಸ್ವೇಚ್ಛಯಾ**

**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥**

ಪರಮಾತ್ಮನು ಯಾವಾಗಲೂ ಅದ್ವಿತೀಯನೂ ಅದ್ವಯನೂ ಆಗಿರುತ್ತಾನೆ. ಅವನಿಗೆ ಎರಡನೆಯದೆನಿಸಿಕೊಳ್ಳುವದಕ್ಕೆ ತಕ್ಕದ್ದು ಯಾವದೊಂದೂ ಇರುವದೇ

ಇಲ್ಲ ; ಅವನೊಳಗೆ ಗ್ರಾಹ್ಯಗ್ರಾಹಕರೂಪವಾದ ದ್ವಯವೂ ಇರುವದಿಲ್ಲ. ಆದರೂ ಅವಿದ್ಯಾಕಲ್ಪಿತವಾದ ಮಾಯೆಯಿಂದ, ಅವನು ತನಗೆರಡನೆಯದಾಗಿರುವ ವಿಶ್ವದಿಂದೊಡಗೂಡಿರುವ ಕಾಣುತ್ತಿರುತ್ತಾನೆ. ಅವಿಭಕ್ತನಾದ ತನ್ನಲ್ಲಿ ಗ್ರಾಹ್ಯ ಗ್ರಾಹಕವಿಭಾಗವಿರುವಂತೆಯೂ ತೋರುತ್ತಿರುತ್ತಾನೆ. ನಿದ್ರೆಯಿಂದ ಕನಸು ಕಾಣುತ್ತಿರುವವನು ತಾನೊಬ್ಬನೇ ಇರುತ್ತಿದ್ದರೂ ತನಗಿಂತ ಬೇರೆಯಾದ ಪ್ರಪಂಚವನ್ನು ಕಾಣುತ್ತಿರುವಂತೆ ಅದ್ವಿತೀಯಪರಮಾತ್ಮಾಭಿನ್ನನಾದ ಜೀವನು ತನ್ನಲ್ಲಿಯೇ ಬಗೆಬಗೆಯಾಗಿರುವ ಈ ಪ್ರಪಂಚವನ್ನು ಕಾಣುತ್ತಿರುತ್ತಾನೆ. ಗುರುದೇವತಾನುಗ್ರಹದಿಂದ ತತ್ತ್ವಾರ್ಥವನ್ನು ಅರಿತುಕೊಂಡರೆ, ಎಚ್ಚತ್ತವನಿಗೆ ಕನಸೂ ಕನಸಿನ ಪ್ರಪಂಚವೂ ಒರಸಿಹೋಗುವಂತೆ, ಅದ್ವಯನಾದ ತಾನೊಬ್ಬನೇ ಇರುವೆನೆಂಬ ಅನುಭವುಂಟಾಗುತ್ತದೆ- ಎಂದು ಮೊದಲನೆಯ ಶ್ಲೋಕದಲ್ಲಿ ಹೇಳಿದ್ದಾಯಿತು. ಇನ್ನು ಈ ಅಭಿಪ್ರಾಯವನ್ನು ಇಲ್ಲಿಂದ ಮೊದಲಾಗಿರುವ ಶ್ಲೋಕಗಳಲ್ಲಿ ಉಪಪತ್ತಿಯಿಂದ ತೋರಿಸಿಕೊಡಲಾಗುತ್ತದೆ.

''ಈ ಜಗತ್ತು ಮೊದಲು- ಬೀಜದಲ್ಲಿ ಅಂಕುರವು ಇರುವಂತೆ- ನಿರ್ವಿಕಲ್ಪವಾಗಿದ್ದು ಮತ್ತೆ ಮಾಯೆಯಿಂದ ಕಲ್ಪಿತವಾದ ದೇಶ, ಕಾಲ, ಕಲನಾ- ಇವುಗಳ ವೈಚಿತ್ರ್ಯದಿಂದ ಚಿತ್ರಿಸಲ್ಪಟ್ಟಿರುವುದಾಗಿ ಮಾಯಾವಿಯಂತೆ, ಯೋಗಿಯಂತೆ ಯಾವಾತನು ಸ್ವೇಚ್ಛೆಯಿಂದ ಹೊರಹೊಮ್ಮಿಸುತ್ತಾನೋ ಆ ಶ್ರೀಗುರುಮೂರ್ತಿಯಾದ ಶ್ರೀದಕ್ಷಿಣಾಮೂರ್ತಿಗೆ ಈ ನಮಸ್ಕಾರ !'' ಎಂಬುದು ಶ್ಲೋಕದ ಅಕ್ಷರಾರ್ಥ. ಈಗ ಇಲ್ಲಿರುವ ವಿಶೇಷಣಗಳನ್ನು ಒಂದೊಂದಾಗಿ ಬಿಡಿಸಿ ತಿಳಿಯುವದಕ್ಕೆ ಯತ್ನಿಸೋಣ.

ಜಗತ್ತು ಪರಮಾತ್ಮನಲ್ಲಿ ಹೇಗಿರುತ್ತದೆ ? ಎಂದರೆ ದರ್ಪಣದಲ್ಲಿ ತೋರುವ ನಗರಿಯಂತೆ' ಎಂದು ಹಿಂದೆ ಹೇಳಿರುವದು ವ್ಯಾಕೃತಜಗತ್ತಿನ ವಿಷಯ. ಆದರೆ ಅದು ನಾಮರೂಪಗಳಿಂದ ವ್ಯಾಕೃತವಾಗುವ ಮುಂಚೆ ಆತ್ಮನಲ್ಲಿ ಹೇಗಿರುತ್ತದೆ ?- ಎಂಬ ಪ್ರಶ್ನೆಗೆ ಇಲ್ಲಿ 'ಬೀಜದಲ್ಲಿ ಅಂಕುರವಿರುವಂತೆ' ಎಂಬ ದೃಷ್ಟಾಂತವನ್ನು ಕೊಟ್ಟಿರುತ್ತದೆ. ಬೀಜದಿಂದ ಮೊಳಕೆ, ಮೊಳಕೆಯಿಂದ ಗಿಡ ಅಥವಾ ಮರ, ಕೊಂಬೆ, ಚಿಗುರು, ಎಲೆ, ಹೂ, ಹಣ್ಣು- ಮುಂತಾಗಿ ಬಗೆಬಗೆಯಾಗಿ ಕಾರ್ಯವು ಉಂಟಾಗುವಂತೆ ಪರಮಾತ್ಮನಿಂದ ಈ ಜಗತ್ತು ಉಂಟಾಗಿರುತ್ತದೆ. ಮರವು ಬೀಜದಲ್ಲಿ ಅವ್ಯಕ್ತವಾಗಿದ್ದದ್ದಲ್ಲವೆ, ಮೊಳಕೆಯೇ ಮುಂತಾದ ರೂಪದಿಂದ ತೋರಿಕೊಂಡಿರುವದು ? ಹಾಗೆಯೇ ಪರಮಾತ್ಮನಲ್ಲಿ ಯಾವ ವಿಕಲ್ಪವೂ ಇಲ್ಲದೆ ಇಂಥದ್ದು ಅಂಥದ್ದು- ಎಂಬ ವಿಂಗಡವಿಲ್ಲದೆ, ಇದ್ದದ್ದೇ ಮತ್ತೆ ವಿಕಲ್ಪವಾಗಿ ಸೃಷ್ಟಿ

ಕಾಲದಲ್ಲಿ ತೋರಿಕೊಳ್ಳುತ್ತದೆ. ಈ ಜಗತ್ತು ಎಂದರೆ- ನಮಗೆ ಅನುಭವದಿಂದ ತಿಳಿದುಬರುವ ಆಧ್ಯಾತ್ಮಿಕಾಧಿಭೌತಿಕಾಧಿದೈವಿಕರೂಪದಿಂದ ವಿಂಗಡವಾಗಿ ತೋರುತ್ತಿರುವ ಇದು - ಮೊದಲು ದ್ರವ್ಯ, ಗುಣ, ಕ್ರಿಯೆ, ಜಾತಿ, ಸಂಬಂಧ- ಮುಂತಾದ ಯಾವ ವಿಕಲ್ಪವೂ ತೋರದಂತೆ, ಮರವು ಬೀಜವೇ ಆಗಿದ್ದುಕೊಂಡಿದ್ದಂತೆ, ಪರಮಾತ್ಮನೇ ಆಗಿರುತ್ತದೆ. ಆಮೇಲೆ ಸೃಷ್ಟಿಯಾಗಲು ದೇಶ, ಕಾಲ, ಕ್ರಿಯೆ- ಇವುಗಳಿಂದೊಡಗೂಡಿ ಬಗೆಬಗೆಯಾಗಿ ತೋರಿಕೊಳ್ಳುತ್ತಿರುತ್ತದೆ. ಕಾರ್ಯವು ಕಾರಣಕ್ಕಿಂತ ಬೇರೆಯಾಗಿರುವದಿಲ್ಲವೆಂಬುದು ಮಣ್ಣಿನಿಂದಾಗುವ ಮಡಕೆ, ಕುಡಿಕೆ- ಮುಂತಾದವುಗಳ ಪರೀಕ್ಷೆಯಿಂದಲೂ ಚಿನ್ನದಿಂದಾಗುವ ಕಡಗ, ಒಂಟಿ, ಅಸಲಿ- ಮುಂತಾದ ಒಡವೆಗಳ ಪರೀಕ್ಷೆಯಿಂದಲೂ ಗೊತ್ತಾಗುತ್ತದೆ. ಆದ್ದರಿಂದ ಅದ್ವಯನಾದ ಆತ್ಮನಿಗಿಂತ ಈ ವಿಚಿತ್ರವಾದ ಜಗತ್ತು ಬೇರೆಯಲ್ಲವೆಂದಾಯಿತು.

ಆದರೆ ಇಲ್ಲಿ ಒಂದು **ಶಂಕೆ** ಎದ್ದುಕೊಳ್ಳುತ್ತದೆ : ಮಣ್ಣಿನಿಂದಾದ ಮಡಕೆ, ಕುಡಿಕೆ- ಮುಂತಾದವುಗಳು ಬರಿಯ ಮಣ್ಣೇ ಆಗಿರುವದಾದರೂ ಬೀಜದಿಂದ ಹುಟ್ಟಿದ ಮರವು ಬರಿಯ ಬೀಜರೂಪದಲ್ಲಿರುವದಿಲ್ಲ ; ಇದಲ್ಲದೆ ಮರದ ಮತ್ತು ಮರದಿಂದ ಹುಟ್ಟಿದ ಎಲೆ, ಹೂ, ಹಣ್ಣುಗಳ- ರೂಪರಸಗಂಧಾದಿಗಳು ಬೀಜದಲ್ಲಿ ಕಾಣಿಸುವದಿಲ್ಲ. ಆದ್ದರಿಂದ ಇವೆಲ್ಲವೂ ಬೀಜದಲ್ಲಿಯೇ ಇದ್ದವೆಂದು ಹೇಳುವದಕ್ಕೆ ಬರುವದಿಲ್ಲ. ಬೀಜಕ್ಕೆ ಹಾಕಿದ ಸಹಕಾರಿಗಳಾದ ನೀರು, ಗೊಬ್ಬರ- ಮುಂತಾದವು ಗಿಡವು ಬೆಳೆಯುವದಕ್ಕೆ ಬೇಕಾಗಿರುವ ಬಿಸಿಲು ಮುಂತಾದವುಗಳೂ ಅದಕ್ಕೆ ತಮ್ಮ ತಮ್ಮ ಸಹಾಯವನ್ನು ಮಾಡುತ್ತಿರುತ್ತವೆ. ಆದರೆ ಅದ್ವಿತೀಯನಾದ ಆತ್ಮನಿಂದಲೇ ಈ ಬಗೆಬಗೆಯಾಗಿ ತೋರುತ್ತಿರುವ ಜಗತ್ತು ಉಂಟಾಯಿತೆಂದು ಹೇಗೆ ನಂಬುವದು? ಪರಮಾತ್ಮನ ಜೊತೆಗೆ ಯಾವದೋ ಒಂದು ಉಪಾದಾನಕಾರಣವೂ ಇದ್ದಲ್ಲದೆ ಇದು ಉಂಟಾಗಲಾರದೆಂದು ಯುಕ್ತಿಗೆ ತೋರುತ್ತದೆ. ಪರಮೇಶ್ವರನಿಗಿಂತ ಬೇರೆಯಾದ ಪ್ರಕೃತಿ ಅಥವಾ ಪ್ರಧಾನವು ಜಗತ್ತಿಗೆ ಉಪಾದಾನವಾಗಿರುವದೆಂದು **ಸಾಂಖ್ಯರು** ಹೇಳುತ್ತಿರುತ್ತಾರೆ. ಪರಮಾಣುಗಳೇ ಜಗತ್ತಿನ ಉಪಾದಾನವೆಂದು **ವೈಶೇಷಿಕರು** ಅಭಿಪ್ರಾಯಪಟ್ಟಿರುತ್ತಾರೆ. ಹೀಗಿರುವಲ್ಲಿ ಜಗತ್ತು ಆತ್ಮನಿಂದಲೇ ಉಂಟಾಯಿತೆನ್ನುವದು ಸರಿಯೆ ? ತನ್ನಲ್ಲಿ ಯಾವ ಅವಯವ ವಿಭಾಗವೂ ಇಲ್ಲದ, ತನಗೆ ಯಾವ ಸಹಾಯಕಸಾಮಗ್ರಿಯನ್ನೂ ಬಯಸದ, ಪರಮಾತ್ಮನು ಜಗತ್ತನ್ನು ಸೃಷ್ಟಿಮಾಡಿದನೆಂದು ಹೇಗೆ ಒಪ್ಪುವದು ? ಇದಲ್ಲದೆ ಇಲ್ಲಿ ಜಡಪದಾರ್ಥಗಳೇ ಅಲ್ಲದೆ ಚೇತನರಾದ ಜೀವರೂ ಇರುತ್ತಾರೆ. ನಿತ್ಯಚೈತನ್ಯ

ಸ್ವರೂಪನಾದ ಆ ಮಹಾದೇವನು, ತನ್ನನ್ನು ತಾನೇ ಅಚೇತನಪದಾರ್ಥಗಳಾಗಿ ಮಾರ್ಪಡಿಸಿಕೊಂಡನೆಂದೂ, ಸರ್ವಜ್ಞನಾದ ಸರ್ವಶಕ್ತನಾದ ಆ ಪರಮೇಶ್ವರನು ದೇಶಕಾಲನಿಮಿತ್ತಗಳನ್ನು ಅನುಸರಿಸಿ, ಅಲ್ಪಫಲಗಳನು ಕೊಡುವ ಅಲ್ಪಕ್ರಿಯೆಗಳನ್ನು ತನ್ನ ಅಲ್ಪಮತಿಯಿಂದ ಮಾಡಿ ಸುಖದುಃಖಗಳನ್ನನುಭವಿಸುತ್ತಿರುವ ಜೀವರುಗಳಾಗಿ ಮಾರ್ಪಡಿಸಿಕೊಂಡನೆಂದೂ ಹೇಳಬಹುದೆ ? ಕನಸಿನಲ್ಲಿ ತಾನೊಬ್ಬನೇ ಇದ್ದರೂ ಬಗೆಬಗೆಯಾಗಿ ಕಾಣುವ ಜಗತ್ತನ್ನು ಕಾಣುವಂತೆಯೂ ಆ ಜಗತ್ತಿನೊಳಗೆ ತಾನು ವ್ಯವಹರಿಸಿರುವಂತೆಯೂ ಕಾಣುವದುಂಟೆಂಬ ದೃಷ್ಟಾಂತ ಬಲದಿಂದ ಸರ್ವಜ್ಞನಾದ ಸರ್ವಶಕ್ತನಾದ ಪರಮೇಶ್ವರನಿಗೆ ಇಂಥ ಅವಿದ್ಯಾನಿದ್ರೆಯು ಬಂದಿದೆಯೆಂದಾಗಲಿ, ಆ ನಿದ್ರೆಯೊಳಗೆ ಜಗತ್ತಿನ ಮತ್ತು ತನ್ನ ಸಂಸಾರದ ಕನಸನ್ನು ಕಾಣುವ ಅವಸ್ಥೆಯನ್ನು ಅವನೇ ತಂದುಕೊಂಡಿರುವನೆಂದಾಗಲಿ ಹೇಳುವದು ಸರಿಯಾಗಿ ಕಾಣುವದಿಲ್ಲ. ಬಗೆಬಗೆಯ ಕಾರಣಗಳಿಂದ ಅವಿದ್ಯಾಮೋಹವು ಜೀವರುಗಳಿಗೆ ಬಂದು ನಿದ್ರಾವಶದಿಂದ ಕನಸನ್ನು ಕಾಣಬಹುದು. ಅವರಿಗೆ 'ನಾನು ಕನಸನ್ನು ಕಾಣುತ್ತಿದೇನೆ' ಎಂದುಕೂಡ ಆಗ್ಗೆ ತಿಳಿದಿರುವದಿಲ್ಲ. ಆ ದೃಷ್ಟಾಂತವನ್ನೇ ಇಟ್ಟುಕೊಂಡರೆ, ಸೃಷ್ಟಿಗೆ ಪೂರ್ವದಲ್ಲಿ ಸರ್ವಜ್ಞನಾದ ಪರಮೇಶ್ವರನು ಈಗ್ಗೆ ಇಲ್ಲವೆಂದೇ ಹೇಳಬೇಕಾಗುವದಲ್ಲ ! ಏಕೆಂದರೆ ಅವನೇ ಈ ಸಂಸಾರದ ಸುಖದುಃಖಗಳನ್ನು ಅನುಭವಿಸುವ ಜೀವರುಗಳಾಗಿರುತ್ತಾನೆಂದಲ್ಲವೆ, ನೀವು ಹೇಳುತ್ತಿರುವದು ?

ಈ ಶಂಕೆಯು ನೋಡುವದಕ್ಕೆ ಎಷ್ಟೇ ಪ್ರಬಲವಾಗಿ ಕಂಡರೂ ಅನುಭವಾನುಸಾರಿಯಾದ ಯುಕ್ತಿಯನ್ನನುಸರಿಸಿರುವದಿಲ್ಲ. ಏಕೆಂದರೆ ಬೀಜ ದೃಷ್ಟಾಂತವನ್ನು ನಾವು ಕೊಟ್ಟಿರುವದು, ನಿರ್ವಿಕಲ್ಪವಾಗಿದ್ದುಕೊಂಡಿದ್ದ ಕಾರ್ಯವು ಸವಿಕಲ್ಪವಾಗಿ ತೋರಿಕೊಳ್ಳಬಹುದು- ಎಂಬಿಷ್ಟನ್ನು ವಿಶದಗೊಳಿಸುವದಕ್ಕೇ ಆಗಿರುತ್ತದೆ. ಆ ಅಂಶದಲ್ಲಿ ದೃಷ್ಟಾಂತವು ಸರಿಯೇ ಆಗಿರುತ್ತದೆ. ಅದ್ವಯನಾದ ಪರಮಾತ್ಮನೇ ಜೀವನ ಪರಮಾರ್ಥವೆಂಬುದಕ್ಕೆ ಸುಷುಪ್ತಿಯ ಅನುಭವದ ಬೆಂಬಲವಿದೆ. ಸುಷುಪ್ತಿಯಲ್ಲಿ ನಮ್ಮ ಸ್ವರೂಪವು ಹೇಗೆ ಇರುತ್ತದೆ ? ಅದರಲ್ಲಿ ಯಾವ ವಿಕಲ್ಪಗಳಾದರೂ ಇರುತ್ತವೆಯೆ ? ಇಲ್ಲ. ಆದರೂ ನಾವು ಎಚ್ಚೆತ್ತ ಕೂಡಲೇ ದೇಶಕಾಲಕಲನಾವೈಚಿತ್ರ್ಯದಿಂದೊಡಗೂಡಿದ ಈ ಜಗತ್ತು ಅದೇ ಆತ್ಮಸ್ವರೂಪದಿಂದ ಹುಟ್ಟಿದಂತೆ ಕಾಣುವದಿಲ್ಲವೆ ? ಇದರಂತೆ ಪರಮೇಶ್ವರನಲ್ಲಿ ಲಯವಾದ ಈ ಜಗತ್ತು ನಿರ್ವಿಕಲ್ಪವಾಗಿದ್ದುಕೊಂಡಿದ್ದದ್ದು ಸ್ಥಿತಿಕಾಲದಲ್ಲಿ ಬಗೆಬಗೆಯಾಗಿ ತೋರುತ್ತಿರುವದೆಂದು ಶ್ರುತ್ಯನುಸಾರವಾಗಿ ಏತಕ್ಕೆ ನಾವು ನಂಬಬಾರದು ?

ಕನಸಿನ ದೃಷ್ಟಾಂತವು ಸರಿಯಾಗಲಿಲ್ಲವೆಂಬ ಶಂಕೆಗೆ ಪರಿಹಾರವನ್ನು ಎಂಟನೆಯ ಶ್ಲೋಕದಲ್ಲಿ ತಿಳಿಸಲಾಗುವದಾದ್ದರಿಂದ ಅದನ್ನು ಸದ್ಯಕ್ಕೆ ವಿಚಾರಿಸುವದು ಬೇಡ. ನಮ್ಮ ಆತ್ಮನು ನಿರ್ವಿಕಲ್ಪನಾದರೂ ಸವಿಕಲ್ಪವಾದ ಜಗತ್ತು ಆತನ ರೂಪಾಂತರವಾಗಿ ಮಾಯೆಯಿಂದ ತೋರುತ್ತಿದೆ ಎಂದು ನಾವು ಹೇಳಿದ ಪಕ್ಷಕ್ಕೆ ಈ ಶಂಕೆಯಿಂದ ಯಾವ ಅಡ್ಡಿಯೂ ಬರುವಂತಿಲ್ಲ. ಯಾವ ಉಪಾದಾನಕಾರಣವನ್ನೂ ಬಯಸದೆ, ಪರಮಾತ್ಮನು ತಾನೇ ಜಗದ್ರೂಪವಾಗಿ ಆಗಬಹುದು, ತಾನು ಮೊದಲು ಇದ್ದಂತೆಯೇ ಇರಬಹುದು- ಎಂಬುದಕ್ಕೆ ಈ ಸುಷುಪ್ತಜಾಗದ್ರದ್ದೃಷ್ಟಾಂತವು ಸಾಕಾಗಿದೆ. 'ಗಾಢನಿದ್ರೆಯಲ್ಲಿ ಒಬ್ಬನು ಮಲಗಿದ್ದಮಾತ್ರದಿಂದ ಜಗತ್ತೇನೂ ಹಾಳಾಗುವದಿಲ್ಲವಷ್ಟೆ ? ಆದ್ದರಿಂದ ಸುಷುಪ್ತಾತ್ಮನಿಂದ ಜಗತ್ತು ಉಂಟಾಗುವ ದೆಂಬುದು ಹಾಸ್ಯಾಸ್ಪದವಾದ ಮಾತಲ್ಲವೆ ?'- ಎಂಬ ಶಂಕೆಗೆ ಮುಂದೆ ಉತ್ತರವನ್ನು ಹೇಳುವೆವು.

ಆದರೆ ಸ್ವಪ್ನಸುಷುಪ್ತಿಗಳ ದೃಷ್ಟಾಂತವನ್ನು ಸದ್ಯಕ್ಕೆ ಬದಿಗಿಟ್ಟರೂ ಮತ್ತೊಂದು ದೃಷ್ಟಾಂತವನ್ನು ಇಲ್ಲಿ ಉದಾಹರಿಸಬಹುದಾಗಿದೆ. ಮಾಯಾವಿಯೊಬ್ಬನು ತಾನೊಬ್ಬನೇ ಬಂದು ಯಾವ ಸಾಮಗ್ರಿಯನ್ನೂ ಬಯಸದೆ ತನ್ನನ್ನೇ ಅನೇಕ ಮಾಯಾವಿಗಳಾಗಿ ತೋರ್ಪಡಿಸಕೊಳ್ಳುತ್ತಾನೆ. ಅಲ್ಲಿ ಮಾಯಾಕರ್ತೃವಾದ ಮಾಯಾವಿಯೊಬ್ಬನು ಮಾಯಾಕೃತವಾದ ನೂಲೇಣಿಯನ್ನು ಹತ್ತಿ ಆಕಾಶಕ್ಕೇರುತ್ತಾನೆ. ಅಲ್ಲಿ ಯಾರೊಡನೆಯೋ ಯುದ್ಧಮಾಡಿದವನಂತೆ ಪ್ರೇಕ್ಷಕರಿಗೆ ನಂಬಿಕೆಯಾಗುವಂತೆ ಶಸ್ತ್ರಾಸ್ತ್ರಗಳ ಹೋರಾಟದ ಶಬ್ದವನ್ನು ಅವರ ಕಿವಿಗೆ ಬೀಳಿಸುತ್ತಾನೆ. ಬಳಿಕ ತಾನು ಶತ್ರುಗಳ ಶಸ್ತ್ರಗಳಿಂದ ತುಂಡುಮಾಡಿಸಿಕೊಂಡಂತೆ ತೋರಿಸಿ, 'ತನ್ನ ಕೈಕಾಲುಗಳನ್ನು ನೆಲದ ಮೇಲೆ ಕೆಡಹುತ್ತಾನೆ. ಆ ಶರೀರದ ಅವಯವಗಳನ್ನೂ ರಕ್ತದ ಕೋಡಿಯನ್ನೂ ಕಂಡ ಪ್ರೇಕ್ಷಕರು ಮಾಯಾವಿಯು ನಿಜವಾಗಿ ಸತ್ತನೆಂದೇ ನಂಬಿದ ಮೇಲೆ ನಿಜವಾಗಿ ನೆಲದ ಮೇಲೆಯೇ ಇದ್ದ ಪರಮಾರ್ಥಮಾಯಾವಿಯು ಆ ದೃಶ್ಯವನ್ನೆಲ್ಲ ಕಣ್ಣುಮುಂದೆ ತೋರದಂತೆ ಕರಗಿಸಿ ತಾನೊಬ್ಬನೇ ಜನರ ಮುಂದೆ ಬಂದು ನಿಲ್ಲುತ್ತಾನೆ. ಈ ದೃಷ್ಟಾಂತದಲ್ಲಿ ಮಾಯಾವಿಯು ಅನೇಕವಾದದ್ದು, ಅವನು ನೂಲೇಣಿಯ ಮೇಲೆ ಏರಿದ್ದು, ಯುದ್ಧಮಾಡಿದ್ದು, ಶಸ್ತ್ರಹತನಾಗಿ ತುಂಡುತುಂಡಾಗಿ ಕೆಳಕ್ಕೆ ಬಿದ್ದದ್ದು- ಇವೆಲ್ಲವೂ ಅಷ್ಟುಜನ ಪ್ರೇಕ್ಷಕರಿಗೂ ಪ್ರತ್ಯಕ್ಷಗೋಚರವಾದಂತೆ ಆ ಕಾಲಕ್ಕೆ ಕಂಡರೂ ನಿಜವಾಗಿ ಪರಮಾರ್ಥ ಮಾಯಾವಿಯು ತಾನು ಇದ್ದಂತೆಯೇ ಇರುವನಲ್ಲವೆ ? ಇದರಂತೆಯೇ 'ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್' (ಶ್ವೇ.೪-೧೦) ಎಂಬ ಶ್ರುತಿಯ

ಪ್ರಮಾಣದಿಂದ ವಿಶ್ವಕ್ಕೆ ಉಪಾದಾನಕಾರಣವೆಂದು ನಾವು ಕಲ್ಪಿಸಬಹುದಾದ ನಾಮರೂಪಬೀಜವು ಮಾಯಾಮಾತ್ರವಾಗಿರುತ್ತದೆ ; ಅದು ಪರಮೇಶ್ವರನ ವಶದಲ್ಲಿದ್ದುಕೊಂಡೇ ಅವಿದ್ಯಾಬದ್ಧಜ್ಞಾನಚಕ್ಷುಗಳಾದ ಜೀವರುಗಳಿಗೆ ತೋರುತ್ತಿರುವದರಿಂದ ಪರಮೇಶ್ವರನನ್ನು 'ಮಾಯಾವಿ' ಎಂದೂ ಕರೆಯಬಹುದು. ಆ ಸರ್ವಸ್ವತಂತ್ರನಾದ ಪರಮೇಶ್ವರನು ತಾನು ಇರುವಂತೆಯೇ ಇದ್ದುಕೊಂಡು ಈ ದೇಶಕಾಲಕಲನಾಯುಕ್ತವಾದ ವಿಚಿತ್ರಪ್ರಪಂಚವನ್ನು ಮಾಯೆಯಿಂದ ನಿರ್ಮಿಸಿರುವನೆಂದೂ ಆ ಮಾಯಾನಿರ್ಮಿತವಾದ ವಿಶ್ವದೊಳಗಿರುವ ಜೀವರುಗಳಿಗೆ ತಾವು ಪರಮೇಶ್ವರಾಭಿನ್ನರೆಂಬ ಅರಿವು ಇಲ್ಲದ್ದರಿಂದ ಸಂಸಾರದ ಸುಖದುಃಖಗಳನ್ನು ಅನುಭವಿಸುತ್ತಿರುವೆವೆಂಬ ಭಾವನೆಯುಂಟಾದಮಾತ್ರದಿಂದ ಈ ಚೇತನಾಚೇತನಾತ್ಮಕವಾದ ಜಗತ್ತಿಗೆಲ್ಲ ಆತ್ಮನಾಗಿರುವ ಈ ಮಹೇಶ್ವರನಿಗೆ ಯಾವ ಕಲಂಕವಾದರೂ ಏತಕ್ಕೆ ಹೇಗೆ ತಟ್ಟೀತು ? ಇದನ್ನು ನಾವುಯೋಚಿಸಬೇಕು. ದೃಷ್ಟಾಂತದ ಮಾಯಾವಿಯು ತನಗಿಂತ ಬೇರೆಯಾಗಿ ಪ್ರೇಕ್ಷಕರಿಗೆ ಸಂತೋಷವನ್ನುಂಟುಮಾಡುವದಕ್ಕಾಗಿ ಮಾಯೆಯನ್ನು ಹರಡಿ ತೋರಿಸುತ್ತಾನೆ ; ಆದರೆ ಪರಮೇಶ್ವರನು ಅದ್ವಿತೀಯನಾಗಿರುವದರಿಂದ ಯಾರಿಗಾಗಿ ಈ ಮಾಯೆಯನ್ನು ತೋರಿಸುತ್ತಿದಾನೆ ?- ಎಂಬ ಆಕ್ಷೇಪವು ಸರಿಯಲ್ಲ. ಏಕೆಂದರೆ ಪರಮೇಶ್ವರನೊಬ್ಬನೇ ತನ್ನ ನಿತ್ಯಶುದ್ಧಬುದ್ಧಮುಕ್ತಸ್ವಭಾವದಿಂದ ಇರುತ್ತಾನೆ ; ಮಾಯಾವಿಯೊಬ್ಬನಲ್ಲಿಯೇ ಮಾಯೆಯಿಂದ ಬಗೆಬಗೆಯ ದೃಶ್ಯಗಳು ಕಲ್ಪಿತವಾಗಿರುವಂತೆ ಈ ವಿವಿಧದೃಶ್ಯಗಳ ಜಗತ್ತು ಆ ಪರಮಾತ್ಮನಲ್ಲಿ ಅವಿದ್ಯೆಯಿಂದ ಕಲ್ಪಿತವಾಗಿರುತ್ತವೆ. ಈ ಅವಿದ್ಯಾಕಲ್ಪಿತವಾಗಿರುವ ದೃಶ್ಯಗಳು- ರಜ್ಜುಸರ್ಪಾದಿಗಳು ಹಗ್ಗವೇ ಮುಂತಾದವುಗಳಿಗೆ ತಮ್ಮ ಧರ್ಮವನ್ನು ಸೋಂಕಿಸದೆ ಇರುವಂತೆ- ಪರಮಾತ್ಮನಿಗೆ ಯಾವ ಕಲಂಕವನ್ನೂ ತಂದೊಡ್ಡುವದಿಲ್ಲ- ಎಂಬುದಿಷ್ಟನ್ನೇ ಈ ದೃಷ್ಟಾಂತದಿಂದ ತಿಳಿಯಬೇಕಾಗುತ್ತದೆ. ವಿವಕ್ಷಿತಾಂಶವು ಹೊಂದುವದರಿಂದ ದೃಷ್ಟಾಂತದ ಮೇಲೆ ಹೆಚ್ಚಿನ ಆಕ್ಷೇಪವನ್ನು ಹೇರುವದಕ್ಕೆ ಬರುವದಿಲ್ಲ.

ಇನ್ನೊಂದು ದೃಷ್ಟಾಂತವನ್ನು ಈ ಶ್ಲೋಕದಲ್ಲಿ ಕೊಟ್ಟಿರುತ್ತದೆ. ಕನಸು, ಮನೋರಾಜ್ಯ, ಮಾಯೆ- ಮುಂತಾದ ದೃಷ್ಟಾಂತಗಳಿಂದ ಒಂದೇ ಒಂದಾದ ವಸ್ತುವಿನಲ್ಲಿ ಬಗೆಬಗೆಯ ದೃಶ್ಯಗಳು ಕಲ್ಪಿತವಾಗಿ ತೋರಬಹುದೆಂಬುದು ಮನದಟ್ಟಾಗುವಂತಿದೆಯಾದರೂ ಸಾಮಾನ್ಯಜನರಿಗೆ ಅಲ್ಲಿ ತೋರುವ ದೃಶ್ಯಗಳ ವೈಚಿತ್ರ್ಯವು ಬಹುಕಾಲದವರೆಗೆ ನಿಲ್ಲದೆ ಇರುವದಿಲ್ಲವಾದ್ದರಿಂದಲೂ, ಕೆಲವರಿಗೆ ಮಾತ್ರವೇ ತೋರುತ್ತಿದ್ದು ಮಿಕ್ಕವರಿಗೆ ತೋರದೆ ಇರುವದರಿಂದಲೂ ಅವು ಬರಿಯ

ತೋರಿಕೆ ; ಅನೇಕ ಕರ್ತೃಭೋಕ್ತೃಗಳಿಗೆ ಸುಖದುಃಖಗಳನ್ನುಂಟುಮಾಡುತ್ತಿರುವ ಈ ಜಗತ್ತಿನ ದೃಶ್ಯಗಳಿಗೆ ಅವನ್ನು ಹೋಲಿಸುವದಕ್ಕೆ ಬರುವದಿಲ್ಲ- ಎಂದು ಯಾರಾದರೂ ಶಂಕಿಸಬಹುದಾಗಿದೆ. ಆದ್ದರಿಂದ **ಯೋಗಿಯ ದೃಷ್ಟಾಂತ**ವನ್ನು ಇಲ್ಲಿ ಉದಾಹರಿಸಿದೆ. ವಿಶ್ವಾಮಿತ್ರ, ಸೌಭರಿ- ಮುಂತಾದವರು ಮನೆ, ಪ್ರಾಣಿಗಳು, ಚಂದ್ರನಕ್ಷತ್ರಾದಿಗಳು, ಇಂದ್ರಾದಿದಿಕ್ಪಾಲಕರು- ಮುಂತಾದ ದೃಶ್ಯಗಳನ್ನು ಇಚ್ಛಾಮಾತ್ರದಿಂದ ಸೃಷ್ಟಿಸಿದ ಕಥೆಗಳು ಪುರಾಣದಲ್ಲಿರುತ್ತವೆ. ಅಲ್ಲಿ ಗೃಹಾದಿಗಳ ನಿರ್ಮಾಣಕ್ಕೆ ಬೇಕಾದ ಮಣ್ಣು- ಮುಂತಾದವುಗಳನ್ನಾಗಲಿ ಜೀವರುಗಳ ಉತ್ಪತ್ತಿಗೆ ಬೇಕಾದ ಶುಕ್ಲಶೋಣಿತಾದಿಗಳನ್ನಾಗಲಿ ಬಯಸದೆ ಆ ಯೋಗಿಗಳು ಸಂಕಲ್ಪ ಮಾತ್ರದಿಂದ ಸೃಷ್ಟಿಸಿದರೆಂದು ಹೇಳಲಾಗಿದೆ. ಕುಂಬಾರನು ಮಣ್ಣು, ತಿಗುರಿ, ಕೋಲು, ದೇಶ, ಕಾಲ- ಮುಂತಾದ ಸಾಮಗ್ರಿಗಳನ್ನುಪಯೋಗಿಸಿ ಗಡಿಗೆ ಮುಂತಾದವನ್ನು ಮಾಡುವಂತೆ ಅವರು ಬೇರೆಯ ಸಹಾಯಕಸಾಮಗ್ರಿಗಳಿಂದೇನೂ ಆ ಸೃಷ್ಟಿಯನ್ನು ಮಾಡಲಿಲ್ಲ. ಹೀಗಿರುವಲ್ಲಿ ಮಹಾಯೋಗೇಶ್ವರನಾದ- ಎಲ್ಲಾ ಯೋಗಿಗಳಿಗೂ ಅವರವರ ತಪಃಸಿದ್ಧಿಯನ್ನು ಅನುಗ್ರಹಿಸಬಲ್ಲ- ಪರಮೇಶ್ವರನು ಯಾವದೊಂದು ಬಾಹ್ಯಸಾಧನವನ್ನೂ ಬಯಸದೆ ಈ ಜಗದ್ರೂಪನಾಗಿ ತೋರಬಹುದೆಂಬುದಕ್ಕೆ ಅಡ್ಡಿಯೇನಿದೆ ?

ಇನ್ನೊಂದು ಮಾತು : ಯಾವ ಪ್ರಮೇಯವೇ ಆಗಲಿ, ಚೈತನ್ಯಕ್ಕೆ ವಿಷಯವಾಗಿಯೇ ತೋರಿಕೊಳ್ಳಬೇಕು. ಚೈತನ್ಯದ ಆಧಾರವಿಲ್ಲದೆ ಯಾವದೊಂದೂ ಎಂದಿಗೂ ಕಾಣಿಸಲಾರದು- ಎಂಬ ವಿಷಯಕ್ಕೆ ಯಾವ ವಾದಿಗಳಿಗೂ ಭಿನ್ನಾಭಿಪ್ರಾಯವಿರುವದಿಲ್ಲ. ಆದ್ದರಿಂದ ಜ್ಞೇಯವಾದದ್ದೆಲ್ಲವೂ ಚೈತನ್ಯದ ಇರವಿನಿಂದಲೇ ಇದೆ ಎನ್ನಿಸಿಕೊಳ್ಳುತ್ತದೆ ಎಂದಾಯಿತು ; ಚೈತನ್ಯವನ್ನು ಆಶ್ರಯಿಸಿಕೊಂಡೇ ಅದು ಜೀವಿಸಿಕೊಂಡಿರುತ್ತದೆ. ಪ್ರಕೃತದಲ್ಲಿ ದೇಶ, ಕಾಲ, ಕ್ರಿಯಾಕಾರಕಫಲ- ಇವುಗಳ ವೈಚಿತ್ರ್ಯದಿಂದ- ದೇಶಕ್ರಮದಿಂದ ದೂರ, ಹತ್ತಿರ, ಅಲ್ಲಿ, ಇಲ್ಲಿ ಎಂದೂ- ಕಾಲಕ್ರಮದಿಂದ ಈಗ, ಆಗ, ಇನ್ನು ಮುಂದೆ ಎಂದೂ, ಈ ಕಾರಕಗಳು ಹೀಗೆಹೀಗೆ ಸೇರಿದರೆ ಇಂಥಿಂಥ ದೇಶದಲ್ಲಿ ಇಂಥಿಂಥ ಫಲವನ್ನು ಕೊಡುವವು ಎಂದೂ- ತೋರುವ ಜಗತ್ತು ಚೈತನ್ಯವನ್ನು ಆಶ್ರಯಿಸಿಕೊಂಡೇ ತೋರುವದರಿಂದ ಈ ಜಗತ್ತು ಹೇಗೆ ಯಾವಾಗ ಏತರಿಂದ ಉಂಟಾಯಿತು ? ಎಂಬ ಪ್ರಶ್ನೆಯೇ ಏಳುವ ಹಾಗಿಲ್ಲ. ಅದು ಬಟ್ಟೆ ಮೇಲೆ, ಅಥವಾ ಗೋಡೆಯ ಮೇಲೆ ಬರೆದ ಚಿತ್ರದಂತೆ ಚಿದ್ರೂಪನಾದ ಪರಮಾತ್ಮನನ್ನು ಅವಲಂಬಿಸಿಯೇ ತೋರಿಕೊಳ್ಳುತ್ತಿರುವದು. ಅಥವಾ ಪರಮಾತ್ಮನ ಮೇಲೆ ತೋರಿಕೊಳ್ಳುತ್ತಿರುವದೆಂದು ಹೇಳಲೇಕೆ ? ಪರಮಾತ್ಮನಿಗೂ ದೇಶಕಾಲಕಲನಾತ್ಮಕವಾದ ತೋರಿಕೆಗೂ

ಮತ್ತೆ ಯಾವ ಬೇರೆಯ ದೇಶಕಾಲಾದ್ಯಾತ್ಮಕಸಂಬಂಧವೂ ಇಲ್ಲದ್ದರಿಂದ ಪರಮಾತ್ಮನೇ ಹಾಗೆ ಅಜ್ಞರಿಗೆ ತೋರುತ್ತಿರುವನು ; ಯಾರು ಪರಮಾತ್ಮನಲ್ಲಿ ನೆಟ್ಟದೃಷ್ಟಿಯವರಾಗಿರದೆ ಹೊರಕ್ಕೆ ನೋಡುವ ಸ್ವಭಾವದ ದೃಷ್ಟಿಯನ್ನವಲಂಬಿಸುವರೋ ಅವರಿಗೆ ಪರಮಾತ್ಮನೇ, ವಿಚಿತ್ರತರವಾದ ಜಗತ್ತಾಗಿ ತೋರುತ್ತಿರುವನು- ಎಂಬುದೇ ಯುಕ್ತ. ಚಿತ್ರದಲ್ಲಿ ತಗ್ಗು-ತಿಟ್ಟು, ದೂರ-ಹತ್ತಿರ, ದಪ್ಪ-ತೆಳು, ಮನುಷ್ಯ, ಮೃಗ, ಪಕ್ಷಿ, ಕ್ರಿಮಿ, ಕೀಟ, ಮರ, ಗಿಡ, ಬಳ್ಳಿ, ಗುಡ್ಡ, ಬೆಟ್ಟ, ನದಿ, ಸಮುದ್ರ- ಎಂಬಿವೇ ಮುಂತಾದ ವೈಚಿತ್ರ್ಯವು ತೋರುವಂತೆ ಚಿತ್ರಗಾರನು ಬಣ್ಣದಿಂದಲೂ ಗೆರೆಗಳಿಂದಲೂ ತೋರಿಸಿದ್ದರೂ ಅದಕ್ಕೆ ಆಧಾರವಾಗಿರುವ ಬಟ್ಟೆಯಲ್ಲಿ ಅಥವಾ ಗೋಡೆಯಲ್ಲಿ ಈ ವೈಚಿತ್ರ್ಯವು ಒಂದಿಷ್ಟೂ ಇಲ್ಲದಿರುವಂತೆ, ಈ ಜಗತ್ತಿನ ವೈಚಿತ್ರ್ಯದ ಚಿತ್ರವು ಎಷ್ಟು ನಿಜವಾಗಿ ಸ್ವತಂತ್ರವಾಗಿರುವಂತೆ ಕಾಣಲಿ, ಇದೆಲ್ಲ ಮಾಯಾಕಲ್ಪಿತವಾದದ್ದೇ ಹೊರತು ನಿಜವಾಗಿ ಪರಮಾತ್ಮನ ಸ್ವರೂಪಕ್ಕೆ ಸೇರಿರುವದಿಲ್ಲ. ಈ ವಿಚಿತ್ರವಾದ ಜಗತ್ತಿಗೂ ನಮಗೂ ಆತ್ಮನಾಗಿರುವ ಪರಮಾತ್ಮನು ಏಕರೂಪನಾಗಿಯೇ ಇರುವನು. ಆತನು ಇಷ್ಟೆಲ್ಲ ರೂಪದಿಂದ ತೋರಿಕೊಳ್ಳುವ ಸ್ವಾತಂತ್ರ್ಯವುಳ್ಳವನಾಗಿರುತ್ತಾನೆ. ಮಾಯಾವಿಯು ಮಾಯಾದೃಶ್ಯಗಳನ್ನೂ ಯೋಗಿಯು ತನ್ನ ಯೋಗಸಿದ್ಧಿಯಿಂದಾದ ದೃಶ್ಯಗಳನ್ನೂ ಸಂಕಲ್ಪಮಾತ್ರದಿಂದ ಹೊರಹೊಮ್ಮಿಸುವಂತೆ, ಈ ಮಹಾಮಾಯಾವಿಯೂ ಮಹಾಯೋಗೀಶ್ವರನೂ ಆದ ಪರಮಾತ್ಮನು ತಾನು ಇದ್ದಂತೆಯೇ ಇದ್ದು ಅಪ್ರತಿಹತವಾದ ತನ್ನ ಇಚ್ಛಾಮಾತ್ರದಿಂದಲೇ ವಿಶ್ವರೂಪನಾಗಿ ತೋರುತ್ತಿರುವನು- ಎಂಬುದು ಅನುಭವಸಿದ್ಧವಾಗಿದೆ.

ಪರಮಾತ್ಮನ ಜ್ಞಾನ, ಇಚ್ಛೆ, ಕ್ರಿಯೆ- ಇವುಗಳ ಸ್ವರೂಪವೇನು ?- ಎಂಬುದನ್ನು ಇಲ್ಲಿ ವಿಚಾರಮಾಡುವದು ಒಳ್ಳೆಯದು. ಏಕೆಂದರೆ ಈ ಜ್ಞಾನಾದಿಗಳು ಪರಮೇಶ್ವರನ ಸ್ವರೂಪಕ್ಕಿಂತ ಭಿನ್ನವೊ, ಅಭಿನ್ನವೊ ? ಭಿನ್ನವಾದರೆ ಅವನ ಸ್ವರೂಪದಲ್ಲಿ ಜ್ಞಾನಾದಿಗಳಿಲ್ಲವೆಂದಾಗುವದು ; ಆಗ ಅವನನ್ನು ಅಚೇತನನೆಂದೇ- ಎಣಿಸಬೇಕಾಗುವದು. ಈ ಜ್ಞಾನೇಚ್ಛಾಕ್ರಿಯೆಗಳಿಗೂ ಅವನಿಗೂ ಬೇರೊಂದು ಸಂಬಂಧವನ್ನು ಕಲ್ಪಿಸಬೇಕಾಗುವದು. ಇದು ಯಾವದೂ ಯುಕ್ತವಲ್ಲ. ಶಕ್ಯವೂ ಅಲ್ಲ. ಏಕೆಂದರೆ ಜೀವರುಗಳಾದರೆ ಅಂತಃಕರಣಾದಿಗಳ ಸಂಬಂಧವುಳ್ಳವರಾದ್ದರಿಂದ ಅಂತಃಕರಣದಲ್ಲಿ ಜ್ಞಾನಶಬ್ದವಾಚ್ಯವಾದ ವೃತ್ತಿಗಳುಂಟಾಗಲಾಗಿ ಆ ಮೂಲಕವಾಗಿ ಕೆಲಸಮಾಡುವ ಇಂದ್ರಿಯಗಳಿಂದಲೂ ಶರೀರದಿಂದಲೂ ಕ್ರಿಯೆಯನ್ನು ಮಾಡಬಹುದಾಗಿದೆ. ಶರೀರವೂ ಅದರ ಮೂಲಕವಾಗಿ ಬಾಹ್ಯಕಾರಕಗಳನ್ನು ಉಪಯೋಗಿಸಿಕೊಂಡು ಮಾಡುವ ಕ್ರಿಯೆಯೂ ದೇಶಕಾಲಗಳ ಕ್ರಮದಿಂದ ಆಗಿ

ಆಯಾ ಕ್ರಿಯೆಗೆ ಅನುಗುಣವಾದ ಫಲವೂ ನಿಯತವಾದ ದೇಶಕಾಲಗಳಲ್ಲಿ ಆಗಬಹುದಾಗಿದೆ. ಆದರೆ ಪರಮಾತ್ಮನು ಅದ್ವಿತೀಯನು, ದೇಶಕಾಲಗಳಿಗೂ ಸಾಕ್ಷಿಯಾಗಿರುವದರಿಂದ ಅವುಗಳ ಕಟ್ಟಿಲ್ಲದವನು ; ಅಂತಃಕರಣವಿಲ್ಲದ್ದರಿಂದ ಇಚ್ಛೆಯೂ ಇಲ್ಲದವನು. ಹೀಗಿದ್ದರೂ ಶ್ರುತಿಯಲ್ಲಿ **'ಸೋಽಕಾಮಯತ । ಬಹು ಸ್ಯಾಂ ಪ್ರಜಾಯೇಯೇತಿ । ಸ ತಪೋಽತಪ್ಯತ । ಸ ತಪಸ್ತಪ್ತ್ವಾ । ಇದಂ ಸರ್ವಮಸೃಜತ । ಯದಿದಂ ಕಿಞ್ಚ ॥'** (ತೈ.೨-೬) 'ಅವನು ಇಚ್ಛೈಸಿದನು ; ತಪಸ್ಸುಮಾಡಿ ಇದು ಯಾವಯಾವದಿದೆಯೋ ಇದನ್ನೆಲ್ಲ ಸೃಷ್ಟಿಸಿದನು- ಎಂದು ಹೇಳಿದೆ. ಇಲ್ಲಿ ಭಗವಂತನ ಕಾಮ, ತಪಸ್ಸು, ಸೃಷ್ಟಿಕ್ರಿಯೆ- ಇವೆಲ್ಲದರ ಸ್ವರೂಪವು ಏನೆಂದಾಯಿತು ? ದೇಶಕಾಲಾದಿಗಳನ್ನೆಲ್ಲ ಸೃಷ್ಟಿಮಾಡಿರುವ ಅಶರೀರನಾದ, ಅತೀಂದ್ರಿಯನಾದ, ಅಮನಸ್ಕನಾದ, ಆ ಪರಮಾತ್ಮನು ಕಾಮಿಸುವದೆಂದರೇನು, ತಪಸ್ಸುಮಾಡುವದೆಂದರೇನು, ಸೃಷ್ಟಿಸುವದೆಂದರೇನು ? ಈ ಕಾಮಾದಿಗಳು ಜೀವರುಗಳ ಕಾಮಾದಿಗಳಂತೆ ಶರೀರಾದಿಗಳಿಂದ ಆಗದೆ ಇರುವದರಿಂದ ಪರಮಾತ್ಮನ ಸ್ವರೂಪವೇ ಆಗಿರುತ್ತವೆ ; ಆತನು ಜೀವರುಗಳಂತೆ ಕಾಮಾದಿಗಳಿಗೆ ವಶನಲ್ಲ, ಅವೇ ಅವನ ವಶವಾಗಿರುತ್ತವೆ. ಸೂರ್ಯನ ಬೆಳಕೂ ಬಿಸಿಲೂ ಹೇಗೆ ಸೂರ್ಯನ ಸ್ವರೂಪಕ್ಕಿಂತ ಬೇರೆಯಲ್ಲವೋ, 'ಸೂರ್ಯನು ಭೂಮಿಯನ್ನು ಬೆಳಗುತ್ತಾನೆ, ಮರಗಿಡಗಳನ್ನು ಸುಡುತ್ತಾನೆ' ಎಂದರೆ ಇಚ್ಛಾಪೂರ್ವಕವಾದ ಕಾಲಕ್ರಮಾಪೇಕ್ಷಿಯಾದ ಕ್ರಿಯೆಯನ್ನು ಮಾಡುತ್ತಾನೆಂದು ಹೇಗೆ ಅಭಿಪ್ರಾಯವಿಲ್ಲವೋ ಹಾಗೆಯೇ ಇಲ್ಲಿಯೂ ತಿಳಿಯಬೇಕು. 'ಸ್ವೇಚ್ಛೆಯಿಂದ' - ತನ್ನ ಇಚ್ಛೆಯಿಂದ- ಎಂಬಲ್ಲಿ ತನಗೂ ಇಚ್ಛೆಗೂ ಸಂಬಂಧವಿರುವದಿಲ್ಲ ; 'ಕಲ್ಲಿನ ಗೊಂಬೆಯ ಮೈ' ಎಂಬಂತೆ ಸ್ವರೂಪವನ್ನೇ ಹೀಗೆ ಭೇದಗರ್ಭಿತವಾಗಿ ಗೌಣವೃತ್ತಿಯಿಂದ ತಿಳಿಸಿದೆ ಎಂದು ನಿರ್ಣಯಿಸಬೇಕು. 'ಪರಮಾತ್ಮನು ಜಗತ್ತನ್ನು ಮಾಯಾಕಲ್ಪಿತವಾದ ದೇಶಕಾಲಕಲ್ಪನೆಗಳಿಂದ ವಿಚಿತ್ರವಾಗಿ ಚಿತ್ರಿಸುತ್ತಾನೆ' ಎಂಬುದು ಕಾಲಕ್ರಮವನ್ನು ಅವಲಂಬಿಸಿದ ಕ್ರಿಯೆಯನ್ನು ಹೇಳುವದಿಲ್ಲ ; ಜ್ಞಾನಕ್ರಮವನ್ನನುಸರಿಸಿ ಜಿಜ್ಞಾಸುಗಳಿಗೆ ಬೋಧೆಮಾಡುವ ಪ್ರಕಾರವಿದು.

ಇದನ್ನು ಹಿಂದಿನ ಶ್ಲೋಕದ ವಿವರಣೆಯಲ್ಲಿ ತಿಳಿಸಿರುವಂತೆ ಶ್ರೀಗುರುಮೂರ್ತಿಯಾದ ಶ್ರೀದಕ್ಷಿಣಾಮೂರ್ತಿಯ ಅನುಗ್ರಹದಿಂದ ಅನುಭವಕ್ಕೆ ತಂದುಕೊಳ್ಳಬೇಕು. ಆಗ ಜಡಜಗತ್ತು, ಮಿಕ್ಕ ಜೀವರುಗಳು, ತಾನು, ಗುರುಮೂರ್ತಿ, ದಕ್ಷಿಣಾಮೂರ್ತಿ- ಎಂಬ ಬೇದಗಳನ್ನೆಲ್ಲ ಚಿನ್ಮಾತ್ರವಾಗಿ ಸಾಕ್ಷಾತ್ಕರಿಸಿಕೊಳ್ಳುವ ಜಾಣ್ಮೆಯು ಲಭಿಸುವದು.

ಃಃಃಃಃಃಃಃಃ

## ೩. ಚೇತನಾಚೇತನಾತ್ಮಕಜಗತ್ತು ಪರಮಾತ್ಮನೇ

**ಯಸ್ಯೈವ ಸ್ಫುರಣಂ ಸದಾತ್ಮಕಮಸತ್ಕಲ್ಪಾರ್ಥಗಂ ಭಾಸತೇ**
**ಸಾಕ್ಷಾತ್ತತ್ತ್ವಮಸೀತಿ ವೇದವಚಸಾ ಯೋ ಬೋಧಯತ್ಯಾಶ್ರಿತಾನ್ ।**
**ಯತ್ಸಾಕ್ಷಾತ್ಕರಣಾದ್ಭವೇನ್ನ ಪುನರಾವೃತ್ತಿರ್ಭವಾಮ್ಭೋನಿಧೌ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥**

ಬೀಜದೊಳಗೆ ಅವ್ಯಕ್ತವಾಗಿರುವ ಅಂಕುರಾದಿಗಳಂತೆ ಜಗತ್ತು ಪರಮಾತ್ಮನಲ್ಲಿಯೇ ವಿಕಲ್ಪಗಳಿಲ್ಲದೆ ಇದ್ದುಕೊಂಡಿದ್ದು ಮಾಯಾಕಲ್ಪಿತವಾದ ದೇಶಕಾಲಾದಿಗಳಿಂದ ಬಗೆಬಗೆಯಾಗಿ ಅವನನ್ನೇ ಆಶ್ರಯಿಸಿಕೊಂಡು ಕಾಣಿಸುತ್ತಿರುವದಾದ್ದರಿಂದ, ಪರಮಾತ್ಮನಿಗಿಂತ ಬೇರೆಯಾಗಿ ಅದು ಇರುವದೇ ಇಲ್ಲ. ನಿಜವಾಗಿ ನಾಮರೂಪಾದಿವಿಕಲ್ಪಗಳಿಂದೊಡಗೂಡಿ ಜಗತ್ತು ತೋರುತ್ತಿರುವಾಗಲೂ ಅದು ಪರಮಾತ್ಮರೂಪದಿಂದಲೇ ಇರುತ್ತಿರುವದು. ಪರಮಾತ್ಮನತ್ತ ಚಿತ್ತದೃಷ್ಟಿಯನ್ನು ಹೊರಳಿಸಲಾರದ ಅವಿವೇಕಿಗಳಿಗೆ ಮಾತ್ರವೇ ಮಾಯಾವಿಲಾಸವಾದ ಈ ಜಗಚ್ಚಿತ್ರವು ಕಾಣುತ್ತಿದ್ದರೂ ಒಳಹೊಕ್ಕು ನೋಡಬಲ್ಲವರಿಗೆ- ಬೇರೆಬೇರೆಯ ಆಕಾರಗಳಿಂದೊಡಗೂಡಿದ ಚಿತ್ರದೃಶ್ಯಗಳೆಲ್ಲವೂ ಆಧಾರವಾದ ಬಟ್ಟೆ ಅಥವಾ ಗೋಡೆಗಿಂತ ವ್ಯತಿರಿಕ್ತವಾಗಿಲ್ಲದಂತೆ- ಇದೆಲ್ಲವೂ ನಿಜವಾಗಿ ಪರಮಾತ್ಮನೇ ಆಗಿರುತ್ತದೆ ಎಂದು ತಿಳಿಸಿದ್ದಾಯಿತು.

ಈ ವಿಷಯದಲ್ಲಿ ಒಂದು ಶಂಕೆ ಏಳಬಹುದು : ಪರಮಾತ್ಮನು 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ.೨-೧) ಎಂಬ ಶ್ರುತಿಯ ಪ್ರಾಮಾಣ್ಯದಿಂದ ಪರಮಾರ್ಥವಾಗಿ ಸತ್ಯರೂಪನಾಗಿರುತ್ತಾನೆ ; ಅವನ ಇರವಿಗೆ ಎಂದಿಗೂ ಹೋಕವಿಲ್ಲ. ಜಗತ್ತಿಗೆ ಅಂಥ ಸತ್ಯತ್ವವಿಲ್ಲ. ಏಕೆಂದರೆ ಇದರಲ್ಲಿ ಅನಿತ್ಯವಾದ ವಸ್ತುಗಳಿವೆ ; ಹಗ್ಗದ ಹಾವು, ಕಪ್ಪೆಯಚಿಪ್ಪಿನ ಬೆಳ್ಳಿ- ಇಂಥ ಹುಸಿತೋರಿಕೆಗಳಿವೆ. ಇದಲ್ಲದೆ ಅವನು ಚೈತನ್ಯಸ್ವರೂಪನಾಗಿರುತ್ತಾನೆ ; 'ನ ಹಿ ದ್ರಷ್ಟುರ್ದೃಷ್ಟೇರ್ವಿಪರಿಲೋಪೋ ವಿದ್ಯತೇ' (ಬೃ.೪-೩-೨೩) ಎಂಬ ಶ್ರುತಿಯ ಪ್ರಮಾಣದಿಂದ ಅವನ ಚೈತನ್ಯವು ಎಂದಿಗೂ ಮಾರ್ಪಡುವದಿಲ್ಲವೆಂದು ತಿಳಿಯಬೇಕಾಗಿದೆ. ಜಗತ್ತು ಈ ಲಕ್ಷಣಕ್ಕೆ ವಿಪರೀತವಾಗಿ ಅಶುದ್ಧವಾದ ಅಚೇತನಪದಾರ್ಥಗಳಿಂದೊಡಗೂಡಿದೆ. ಕಲ್ಲು, ಮಣ್ಣು, ನೀರು, ಗಾಳಿ- ಮುಂತಾದ ಅಚೇತನವಸ್ತುಗಳು ನಿತ್ಯಚೈತನ್ಯಸ್ವರೂಪನಾದ ಪರಮಾತ್ಮನೇ ಎನ್ನಬಹುದೆ ? ಇದರಲ್ಲಿ ಚೇತನರಾದ ಮನುಷ್ಯರೂ ಮೃಗಪಕ್ಷಿಕೀಟಾದಿಗಳೂ ಕಾಣುತ್ತಿರುವದು ನಿಜ ; ಆದರೆ ಅವರು ಅಚೇತನವಾದ

ದೇಹಾದಿಗಳುಳ್ಳವರು, ಪರಿಚ್ಛಿನ್ನವಾದ ಅನಿತ್ಯಜ್ಞಾನವುಳ್ಳವರು, ಅಲ್ಪಶಕ್ತಿಯುಳ್ಳವರು. ಹೀಗೆ ಜ್ಞಾನತಾರತಮ್ಯವೂ ಶಕ್ತಿತಾರತಮ್ಯವೂ ಇರುವ ಈ ದೇಹಿಗಳನ್ನು ಪರಮಾತ್ಮನೇ ಎನ್ನಬಹುದೆ? ಲೋಕದಲ್ಲಿ ಮಣ್ಣಿಗೂ ಅದರ ಕಾರ್ಯವಾದ ಮಡಕೆಕುಡಿಕೆಗಳಿಗೂ ಕಾರ್ಯಕಾರಣಭಾವವು ಕಂಡುಬರುತ್ತಿರುವಲ್ಲಿ ಮಣ್ಣಿನ ಕಾರ್ಯಗಳಲ್ಲೆಲ್ಲ ಮಣ್ಣೇ ಅನುಸರಿಸಿಕೊಂಡು ಬಂದಿರುತ್ತದೆ. ಹೀಗೆಯೇ ಚಿನ್ನದ ಕಾರ್ಯಗಳಲ್ಲಿ ಚಿನ್ನವೇ ಅನುಸರಿಸಿಕೊಂಡು ಬರುತ್ತದೆಯೇ ಹೊರತು ಮಣ್ಣು ಅನುಸರಿಸಿಕೊಂಡು ಬಂದಿರುವದಿಲ್ಲ. ಸಚ್ಚಿದ್ರೂಪನಾದ ಪರಮಾತ್ಮನೇ ಜಗತ್ತಿಗೆ ಕಾರಣನಾಗಿದ್ದರೆ ಜಗತ್ತಿನಲ್ಲಿ ಅಸತ್ಪದಾರ್ಥಗಳೂ ಅಚೇತನಪದಾರ್ಥಗಳೂ ತೋರುತ್ತಿರುವದೇಕೆ ? ಚೇತನರಾದ ಜೀವರುಗಳೂ ಪರಮಾತ್ಮನೇ ಆಗಿರುತ್ತಿದ್ದರೆ ಅವರಲ್ಲಿ ಸರ್ವಜ್ಞತ್ವವೂ ಸರ್ವಶಕ್ತಿತ್ವವೂ ತೋರುತ್ತಿಲ್ಲವೇಕೆ ? ಈ ಪ್ರಶ್ನೆಗೆ ಅದ್ವೈತಸಿದ್ಧಾಂತದಲ್ಲಿ ಉತ್ತರವಿಲ್ಲವಾದ್ದರಿಂದ ಅದು ಪ್ರಾಮಾಣಿಕವಲ್ಲ. ಪರಮಾತ್ಮನು ಬೇರೆ, ಜಗತ್ತಿಗೆ ಉಪಾದಾನಕಾರಣವಾದ ವಸ್ತು ಬೇರೆ ಎಂದು ಹೇಳುವದೇ ಯುಕ್ತ, ಈ ಉಪಾದಾನವು **ಪ್ರಧಾನ**ವೆಂದು ಸಾಂಖ್ಯರೂ, **ಪರಮಾಣು**ಗಳೆಂದು ವೈಶೇಷಿಕರೂ ಹೇಳುತ್ತಿದ್ದರು. ಈಗಿನ ಭೌತಿಕಶಾಸ್ತ್ರದಲ್ಲಿಯೂ ಪರಮಾಣುಗಳಿಂದಲೇ ಜಗತ್ತು ಉಂಟಾಗಿದೆ ಎಂದು ಪ್ರತಿಪಾದಿತವಾಗಿರುತ್ತದೆ; ಈ ಶಾಸ್ತ್ರದಲ್ಲಿ ನಿರೀಕ್ಷಣಪರೀಕ್ಷಣಸಂವಾದೀಕರಣಗಳೆಂಬ ಉಪಾಯಗಳಿಂದ ಸಿದ್ಧಾಂತವನ್ನು ಮಾಡಿರುವದರಿಂದ ಅದನ್ನು ಒಪ್ಪಲೇಬೇಕಾಗಿದೆ. ಸತ್ಯಜ್ಞಾನಾನಂತರೂಪನಾದ ಪರಮಾತ್ಮನು ಶಾಸ್ತ್ರಮಾತ್ರಗಮ್ಯನಾಗಿರುವದರಿಂದ ಅವನೇ ಇಲ್ಲವೆಂದು ಬೇಕಾದರೂ ಹೇಳಬಹುದು. ಯುಕ್ತ್ಯನುಭವಸಂಮತವಾಗಿರುವ ಈ ಪರಮಾಣುವಾದವನ್ನು ಕೈಬಿಡುವದಕ್ಕೆ ಕಾರಣವೇನೂ ತೋರುತ್ತಿಲ್ಲವಲ್ಲ!

ಈ ಶಂಕೆಯನ್ನು ಪರಿಹರಿಸುವದಕ್ಕೆಂದೇ ಈ ಶ್ಲೋಕವು ಬಂದಿರುತ್ತದೆ. ''ಯಾವಾತನ ಸದ್ರೂಪವಾದ ಬೆಳಕೇ ಅಸತ್ಕಲ್ಪವಾದ ಅರ್ಥದಲ್ಲಿ ಸೇರಿಕೊಂಡು ತೋರುತ್ತಿರುವದೋ, ಯಾವಾತನು ತನ್ನನ್ನಾಶ್ರಯಿಸಿದವರಿಗೆ 'ತತ್ತ್ವಮಸಿ' ಎಂಬ ವೇದವಾಕ್ಯದಿಂದ ನೇರಾಗಿ ಬೋಧಿಸುತ್ತಿರುವನೋ, ಯಾವಾತನನ್ನು ಸಾಕ್ಷಾತ್ಕರಿಸಿಕೊಳ್ಳುವದರಿಂದ ಮತ್ತೆ ಸಂಸಾರಸಾಗರಕ್ಕೆ ಮರಳುವದಾಗದೆ ಇರುವದೋ- ಆ ಶ್ರೀಗುರುಮೂರ್ತಿಯಾದ ಶ್ರೀದಕ್ಷಿಣಾಮೂರ್ತಿಗೆ ಈ ನಮಸ್ಕಾರವು'' ಎಂಬುದು ಇದರ ಅಕ್ಷರಾರ್ಥವು. ಈಗ ಇದರಲ್ಲಿರುವ ವಿಶೇಷಣಗಳ ಅಭಿಪ್ರಾಯವನ್ನು ಬಿಚ್ಚಿ ನೋಡೋಣ.

ಮೇಲೆ ಕೊಟ್ಟಿರುವ ಆಕ್ಷೇಪಗ್ರಂಥದಲ್ಲಿ ಮುಖ್ಯವಾಗಿ ಒಂದು ಯುಕ್ತಿಯನ್ನು ಆಶ್ರಯಿಸಿದೆ. ಯಾವದು ಕಾರ್ಯವೋ ಅದರಲ್ಲಿ ಕಾರಣಧರ್ಮವು

ಅಡಗಿರಬೇಕು- ಎಂಬುದೇ ಆ ಯುಕ್ತಿ. ಆದರೆ ಇದು ಲೋಕಾನುಭವಕ್ಕೆ ಹೊಂದುಗೆಯಾಗಿಲ್ಲ. ಮಣ್ಣು, ಚಿನ್ನ- ಮುಂತಾದವುಗಳ ಕಾರ್ಯದಲ್ಲಿ ಮಣ್ಣು, ಚಿನ್ನ- ಇವು ಅನುಗತವಾಗಿರುವದು ಕಾಣುತ್ತದೆ ಎಂಬುದು ನಿಜ. ಆದರೆ ಕಾರಣದಿಂದ ಹುಟ್ಟುವ ಕಾರ್ಯಗಳೆಲ್ಲ ಕಾರಣದಂತೆಯೇ ಇರಬೇಕೆಂಬ ನಿಯಮವೇನೂ ಇಲ್ಲ. ಮನುಷ್ಯನ ಶರೀರದಿಂದ ಹುಟ್ಟುವ ಕೂದಲು ಮೈಯಂತೆ ಇರುವದಿಲ್ಲ. ಬೀಜದಿಂದ ಹುಟ್ಟುವ ಮೊಳಕೆ, ಮರದಬುಡ, ಎಲೆ, ಹೂ, ಹಣ್ಣು- ಇವಕ್ಕೂ ಕಾರಣವಾದ ಬೀಜಕ್ಕೂ ಯಾವ ಹೋಲಿಕೆಯೂ ಇರುವದಿಲ್ಲ. ಈಗಿನ ಭೌತಿಕಶಾಸ್ತ್ರದಂತೆ ಆಮ್ಲಜನಕ, ಜಲಜನಕ - ಈ ಎರಡು ಅನಿಗಳಿಂದ ನೀರು ಉಂಟಾಗಿದೆ ಎಂದು ಗೊತ್ತಾಗಿದೆ; ಆದರೆ ಆ ಅನಿಲಗಳಿಗೂ ನೀರಿಗೂ ಯಾವ ಸಾಧರ್ಮ್ಯವೂ ಇರುವಂತಿಲ್ಲ. ಆದ್ದರಿಂದ ಕಾರಣದ ಧರ್ಮಗಳೇ ಕಾರ್ಯದಲ್ಲಿರ ಬೇಕೆಂದು ನಿರ್ಬಂಧಿಸುವದಕ್ಕೆ ಆಗುವದಿಲ್ಲ.

ಇನ್ನು ಆಕ್ಷೇಪಕನು ಹೀಗೆಂದು ಕೇಳಬಹುದು : ಅತ್ಯಂತವಾಗಿ ಒಂದ ಕ್ಕೊಂದು ವಿಲಕ್ಷಣವಾಗಿರುವ ಎರಡು ವಸ್ತುಗಳಿಗೆ ಕಾರ್ಯಕಾರಣಭಾವವಿದೆ ಎಂದು ಯಾವ ಯುಕ್ತಿಯ ಬಲದಿಂದ ನಿರ್ಣಯಿಸಬೇಕು ? ಮನುಷ್ಯನಿಂದ ಕೂದಲು, ಉಗುರು - ಮುಂತಾದವುಗಳೂ, ಬೀಜದಿಂದ ಮೊಳಗೆ ಮುಂತಾದವುಗಳೂ, ಅನಿಲಗಳಿಂದ ನೀರೂ ಹುಟ್ಟುವದು ಪ್ರತ್ಯಕ್ಷಾದಿಪ್ರಮಾಣಗಳಿಂದ ಕಂಡು ಬರುವದರಿಂದ ಅಲ್ಲಿ ಕಾರ್ಯಕಾರಣಭಾವವನ್ನು ಒಪ್ಪೋಣ. ಆದರೆ ಅತ್ಯಂತವಾಗಿ ವಿಲಕ್ಷಣವಾಗಿರುವ ಆತ್ಮನಿಗೂ ಪ್ರಪಂಚಕ್ಕೂ ಯಾವ ಪ್ರಮಾಣದಿಂದ ಕಾರ್ಯಕಾರಣಭಾವವನ್ನು ಒಪ್ಪಬಹುದು ? ಇಲ್ಲಿಯೂ 'ಸಚ್ಚ ತ್ಯಚ್ಚಾಭವತ್ ; ..... ವಿಜ್ಞಾನಂ ಚಾವಿಜ್ಞಾನಂ ಚ' (ತೈ.೨-೬) ಪರಮಾತ್ಮನು ಪ್ರತ್ಯಕ್ಷವೂ ಪರೋಕ್ಷವೂ ಆಗಿರುವ ಪಂಚಭೂತಗಳಾದನು..... ಚೇತನವೂ ಅಚೇತನವೂ ಆದನು- ಎಂಬ- ಶ್ರುತಿಯಿದೆಯಲ್ಲ !- ಎಂದು ವೇದಾಂತಿಗಳು ಕೇಳಬಹುದು. ಆದರೆ ಶ್ರುತಿಯೆಂಬುದು ವಾಙ್ಮಾತ್ರವು. ಶಬ್ದವು ಇದ್ದದ್ದನ್ನು ತಿಳಿಸಬಹುದೇ ಹೊರತು ಇಲ್ಲದ್ದನ್ನು ಅಥವಾ ಪ್ರಮಾಣವಿರುದ್ಧವಾದದ್ದನ್ನು ಉಂಟುಮಾಡ ಲಾರದು. ಆತ್ಮನು ಪ್ರತ್ಯಕ್ಷಾದಿಪ್ರಮಾಣಗಳಿಗೆ ಗೋಚರನಲ್ಲ · ಪ್ರಪಂಚವು ಅನುಭವಗೋಚರವಾಗಿದೆ. ಇವೆರಡಕ್ಕೂ ಕಾರ್ಯಕಾರಣಭಾವವನ್ನಾಗಲಿ, ಸಾಧರ್ಮ್ಯವನ್ನಾಗಲಿ ಅನುಭವಕ್ಕೆ ವಿರುದ್ಧವಾಗಿ ಯಾವ ಶ್ರುತಿಯು ತಾನೆ ಹೇಗೆ ತಿಳಿಸಿಕೊಟ್ಟೀತು ?

ಈ ಆಕ್ಷೇಪಕ್ಕೆ ಪರಿಹಾರವೇನೆಂದರೆ, ಆತ್ಮನು ಯಾವ ಪ್ರಮಾಣಕ್ಕೂ ಗೋಚರನಲ್ಲವೆಂಬ ಕಾರಣದಿಂದ ಮೊಲದ ಕೊಂಬು, ಬಂಜೆಯ ಮಗ-

ಮುಂತಾದವುಗಳಂತೆ ಅವನು ಇಲ್ಲವೇ ಇಲ್ಲ-ಎನ್ನುವದಕ್ಕೆ ಬರುವದಿಲ್ಲ. ಪ್ರಮಾಣಗಳಿಗೆ ಗೋಚರವಾಗುವ ಪದಾರ್ಥಗಳೂ ಪ್ರಮಾಣವೂ ಪ್ರಮಾತೃವೂ ಯಾವ ಚೈತನ್ಯರೂಪವಾದ ಅನುಭವಕ್ಕೆ ಗೋಚರವಾಗಿ ಇವೆಯೆನಿಸಿಕೊಳ್ಳುವವೋ ಆ ಅನುಭವಸ್ವರೂಪನಾದ ಆತ್ಮನನ್ನು ಇಲ್ಲವೆನ್ನುವದಕ್ಕೆ ಯಾರಿಗೆ ಎದೆ ಬಂದೀತು ? ಪ್ರಮಾಣಗಳಾಗಲಿ, ಪ್ರಮೇಯಗಳಾಗಲಿ ಯಾವ ಚೈತನ್ಯಕ್ಕೆ ಗೋಚರವಾಗದೆ ಇವೆಯೆನಿಸಿಕೊಳ್ಳಲಾರವೋ ಆ ಆತ್ಮನ ಚೈತನ್ಯವು ಸದ್ರೂಪವಾಗಿಯೇ ಇರಬೇಕಷ್ಟೆ? ಆತ್ಮತತ್ತ್ವವು ಅರಿವಿನ ಸ್ವರೂಪವು, ಅದು ಇಲ್ಲ- ಎಂಬ ವ್ಯಾಹತೋಕ್ತಿಯನ್ನು ಯಾರುತಾನೆ ಒಪ್ಪಿಯಾರು ? ಹೀಗೆ ಆತ್ಮನು ಯಾವ ಪ್ರಮಾಣದಿಂದಲೂ ಸಿದ್ಧನಾಗದಿದ್ದರೂ ಅವನ ಚೈತನ್ಯರೂಪವಾದ ಸ್ಫುರಣವು- ಬೆಳಕು- **ಸ್ವಯಂಸಿದ್ಧ**ವಾಗಿರುತ್ತದೆ ; ಆ ಸ್ವತಃಸಿದ್ಧವಾದ ಸಚ್ಚಿದ್ರೂಪದ ಬಲದಿಂದಲೇ ನಮಗೆ ಎಲ್ಲವೂ ತೋರುತ್ತಿದೆ- ಎಂಬುದಕ್ಕೆ ಈ ಅನುಭವವೊಂದೇ ಸಾಕಾಗಿದೆ.

ಈಗ ಜಗತ್ತಿನಲ್ಲಿ ತೋರುವ ಕಲ್ಲು, ಮಣ್ಣು, ಕಟ್ಟಿಗೆ- ಮುಂತಾದ ಅಚೇತನಪದಾರ್ಥಗಳು ಆತ್ಮನಿಗಿಂತ ವಿಲಕ್ಷಣವಾಗಿವೆಯಾದ್ದರಿಂದ ಅವಕ್ಕೆ ಸಾಂಖ್ಯಾದಿಗಳು ಹೇಳುವಂತೆ ಅಚೇತನವಾದ ಕಾರಣವೊಂದಿರಬೇಕು ; ಈಗಿನ ಬಾಹ್ಯವಿಜ್ಞಾನಶಾಸ್ತ್ರವು ತೋರಿಸಿಕೊಡುತ್ತಿರುವ ರೀತಿಯಿಂದ ಪರಮಾಣುಗಳನ್ನಾದರೂ ಈ ಕಾರಣವೆಂದು ಒಪ್ಪಬೇಕು- ಎಂಬ ಅಭಿಪ್ರಾಯದಲ್ಲಿರುವ ಹುರುಳು ಎಷ್ಟರಮಟ್ಟಿನದೆಂಬುದನ್ನು ಪರೀಕ್ಷಿಸೋಣ. ಜಗತ್ತಿನಲ್ಲಿ ಅಚೇತನವೆಂದು ಕಾಣುವ ವಸ್ತುಗಳಾಗಲಿ, ಅವಕ್ಕೆ ಕಾರಣವೆಂದು ಶಾಸ್ತ್ರಾಂತರದಲ್ಲಿ ಗೊತ್ತುಪಡಿಸಿರುವ ಕಾರಣವಾಗಲಿ, ಆತ್ಮಚೈತನ್ಯದ ಹಂಗಿಲ್ಲದೆ ಎಂದಾದರೂ ಅನುಭವಕ್ಕೆ ಬಂದದ್ದುಂಟೆ? ಪ್ರಮಾಣಕ್ಕೆ ಗೋಚರವಾಗಿರುವದೆಂಬ ಕಾರಣದಿಂದ ಇದೆ ಎಂದು ನಾವು ಕಲ್ಪಿಸುವ ಯಾವದೊಂದು ವಸ್ತುವೇ ಆಗಲಿ, ಅದು ಪ್ರತ್ಯಕ್ಷವಾಗಿದ್ದರೂ ಪರೋಕ್ಷವಾಗಿದ್ದರೂ ಚೈತನ್ಯದ ಬೆಳಕಿನಲ್ಲಿಯೇ ತಿಳಿಯಬರಬೇಕಾಗಿದೆ. ಹಗಲುಹೊತ್ತು ಕಣ್ಣಿಗೆ ಬೀಳುವ ಪದಾರ್ಥಗಳೆಲ್ಲ ಸೂರ್ಯನ ಬೆಳಕಿಗೆ ಗೋಚರವಾಗಿಯೇ ತೋರಬೇಕಾಗಿರುವದರಿಂದ ಸೂರ್ಯನ ಬೆಳಕನ್ನು ಮೊದಲು ನೋಡಿಯೇ ಅದರ ಮೂಲಕವಾಗಿಯೇ ಆ ಬಾಹ್ಯಪದಾರ್ಥಗಳನ್ನು ನಾವು ಕಾಣಬೇಕಾಗಿರುತ್ತದೆಯಲ್ಲವೆ ? ಪದಾರ್ಥವು 'ಇದೆ, ತೋರುತ್ತದೆ' ಎಂಬ ಭಾವವು ನಮಗೆ ಎಲ್ಲಿಂದ ಬರುತ್ತದೆ ? ಅದು ಆತ್ಮನ ಸದ್ರೂಪವಾದ ಸ್ಫುರಣದಿಂದಲೇ. ಪ್ರಮಾಣಗಳು ಯಾವದಾದರೊಂದು ಪ್ರಮೇಯವು ಇದೆ ಎನ್ನುವದಕ್ಕೆ ಮೊದಲೇ ಅವು ತಾವು ಇದೇವೆಂಬುದನ್ನು ನಮಗೆ ಮನಗಾಣಿಸಿ

ಕೊಡಬೇಕಷ್ಟೆ ? ಆ ಪ್ರಮಾಣಗಳ ಸತ್ತೆಯಾದರೂ ಎಲ್ಲಿಂದ ಬರುತ್ತದೆ ? ಅದೂ ಪರಮಾತ್ಮನ ಚಿದ್ರೂಪವಾದ ಸತ್ತೆಯು ಅವುಗಳಲ್ಲಿ ಹೊಳೆದು ತೋರಿರುವದರಿಂದಲೇ. ಆದ್ದರಿಂದ ಪ್ರಮಾಣಗಳಾಗಲಿ ಪ್ರಮೇಯಗಳಾಗಲಿ, ನಮಗೆ ತೋರುವದೆಂಬುದು ಸದ್ರೂಪನಾದ ಆತ್ಮನ ಸ್ಫುರಣದ ದ್ವಾರದಿಂದಲೇ ; ಪರಮಾತ್ಮನ ಸದ್ರೂಪವಾದ ಸ್ಫುರಣವನ್ನೇ ನಾವು ಪ್ರಮಾಣರೂಪದಿಂದಲೂ ಪ್ರಮೇಯರೂಪದಿಂದಲೂ ಕಾಣುತ್ತಿರುವೆವು. ಕನ್ನಡಿಯಲ್ಲಿ ತೋರುವ ಪ್ರತಿಬಿಂಬವು ಸಾರದೃಷ್ಟಿಯಿಂದ ನೋಡಿದಾಗ ಅದರ ಮೂಲವಾದ ಹೊರಗಿನ ವಸ್ತುಗಳ ಹೊಳಪು ಮಾತ್ರವೇ ಆಗಿರುವಂತೆ, ಪ್ರಮಾಣಪ್ರಮೇಯಗಳು ಸಾರದೃಷ್ಟಿಯಿಂದ ನೋಡಿದಾಗ ಅವುಗಳ ಮೂಲವಾದ ಆತ್ಮನ ಸಚ್ಚಿದ್ರೂಪವೇ. ಆ ರೂಪದಿಂದ ಬೇರ್ಪಡಿಸಿದರೆ ಆ ವಸ್ತುಗಳು ಅಸತ್ಕಲ್ಪವೇ, ಎಂದರೆ ಬರಿಯ ತೋರಿಕೆಯೇ ; ಆ ರೂಪದ ವಸ್ತು ಯಾವದೂ ಇರುವದೇ ಇಲ್ಲ- ಎಂದಾಯಿತು.

ಈವರೆಗಿನ ವಿಚಾರಧಾರೆಯು ಎಲ್ಲಿಗೆ ಬಂದು ನಿಂತಂತಾಯಿತೆಂದರೆ ಜಗತ್ತೆಂಬುದು ತೋರಿಕೆಯ ರೂಪದಿಂದ ಅಸತ್ತೇ ; ಅದರ ಸಾರವು ಪರಮಾತ್ಮನೇ ಹೀಗೆಂಬುದು 'ಅಸ್ತಿ', 'ಸ್ಫುರತಿ' - ಇದೆ, ತೋರುತ್ತದೆ- ಎಂಬ ವ್ಯಾವಹಾರಿಕಾನುಭವದಿಂದ ನಿರ್ಣಯವಾಗುತ್ತದೆ. ಆತ್ಮದೃಷ್ಟಿಯಿಂದ ನೋಡಿದಾಗ ಜಗತ್ತೇ ಇಲ್ಲ ; ಇದೆಲ್ಲವೂ ಆತ್ಮನೇ, ಬ್ರಹ್ಮವೇ. 'ಆತ್ಮೈವೇದಂ ಸರ್ವಮ್' (ಛಾಂ.೭-೨೫-೨) 'ಬ್ರಹ್ಮೈವೇದಂ ವಿಶ್ವಮ್' (ಮುಂ.೨-೨-೧೧)- ಎಂಬ ಶ್ರುತಿವಚನವು ಬರಿಯ ಅರ್ಥಹೀನವಾಕ್ಯವಲ್ಲ ; ಅದು ವಸ್ತುಸ್ಥಿತಿಯನ್ನು ಬೋಧಿಸುವ ವಾಕ್ಯ.

ಇನ್ನು ಅಲ್ಪಪ್ರಜ್ಞರೂ, ಅಲ್ಪಶಕ್ತಿಯುಳ್ಳವರೂ ಆಗಿರುವ ಜೀವರು ಪರಮಾತ್ಮನೇ ಎಂಬುದು ಹೇಗೆ ಸಮಂಜಸವಾದೀತು ?- ಎಂಬ ಪೂರ್ವಪಕ್ಷಕ್ಕೆ ಪರಿಹಾರವನ್ನುಕಂಡುಕೊಳ್ಳುವದು ಸುಲಭವಾಗುತ್ತದೆ. ಏಕೆಂದರೆ ಜೀವನೆಂದರೆ ಯಾವ ಪದಾರ್ಥವದು ?- ಎಂದು ವಿಮರ್ಶೆಮಾಡಿನೋಡಿದರೆ, ದ್ರಷ್ಟೃ (ಕಣ್ಣಿನಿಂದ ನೋಡುವವ), ಶ್ರೋತೃ, (ಕಿವಿಯಿಂದ ಕೇಳುವವ), ಘ್ರಾತೃ, (ಮೂಗಿನಿಂದ ಮೂಸುವವ), ರಸಯಿತೃ, (ನಾಲಗೆಯಿಂದ ಸವಿನೋಡುವವ), ಸ್ಪ್ರಷ್ಟೃ (ತ್ವಗಿಂದ್ರಿಯದಿಂದ ಮುಟ್ಟುವವ), ಮನ್ತೃ (ಮನಸ್ಸಿನಿಂದ ಮನನ ಮಾಡುವವ) ಬೋದ್ಧೃ (ಬುದ್ಧಿಯಿಂದ ಅರಿಯುವವ)- ಎಂಬುದಲ್ಲವೆ, ಜೀವನ ಸ್ವರೂಪ ? 'ಜೀವ ಪ್ರಾಣಧಾರಣೇ'ಎಂಬ ಧಾತುವಿನಿಂದ ಬಂದಿರುವ ಜೀವ ಶಬ್ದಕ್ಕೆ ಕರಣಗಳಿಂದ ವ್ಯಾಪಾರಮಾಡುವವನು ಎಂದೇ ಅರ್ಥ. ಆದರೆ ಈ ಕರಣಗಳೂ ಅವುಗಳ ವಿಷಯಗಳೂ ಮೇಲೆ ಹೇಳಿರುವಂತೆ ತಾವುತಾವು ಅಸತ್ಕಲ್ಪವಾಗಿರುತ್ತವೆ ;

ಈ ಜ್ಞಾನೇಂದ್ರಿಯಗಳನ್ನು ಉಪಾಧಿಗಳಾಗಿ ಬಳಸಿಕೊಳ್ಳುವದರಿಂದಲೇ ಚೇತನರಾದ ಜೀವರು ಅಲ್ಪಜ್ಞರು (ಇಷ್ಟಿಷ್ಟೆಂದು ಅಳತೆಗೆ ಬರುವ ಅರಿವುಳ್ಳವರು) ಎನ್ನಿಸಿಕೊಂಡಿರುತ್ತಾರೆ. ಹೀಗೆಯೇ ವಾಕ್ಪಾಣಿ ಪಾದಪಾಯೂಪಸ್ಥಗಳೆಂಬ ಕರ್ಮೇಂದ್ರಿಯಗಳನ್ನು ಉಪಾಧಿಯಾಗಿ ಬಳಸಿಕೊಳ್ಳುವದರಿಂದಲೇ ಅವರು ಅಲ್ಪಶಕ್ತಿಯುಳ್ಳವರೆನಿಸಿರುತ್ತಾರೆ. ಆದರೆ ಈ ಉಪಾಧಿಗಳು ಅವರಿಗೆ ಶಾಶ್ವತ ವಾಗಿರುವದಿಲ್ಲ. ಸುಷುಪ್ತ್ಯಾದ್ಯವಸ್ಥೆಗಳಲ್ಲಿ ಅವು ಇರುವದಿಲ್ಲ. ಅವು ತೋರುತ್ತಿರು ವಾಗಲೂ ಅವನ್ನು ಸರ್ವಸಾಕ್ಷಿಯಾದ ಪರಮಾತ್ಮನು ತನ್ನ ಚೈತನ್ಯದಿಂದ ವಿಷಯೀಕರಿಸಿಕೊಂಡು ಬೆಳಗುತ್ತಲೇ ಇರುತ್ತಾನೆ. ಆ ಪರಮಾರ್ಥ ರೂಪದಿಂದ ಯಾವನೊಬ್ಬನಿಗೂ ಯಾವ ಪರಿಚ್ಛೇದವೂ ಇರುವದೇ ಇಲ್ಲ. ಜೀವರಿಗೆ ಪರಿಚ್ಛೇದಕವಾಗಿ ತೋರುವ ಶರೀರ, ಇಂದ್ರಿಯ, ಮನಸ್ಸು- ಮುಂತಾದ ಉಪಾಧಿಗಳನ್ನು ಕೂಡ ಆ ಚೈತನ್ಯವು ವ್ಯಾಪಿಸಿಕೊಂಡೇ ಇರುತ್ತಿರುವದರಿಂದ ಮಂಜುಗಡ್ಡೆಯಲ್ಲೆಲ್ಲ ಎಡೆಬಿಡದೆ ತುಂಬಿಕೊಂಡಿರುವ ಏಕರಸವಾದ ನೀರಿನಂತೆ ಚೈತನ್ಯವು ಅದ್ವಿತೀಯವಿಜ್ಞಾನಘನವೇ ಆಗಿರುತ್ತದೆ.

ಆದ್ದರಿಂದ ಸಾಧಕನು ತನ್ನ ಸ್ವರೂಪವು ಮಾತ್ರವೇ ಅಲ್ಲ, ತನ್ನೆದುರಿಗೆ ಉಪದೇಶಮಾಡಲು ಕುಳಿತಿರುವ ಗುರುಮೂರ್ತಿಯೂ ಆ ಸಚ್ಚಿದಾನಂದಘನನಾದ ಶ್ರೀದಕ್ಷಿಣಾಮೂರ್ತಿಯೇ ಎಂದು ಸಕಲಮಾಯಿಕೋಪಾಧಿಗಳನ್ನೂ ವಿವೇಕದಿಂದ ಕರಗಿಸಿಕೊಂಡು ಏಕಾಕಾರವಾಗಿ ಅನುಭವಕ್ಕೆ ತಂದುಕೊಳ್ಳಬೇಕು. 'ತತ್ತ್ವಮಸಿ' ಎಂಬ ವಾಕ್ಯವು ಛಾಂದೋಗ್ಯದಲ್ಲಿ ಒಂಬತ್ತು ಸಲ ಬಂದಿರುತ್ತದೆ. ಶ್ವೇತಕೇತು ಎಂಬ ಮಗನಿಗೆ ತಂದೆಯಾದ ಆರುಣಿ ಉದ್ದಾಲಕನು ಯಾವದೊಂದನ್ನು ಅರಿತರೆ ಎಲ್ಲವನ್ನೂ ಅರಿತುಕೊಂಡಂತೆ ಆಗುವದೋ, ಅದನ್ನು ತಿಳಿಸುವೆನೆಂದು ಹೊರಟು ಸದ್ರೂಪವಾದ ಬ್ರಹ್ಮದಿಂದಲೇ ಎಲ್ಲ ಪ್ರಾಣಿಗಳೂ ಬಂದು, ಆ ಸದ್ಬ್ರಹ್ಮದಲ್ಲಿಯೇ ಇದ್ದುಕೊಂಡಿದ್ದು, ಕೊನೆಯಲ್ಲಿ ಅದರಲ್ಲಿಯೇ ಲಯವಾಗುತ್ತಿರುವದರಿಂದ ಉತ್ಪತ್ತಿಸ್ಥಿತಿಪ್ರಲಯಕಾಲಗಳಲ್ಲಿ ಎಂದಿಗೂ ಆ ಸದ್ಬ್ರಹ್ಮದ ಸ್ವರೂಪವನ್ನು ಬಿಟ್ಟಗಲದೆ ಇರುವವೆಂದು ಬೋಧಿಸಿರುತ್ತಾನೆ. **'ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ'** ಎಲೈ ಶ್ವೇತಕೇತುವೆ, ಈ ಜಗತ್ತೆಲ್ಲಕ್ಕೂ ಈ ಸದ್ಬ್ರಹ್ಮವೇ ತಿರುಳು : ಅದೇ ಸತ್ಯವಾದದ್ದು, ಮಿಕ್ಕದ್ದೆಲ್ಲವೂ ಬರಿಯ ತೋರಿಕೆ. ಅದೇ ಎಲ್ಲರ ಆತ್ಮವು, ಅದಕ್ಕಿಂತ ಬೇರೆಯಾಗಿ ಸಂಸಾರಿಯಾದ ಆತ್ಮನು ಇರುವದೇ ಇಲ್ಲ, ಅದೇ ನೀನು- ಎಂದು ಬಗೆಬಗೆಯ ಯುಕ್ತಿಗಳಿಂದ ತಿಳಿಸಿಕೊಟ್ಟಿರುತ್ತಾನೆ. ಈ ಶ್ರುತಿಯ ಸಾರವನ್ನೇ ಈ ಸ್ತೋತ್ರದಲ್ಲಿಯೂ ಹೇಳಿರುವದರಿಂದ ಇದು ಸರ್ವ

ವೇದಾಂತಾರ್ಥಸಾರಸಂಗ್ರಹರೂಪವಾಗಿರುತ್ತವೆ. ಹಿಂದೆ ಯಾವಾಗಲೋ ಉದ್ದಾಲಕನು ಮಗನಿಗೆ ಹೇಳಿದ ವಾಕ್ಯವಿದೆಂದೂ ಇದು ನಮಗೆ ಅನುಭವಕ್ಕೆ ಬರಲಾರದೆಂದೂ ಶಂಕಿಸಬಾರದು. ಶ್ರೀದಕ್ಷಿಣಾಮೂರ್ತಿಯು ಋಷಿಗಳಿಗೆ ಉಪದೇಶಿಸಿದ ಅಭಿಪ್ರಾಯವೂ ಇದೇ. ನೇರಾಗಿ ಆ ದಕ್ಷಿಣಾಮೂರ್ತಿಯೇ ಈಗ ನನಗೂ ಬೋಧಿಸುತ್ತಿದ್ದಾನೆ ಎಂಬುದನ್ನು ಬರಿಯ ಭಾವನೆಯಿಂದಲೇ ಅಲ್ಲ, ಈ ಸ್ತೋತ್ರದ ಅರ್ಥವನ್ನು ಅನುಸಂಧಾನಮಾಡಿ ಅನುಭವದಿಂದಲೂ ತಿಳಿದುಕೊಳ್ಳ ಬಹುದಾಗಿದೆ. ''ದೇವತೆಗಳೊಳಗೆ ಯಾವಯಾವನು ನಾನೇ ಆ ಬ್ರಹ್ಮವು ಎಂದು ಅರಿತುಕೊಂಡನೋ ಅವನೇ ಈ ವಿಶ್ವವೆಲ್ಲವೂ ತಾನೇ ಆದನು. ಋಷಿಗಳೊಳಗೆ ಯಾವಯಾವನು ಹಾಗೆಂದು ಅರಿತುಕೊಂಡನೋ, ಮನುಷ್ಯರೊಳಗೆ ಯಾವ ಯಾವನು ಅರಿತುಕೊಂಡನೋ, ಅವನವನಿಗೇ ಈ ಫಲವು ಬಂದಿತು. ಈಗಲೂ ಯಾವಯಾವನು ನಾನೇ ಆ ಬ್ರಹ್ಮವೆಂದು ಅರಿತುಕೊಳ್ಳುವನೋ ಅವನವನು ಈ ಸರ್ವಾತ್ಮಭಾವವನ್ನು ಹೊಂದುತ್ತಾನೆ'' ಎಂದು **ಬೃಹದಾರಣ್ಯಕ** (ಬೃ.೧-೪-೧೦) ಶ್ರುತಿಯು ಹೇಳುತ್ತಿದೆ.

'ಸಾಕ್ಷಾತ್ತತ್ತ್ವಮಸೀತಿ ವೇದವಚಸಾ ಯೋ ಬೋಧಯತ್ಯಾಶ್ರಿತಾನ್'- ಎಂಬ ವಾಕ್ಯದಲ್ಲಿ ಸಾಕ್ಷಾತ್ (ನೇರಾಗಿ) ಎಂಬ ಮಾತನ್ನು **'ಯಃ ಸಾಕ್ಷಾದ್ಬೋಧಯತಿ', ನೇರಾಗಿ ಆತನೇ ಬೋಧಿಸುತ್ತಾನೆ** ಎಂದೂ ಅನ್ವಯಮಾಡಿ ಕೊಳ್ಳಬಹುದು. ಆಗ ವಾಕ್ಯದ ಅಭಿಪ್ರಾಯವು ಹೇಗಾಗುವದೆಂಬುದನ್ನು ಈವರೆಗೆ ತಿಳಿಸಿಕೊಟ್ಟದ್ದಾಗಿದೆ. **'ಸಾಕ್ಷಾದ್ವೇದವಚಸಾ' ನೇರಾಗಿ ವೇದವಾಕ್ಕಿನಿಂದಲೇ** ಎಂದೂ ಅದನ್ನು ಅನ್ವಯಿಸಿಕೊಳ್ಳಬಹುದು. ಆಗ ಶ್ರೀಗುರುವು ಹೇಳಿಕೊಡುವ ವಾಕ್ಯವು ಪ್ರಾಕೃತಭಾಷೆಯ ರೂಪದಲ್ಲಿರಲಿ, ಸಂಸ್ಕೃತಭಾಷೆಯ ರೂಪದಲ್ಲಿರಲಿ, ಅದು ವೇದವಾಕ್ಯವೇ ಎಂದು ನಂಬಬೇಕು- ಎಂಬ ಅಭಿಪ್ರಾಯವು ಹೊರಡುತ್ತದೆ. ಸೂರ್ಯನು ಹೇಗೆ ರೂಪವನ್ನು ಸಾಕ್ಷಾತ್ತಾಗಿ ಬೆಳಗುತ್ತಾನೋ, ಕಣ್ಣು ಮುಂತಾದದ್ದು ಸೂರ್ಯನ ಬೆಳಕಿನ ಮೂಲಕವಾಗಿ ಹೇಗೆ ತೋರಿಸುತ್ತದೆಯೋ, ಹಾಗೆ ಸದ್ಗುರುವಾದವನು ಬೋಧಿಸುವದು ವೇದವಾಕ್ಯವೇ ಆದ್ದರಿಂದ ಅದು ಸ್ವತಃ ಪ್ರಮಾಣವಾಗಿರುತ್ತದೆ : ಅದು ಮತ್ತೊಬ್ಬರು ಹೇಳಿದ್ದ ಮಾತನ್ನು 'ಹೇಳೆಂದ ಕೇಳೆಂದ' ಎಂದು ತಿಳಿಸುವ ವಾಕ್ಯವಲ್ಲ. **'ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ'** ಅದನ್ನು ದೀರ್ಘದಂಡನಮಸ್ಕಾರದಿಂದಲೂ ಸಮಯವರಿತು ಪ್ರಶ್ನೆ ಮಾಡುವದರಿಂದಲೂ ಶುಶ್ರೂಷೆಯಿಂದಲೂ ಅರಿತುಕೊ. **'ಉಪದೇಕ್ಷ್ಯನ್ತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ'** ತತ್ತ್ವವನ್ನು ಅನುಭವದಿಂದ ಕಂಡುಕೊಂಡಿರುವ

ಜ್ಞಾನಿಗಳು ಜ್ಞಾನವನ್ನು ನಿನಗೆ ಹತ್ತಿರವಾಗಿಯೇ ಅರಿವಾಗುವಂತೆ ತೋರಿಸಿ ಕೊಡುತ್ತಾರೆ (ಗೀ.೪-೩೪)- ಎಂದು ಭಗವಂತನು ಹೇಳಿರುವಂತೆ ಅನುಭವದ ಆಧಾರದಿಂದಲೇ ಅವರು ಹೇಳಿಕೊಡುತ್ತಿರುವದರಿಂದಆ ವಾಕ್ಯವು ವೇದವಾಕ್ಯವೇ ಆಗಿರುತ್ತದೆ. ಆದ್ದರಿಂದಲೇ **'ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಣ್ಡವ'-** ಅವರು ಉಪದೇಶಿಸಿದ್ದನ್ನು ಅರಿತುಕೊಂಡರೆ ಮತ್ತೆ ಹೀಗೆ ಮೋಹವನ್ನೈದುವದಿಲ್ಲ (ಗೀ.೪-೩೫) ಎಂದು ಭಗವಂತನು ಅಪ್ಪಣೆಕೊಡಿಸಿ ರುತ್ತಾನೆ. **'ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ'** ಆದ್ದರಿಂದ ಸರ್ವಭೂತಗಳನ್ನೂ ನಿನ್ನಲ್ಲಿಯೂ ಆ ಬಳಿಕ ನನ್ನಲ್ಲಿಯೂ ಕಂಡುಕೊಳ್ಳುವೆ- ಸರ್ವಭೂತಗಳೂ ನಿನ್ನ ಆತ್ಮನನ್ನೇ ಆಶ್ರಯಿಸಿಕೊಂಡಿರುವವೆಂಬುದನ್ನು ಕಂಡು ಕೊಳ್ಳುವದರಿಂದ, ಆ ನಿನ್ನ ಆತ್ಮನು ಭಗವಂತನಾದ ನಾನೇ ಎಂದೂ ಅರಿತು ಕೊಳ್ಳುವೆ- ಎಂದೂ ಅಪ್ಪಣೆಕೊಡಿಸಿರುತ್ತಾನೆ. ಇದು 'ಸಾಕ್ಷಾತ್' ಎಂಬ ಶಬ್ದಕ್ಕೆ ಮಾಡಿಕೊಳ್ಳಬೇಕಾದ ಎರಡನೆಯ ಅನ್ವಯದಿಂದ ದೊರಕುವ ಅಭಿಪ್ರಾಯವು. ಇನ್ನು **ಯ ಆಶ್ರಿತಾನ್ 'ಸಾಕ್ಷಾದ್ ಬೋಧಯತಿ'** ತನ್ನ ಆಶ್ರಿತರಾದ ಶಿಷ್ಯರಿಗೆ **ನೇರಾಗಿ ಬೋಧವನ್ನುಂಟುಮಾಡುತ್ತಾನೆ-** ಎಂದೂ ಈ ಪದಕ್ಕೆ ಅನ್ವಯವನ್ನು ಮಾಡಿಕೊಳ್ಳಬಹುದು. ಇದರ ಅಭಿಪ್ರಾಯವೇನೆಂದರೆ, ಶ್ರೀಗುರುಮೂರ್ತಿಯ ರೂಪದಲ್ಲಿರುವ ಶ್ರೀದಕ್ಷಿಣಾಮೂರ್ತಿಯು ಉಪದೇಶಿಸಿದನೆಂದರೆ, 'ಹೀಗೆಂದು ಗುರುಗಳು ಹೇಳುತ್ತಾರೆ' ಎಂದು ಪರೋಕ್ಷವಾಗಿ ಅರ್ಥವಾಗುವದಿಲ್ಲ ; ಇದು ಹೀಗೆಯೇ ಇದೆ- ಎಂದು ನೇರಾದ ಅನುಭವವು ಉಂಟಾಗಿಯೇ ಬಿಡುತ್ತದೆ. ಇದನ್ನೇ ಭಗವಂತನು 'ದ್ರಕ್ಷ್ಯಸಿ' ಕಂಡುಕೊಳ್ಳುವೆ- ಎಂಬ ಅನುಭವ ಪರ್ಯವ ಸಾನತ್ವವನ್ನು ಸೂಚಿಸುವ ಮಾತಿನಿಂದ ತಿಳಿಸಿರುತ್ತಾನೆ. ಆಗಮವನ್ನು ಬಲ್ಲ ಸದ್ಗುರುವು ಉಪದೇಶಿಸಿದಮೇಲೂ ಅನುಭವವಾಗಲಿಲ್ಲ ಎಂಬ ಮಾತು 'ದೀಪವನ್ನು ಹತ್ತಿಸಿದರೂ ಬೆಳಕಾಗಲಿಲ್ಲ, ಕತ್ತಲೆ ಹೋಗಲಿಲ್ಲ' ಎಂಬ ಮಾತಿನಂತೆ ಸಾಹಸದ ಮಾತಾಗುವದು. **ಆಗಮ**ವೆಂದರೆ ವೇದಾರ್ಥವನ್ನು ಬೋಧಿಸುವ ಸತ್ಸಂಪ್ರದಾಯಕ್ರಮವು. 'ತತ್ತ್ವಮಸಿ' ಎಂಬಲ್ಲಿ ತ್ವಮ್ ಎಂಬ ಶಬ್ದವು ದೇಹೇಂದ್ರಿಯಾದಿಗಳ ಉಪಾಧಿಯಿಂದ ಕರ್ತೃವೂ ಭೋಕ್ತೃವೂ ಆಗಿರುವ ಸಂಸಾರಿ ನಾನೆಂದು ತಿಳಿದುಕೊಂಡಿರುವ ಶ್ವೇತಕೇತುವನ್ನು- ಶ್ರೋತೃವಾಗಿರುವ ಶಿಷ್ಯನನ್ನು- ತಿಳಿಸುತ್ತದೆ. ತತ್ ಎಂಬ ಪದಾರ್ಥವು ಜಗತ್ಕಾರಣವಾಗಿರುವ ಸದ್ಬ್ರಹ್ಮವನ್ನು ತಿಳಿಸುತ್ತದೆ- ಎಂಬುದು ತಟ್ಟನೆ ಹೊಳೆಯುವ ಅರ್ಥವು. ಆದರೆ ತತ್ತ್ವಮಸಿ ಎಂಬ ವಾಕ್ಯವು ಶ್ರೋತೃವಾದ ನೀನೇ ಪರಮಾತ್ಮನು ಎಂದು ಹೇಳುವದರಿಂದ ಕೇಳುವ ಶಿಷ್ಯನಿಗೆ ಸ್ವಾಭಾವಿಕವಾಗಿ ತೋರುತ್ತಿರುವ ದೇಹ ಪ್ರಾಣೇಂದ್ರಿಯಮನಆದಿ

ಮಿಥ್ಯೋಪಾಧಿಗಳನ್ನು ತೊಲಗಿಸಿ ನಿನ್ನ ಸ್ವರೂಪವು ಚೈತನ್ಯಮಾತ್ರವೇ ಎಂದು ತಿಳಿಸುವದು. 'ತತ್' ಜಗತ್ತಿಗೆ ಕಾರಣವು ಎಂದು ಹೇಳಿದ ಬ್ರಹ್ಮವು ಸಚ್ಚಿದ್ರೂಪವಾಗಿರುವದೆಂದೂ ಜನ್ಮಮರಣಾದಿಸರ್ವಸಂಸಾರಧರ್ಮರಹಿತವಾಗಿರುವದೆಂದೂ ಅದೇ ಮಿಥ್ಯೋಪಾಧಿಗಳಿಂದ ಜೀವನಾಗಿ ಈ ಶರೀರದಲ್ಲಿ ಹೊಕ್ಕಿರುವಂತೆ ತೋರುತ್ತಿರುವದೆಂದೂ ಪರಮಾತ್ಮಸ್ವರೂಪವನ್ನು ಅತದ್ಧರ್ಮನಿವೃತ್ತಿಯ ಕ್ರಮದಿಂದ- ಅದರದ್ದಲ್ಲದ ಧರ್ಮವನ್ನೆಲ್ಲ ಬಾಧಿಸಿ ತಿಳಿಸುವ ರೀತಿಯಿಂದ- ಅನುಭವಿಸಿಯಾದ ಗುರುವು ಬೋಧಿಸುವದೇ ಆಗಮವು. ಅಂಥ ಗುರುಬೋಧೆಯಿಂದ ಆಸ್ತಿಕನಾಗಿಯೂ ಶ್ರವಣಗ್ರಹಣಮನನಗಳಲ್ಲಿ ಚತುರನಾಗಿಯೂ ಇರುವ ಶಿಷ್ಯನು ತತ್ತ್ವವನ್ನು ಅನುಭವದನ್ನು ಕಂಡುಕೊಳ್ಳುವದಿಲ್ಲವೆಂದು ಹೇಗೆತಾನೆ ಹೇಳಲಾದೀತು ?

ಪರಮಾತ್ಮನ ಸಾಕ್ಷಾತ್ಕರಣವೆಂದರೆ ವಾಕ್ಯಜ್ಞಾನವಾದ ಬಳಿಕ ಜ್ಞಾನಾಭ್ಯಾಸವನ್ನು ಮಾಡಿ ನೇರಾದ ಅನುಭವಗಳನ್ನು ಹೊಂದುವದು ಎಂದು **ಪ್ರಸಂಖ್ಯಾನವಾದಿ**ಗಳಾದ ವೇದಾಂತಿಗಳು ಹೇಳುತ್ತಿದ್ದರು. ಇದು ಸರಿಯಲ್ಲ. ಏಕೆಂದರೆ ವಾಕ್ಯಕ್ಕೆ ಪರೋಕ್ಷವಸ್ತುವನ್ನು ಪರೋಕ್ಷವಾಗಿಯೂ ಅಪರೋಕ್ಷವಾಗಿರುವದನ್ನು ಅಪರೋಕ್ಷವಾಗಿಯೂ ತಿಳಿಯಿಸಿಕೊಡುವ ಶಕ್ತಿಯಿದೆ. 'ಆ ನಗರದಲ್ಲಿ ದಾನವೀರನಾದ ಒಬ್ಬ ಸಾಹುಕಾರನಿದ್ದಾನೆ' ಎಂಬ ವಾಕ್ಯವು ವ್ಯವಹಿತವಾದ ವಸ್ತುವನ್ನು- ದೂರದಲ್ಲಿದ್ದು ಕಾಲಾನುಕಾಲಕ್ಕೆ ನೋಡಬಹುದಾದ ಸಾಹುಕಾರನನ್ನು- ತಿಳಿಸುವದರಿಂದ ಈ ವಾಕ್ಯದ ಜ್ಞಾನವಾದಮೇಲೂ ಜ್ಞೇಯವಸ್ತುವನ್ನು ಸಾಕ್ಷಾತ್ಕರಿಸಿಕೊಳ್ಳುವದಕ್ಕೆ ಪ್ರಯತ್ನಿಸತಕ್ಕದ್ದಿರುತ್ತದೆ. ಆದರೆ ಅಪರೋಕ್ಷವಾಗಿರುವ ವಸ್ತುವಿನ ವಿಷಯದಲ್ಲಿ ಈ ಪ್ರಯತ್ನವು ಬೇಕಿಲ್ಲ. ಹತ್ತು ಜನ ಮಂಕರಲ್ಲಿ ಪ್ರತಿಯೊಬ್ಬನೂ ಮಿಕ್ಕವರನ್ನು ಎಣಿಸಿ ತನ್ನನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಇದ್ದದ್ದರಿಂದ ನಮ್ಮಲ್ಲಿ ಹತ್ತನೆಯವನೊಬ್ಬನು ಇಲ್ಲವಾಗಿರುತ್ತಾನೆ ಎಂಬ ತಿಳಿವಾಗಿತ್ತಂತೆ : ಆ ಸಂದರ್ಭದಲ್ಲಿ ದಾರಿಹೋಕನು 'ನೀನೇ ಹತ್ತನೆಯವನು' ಎಂದು ಬೋಧಿಸಲು ಶ್ರೋತೃವಾದವನಿಗೆ ಹತ್ತನೆಯವನ ಸಾಕ್ಷಾತ್ಕಾರವಾಯಿತು, ಅದಕ್ಕಾಗಿ ಅವನು ಮತ್ತೆ ಪ್ರಯತ್ನಿಸಬೇಕಾದದ್ದು ಉಳಿಯಲಿಲ್ಲ. ಇದರಂತೆ ಜ್ಞೇಯವಾದ ದೇಹಾದಿಗಳನ್ನೇ ತಾನೆಂದು ತಿಳಿದುಕೊಂಡು ದುಃಖಿಸುತ್ತಿರುವ ಜೀವನಿಗೆ, 'ದೇಹಾದಿಗಳನ್ನೆಲ್ಲ ನೋಡುತ್ತಿರುವ ಸರ್ವಸಾಕ್ಷಿಯಾದ ಔಪನಿಷದಪುರುಷನೇ ನೀನು' ಎಂದು ಗುರುವು ಬೋಧಿಸಿದರೆ ಶಿಷ್ಯನು ಸಾಕ್ಷಾದಪರೋಕ್ಷಾದ್ಬ್ರಹ್ಮವೇ ಆಗಿರುವದರಿಂದ ತನ್ನ ಪರಮಾತ್ಮನು ತನಗಿಂತ ಬೇರೆಯಾಗಿ ಯಾವ

ದೇಶಕಾಲವಸ್ತುಗಳ ವ್ಯವಧಾನವೂ ಇಲ್ಲದವನಾಗಿರುವದರಿಂದ- ಅವನಿಗೆ 'ನಾನೇ ಆ ನಿತ್ಯಶುದ್ಧಬುದ್ಧಮುಕ್ತನಾದ ಪರಮಾತ್ಮನು' ಎಂಬ ಅನುಭವವಾಗಿಬಿಡುವದು, ನಾನು ಸಂಸಾರಿ ಎಂಬ ಅಜ್ಞಾನದ ಮೋಹವು ತೊಲಗಿಬಿಡುವದು. ಅದರ ಮೇಲೆ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುವದಕ್ಕೆ ಪ್ರಯತ್ನವನ್ನು ಮಾಡಬೇಕಾದದ್ದೇನೂ ಇರುವದಿಲ್ಲ.

ಈ ಜ್ಞಾನವು ನಿಷ್ಫಲವೆಂದು ತಿಳಿಯುವಹಾಗಿಲ್ಲ. ಏಕೆಂದರೆ 'ಜನ್ಮಮರಣ ಜರಾದುಃಖರಹಿತನಾದ ಪರಮಾತ್ಮನೇ ನಾನು' ಎಂಬ ಅರಿವು ಯಾವನಿಗೆ ಯಾವಾಗ ಆಗುವದೋ, ಅವನಿಗೆ ಆಗಿನಿಂದಲೇ ಜನ್ಮಮರಣಾದಿಲಕ್ಷಣವಾದ ಸಂಸಾರದ ದುಃಖವು ಅಜ್ಞಾನನಿವೃತ್ತಿಮಾತ್ರದಿಂದಲೇ ತೊಲಗಿಹೋಗುತ್ತದೆ. ಇನ್ನು ಮುಂದೆ ಅವನು ಈ ಸಂಸಾರಸಾಗರಕ್ಕೆ ಮತ್ತೆ ಬಂದು ಬೀಳುವದಿಲ್ಲ. ಅಥವಾ ಬೀಳುವದಿಲ್ಲವೆಂದೇಕೆ ಹೇಳೋಣ ? 'ನಾನು ಹಿಂದೆಯೂ ಸಂಸಾರಿಯಾಗಿರಲಿಲ್ಲ, ಈಗಲೂ ಸಂಸಾರಿಯಲ್ಲ, ಮುಂದೆಯೂ ಸಂಸಾರಿಯಾಗಿರುವ ಸಂಭವವಿಲ್ಲ. ಏಕೆಂದರೆ ಸಚ್ಚಿದಾನಂದ ಸ್ವರೂಪನಾದ ಅದ್ವಿತೀಯಬ್ರಹ್ಮವೇ ನಾನು'- ಎಂಬ ಪರಮಾನಂದದಾಯಕವಾದ ಪ್ರತಿಬೋಧವು ಅವನಿಗೆ ಆಗಿಬಿಟ್ಟಿರುತ್ತದೆ.

:::::::::

## ೪. ಪರಮಾತ್ಮನು ಸ್ವಯಂಪ್ರಕಾಶನು

**ನಾನಾಚ್ಛಿದ್ರಘಟೋದರಸ್ಥಿತಮಹಾದೀಪಪ್ರಭಾಭಾಸ್ವರಂ**

**ಜ್ಞಾನಂ ಯಸ್ಯ ತು ಚಕ್ಷುರಾದಿಕರಣದ್ವಾರಾ ಬಹಿಃ ಸ್ಪಂದತೇ ।**

**ಜಾನಾಮೀತಿ ತಮೇವ ಭಾನ್ತಮನುಭಾತ್ಯೇತತ್ಸಮಸ್ತಂ ಜಗತ್**

**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥**

''ಬಗೆಬಗೆಯ ರಂಧ್ರಗಳಿಂದ ಗಡಿಗೆಯೊಳಗಿರುವ ದೊಡ್ಡ ದೀಪದ ಬೆಳಕಿನಂತೆ ಹೊಳೆಯುವ ಯಾವನ ಜ್ಞಾನವೇ ಚಕ್ಷುರಾದೀಂದ್ರಿಯಗಳ ಮೂಲಕ ಹೊರಕ್ಕೆ ಹೊರಟುಬರುತ್ತಿರುವದೋ, 'ಅರಿಯುತ್ತಿದ್ದೇನೆ' ಎಂದು ಹೊಳೆಯುವ ಯಾವ ಆತನನ್ನೇ ಅನುಸರಿಸಿ ಈ ಜಗತ್ತೆಲ್ಲವೂ ತೋರಿಕೊಳ್ಳುತ್ತಿರುವದೋ, ಆ ಶ್ರೀಗುರುಮೂರ್ತಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ'' ಎಂಬುದು ಶ್ಲೋಕದ ಅಕ್ಷರಾರ್ಥ.

ಪರಮಾತ್ಮನ ಪ್ರಕಾಶವೇ ವಸ್ತುಗಳ ತೋರಿಕೆ ; ಆ ಪರಮಾತ್ಮನು ನಾನು-ಎಂದು ಸಾಕ್ಷಾತ್ತಾಗಿ ಅನುಭವಕ್ಕೆ ತಂದುಕೊಂಡರೆ ಮತ್ತೆ ಈ ಸಂಸಾರಸಾಗರದಲ್ಲಿ ನಾವು ಬೀಳುವ ಅಂಜಿಕೆಯಿಲ್ಲ. ಇದನ್ನು ಹಿಂದಿನ ಶ್ಲೋಕದಲ್ಲಿ ಹೇಳಲಾಗಿದೆ.

ಆ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಉಪಾಯವೇನು ? ಆ ಪರಮಾತ್ಮನು ನಾನು-ಎಂಬ ನೇರಾದ ಅನುಭವವನ್ನು ಮಾಡಿಕೊಂಡು ಸಂಸಾರಸಾಗರದ ಪಾರವನ್ನು ಕಾಣುವ ಬಗೆ ಎಂತು ?- ಎಂಬ ಪ್ರಶ್ನೆಯು ಸಹಜವಾಗಿ ಎದ್ದುಕೊಳ್ಳುತ್ತದೆಯಷ್ಟೆ ? ಅದಕ್ಕೆ ಈಗ ಉತ್ತರವನ್ನು ತಿಳಿಸಲಾಗುವದು.

ಪರಮಾತ್ಮನ ಬೆಳಕೇ ವಸ್ತುಗಳ ತೋರಿಕೆಯ ಬೆಳಕು ಎಂಬುದರ ಅರ್ಥವೇನು ? ಇದನ್ನು ನಾವು ವಿಮರ್ಶೆಮಾಡತಕ್ಕದ್ದು ಅವಶ್ಯ. ಏಕೆಂದರೆ ವಸ್ತುಗಳು ತೋರುವಾಗಲೆಲ್ಲ ನಾವು ಪರಮಾತ್ಮನ ಬೆಳಕನ್ನೇ ನೋಡುತ್ತಿರುವೆವು ಎಂದು ಹೇಳುವದರಿಂದ ಆ ಬೆಳಕಿನ ಮೂಲವು ಯಾವದು ?- ಎಂಬುದನ್ನು ಕಂಡುಹಿಡಿದರೆ ನಮಗೆ ಪರಮಾತ್ಮನ ಸಾಕ್ಷಾತ್ಕಾರವು ಸುಲಭವಾಗಿ ಆಗಿಬಿಟ್ಟೀತು. ಜನರೆಲ್ಲರೂ ಸೂರ್ಯನ ಬೆಳಕಿನಲ್ಲಿಯೇ ವ್ಯವಹರಿಸುತ್ತಿದ್ದರೂ ಅತ್ತಕಡೆಗೆ ಮನಸ್ಸಿನ ಅವಧಾನವನ್ನು ಸೆಳೆದುಕೊಂಡ ಹೊರತು ತಮಗೆ ಸೂರ್ಯನ ಬೆಳಕು ಕಂಡಲ್ಲದೆ ಯಾವ ವಸ್ತುವೂ ಕಾಣಿಸುವದಿಲ್ಲವೆಂಬುದು ಸ್ಫುಟವಾಗುವದಿಲ್ಲ. ಇಲ್ಲೊಂದು ಮರವಿದೆ, ಅಲ್ಲೊಂದು ಪ್ರಾಣಿಯಿದೆ ; ಆ ಕಡೆ ಬೆಟ್ಟವಿದೆ, ಈ ಕಡೆ ನದಿಯಿದೆ ; ನನ್ನ ಮುಂದೆ ಅನೇಕ ಜನರು ಕಾಣಿಸಿಕೊಳ್ಳುತ್ತಾರೆ- ಎಂದು ಮುಂತಾಗಿ ನಾವು ವ್ಯವಹಾರಮಾಡುವಾಗ ನಾವು ನೋಡುತ್ತಿರುವ ಮರ, ಪ್ರಾಣಿ, ಬೆಟ್ಟ, ನದಿ, ಜನರು- ಎಲ್ಲರೂ ಸೂರ್ಯನ ಬೆಳಕಿನಲ್ಲಿಯೇ ನಮಗೆ ಕಾಣಿಸಿಕೊಳ್ಳುತ್ತಿರುತ್ತಾರೆ. ಆದರೂ ಸಾಮಾನ್ಯವಾಗಿ ನಾವು ಈಗ ಬೆಳಕನ್ನು ಕಾಣುತ್ತಿದೇವೆ-ಎಂದೇನೂ ನಮಗೆ ಅರಿವಾಗುವದಿಲ್ಲ. ಇದೇಕೆ ? ಮರ, ಪ್ರಾಣಿ, ಬೆಟ್ಟ, ನದಿ-ಮುಂತಾದ ವಸ್ತುಗಳ ವಿಚಾರದಲ್ಲಿಯೇ ನಮ್ಮ ಮನಸ್ಸು ಮುಳುಗಿರುತ್ತದೆ. ಹೊರಗಿನ ವಿಷಯಗಳಲ್ಲಿ ಕೆಲವು ನಮಗೆ ಬೇಕು, ಕೆಲವು ಬೇಡ ; ಇನ್ನು ಕೆಲವು ವಿಷಯಗಳಲ್ಲಿ ನಮಗೆ ಅನಾದರ. ಆದ್ದರಿಂದ ನಾವು ಬೇಕಾದ ವಸ್ತುಗಳನ್ನು ಸಂಪಾದಿಸಿಕೊಂಡು ಅನುಭವಿಸುವದಕ್ಕೂ ಬೇಡದ ವಸ್ತುಗಳನ್ನು ತೊಲಗಿಸಿಕೊಂಡು ಅವುಗಳಿಂದಾಗಬಹುದಾದ ದುಃಖವನ್ನು ನೀಗಿಕೊಳ್ಳುವದಕ್ಕೂ ನಿರಂತರವಾಗಿ ಹವಣಿಸುತ್ತಿರುತ್ತೇವೆ. ಬೇಕೆಂಬುದು ವ್ಯವಹಾರಮಾತ್ರಕ್ಕೆ ಅತ್ಯವಶ್ಯವಾಗಿ ಎಲ್ಲರಿಗೂ ಬೇಕಾಗಿರುವುದರಿಂದಲೂ ಅದು ನನಗೊಬ್ಬನಿಗೇ ಬೇಕು, ಮತ್ತೊಬ್ಬನಿಗೆ ಅದು ಇರಬಾರದು- ಎಂಬ ಇಚ್ಛೆಯನ್ನು ಮಾಡುವದು ಸಾಧ್ಯವೂ

ಇಲ್ಲದೆ ಹಾಗೆ ಮಾಡುವ ಸಂಭವವೂ ಇಲ್ಲದೆ ಇರುವದರಿಂದಲೂ ನಾವು ಆ ಬೆಳಕು ಎಲ್ಲೆಲ್ಲಿಯೂ ಹರಡಿಕೊಂಡಿದ್ದರೂ ಅದು ಇಲ್ಲವೇ ಇಲ್ಲವೋ- ಎಂಬಂತೆ ಅದರ ವಿಚಾರಕ್ಕೆ ಮನಸ್ಸು ಹಾಕದೆ ಇರುವೆವು. ಅಲ್ಲವೆ ? ಹೀಗೆಯೇ ಬೆಳಕೂ ಮತ್ತು ಬೆಳಕಿನ ವಸ್ತುಗಳೂ ನಮಗೆ 'ತೋರುವದು' ಎಂಬುದು ಪರಮಾತ್ಮನ ಬೆಳಕಿನ ನೆರವಿನಿಂದಲೇ ಆಗಿದ್ದರೂ ನಾವು ಸಾಮಾನ್ಯವಾಗಿ ಅದರ ಇರುವಿಕೆಯನ್ನು ಕಡೆಗಣಿಸಿಯೇ ವ್ಯವಹರಿಸುತ್ತಿರುವೆವು.

ಇದನ್ನು ಈಗ ಸ್ವಲ್ಪ ಲಕ್ಷ್ಯವಿಟ್ಟು ನೋಡಿ ಆಲೋಚಿಸೋಣ. ನಮ್ಮ ಹೊರಗೆ ಇರುವ ಯಾವ ವಸ್ತುವಿನ ಜ್ಞಾನವಾದರೂ ನಮಗೆ ಇಂದ್ರಿಯಗಳ ಮೂಲಕವೇ ಆಗಬೇಕು. ಅಲ್ಲವೆ ? ಹೊರಗೆ ಬೆಳಕು ಇದೆ, ಆ ಬೆಳಕಿನ ನೆರವಿನಿಂದಲೇ ಮನೆಯಲ್ಲಿರುವ ವಸ್ತುಗಳನ್ನೂ ಹೊರಗೆ ಕಾಣುತ್ತಿರುವ ವಸ್ತುಗಳನ್ನೂ ನಾನು ಕಾಣುತ್ತಿರುವೆನು- ಎಂಬುದನ್ನು ನಾವು ಅನುಭವಕ್ಕೆ ತಂದುಕೊಳ್ಳುತ್ತಿರುವದು ಹೇಗೆ? ಕಣ್ಣಿಲ್ಲದವರಿಗೆ ಬೆಳಕಾಗಲಿ, ಬೆಳಕಿನಲ್ಲಿ ತೋರುವ ವಸ್ತುಗಳಾಗಲಿ ಕಾಣುವದಿಲ್ಲ. ಅವರು ಈ ವಸ್ತು ದೊಡ್ಡದು, ಅದು ಚಿಕ್ಕದು ; ಇದು ಹತ್ತಿರವಿದೆ, ಅದು ದೂರವಿದೆ- ಎಂದು ಮುಂತಾಗಿ ವ್ಯವಹಿಸುವದಿಲ್ಲ. ಯಾವ ವಸ್ತುವಿನ ಅರಿವಾಗಲಿ ಅವರಿಗೆ ಸ್ಪರ್ಶೇಂದ್ರಿಯದಿಂದಲೇ ಆಗಬೇಕಾಗಿರುತ್ತದೆ. ಆದರೆ ಯಾರಿಗೆ ಯಾವದಾದರೂ ರೋಗದ ನಿಮಿತ್ತದಿಂದ ಸ್ಪರ್ಶೇಂದ್ರಿಯದ ಸಹಾಯವು ದೂರವಾಗಿರುವದೋ ಅವರಿಗೆ ಕುರುಡರಂತೆ ವಸ್ತುಗಳನ್ನು ಮುಟ್ಟಿ ಅರಿತುಕೊಳ್ಳುವ ಭಾಗ್ಯವು ಇರುವದಿಲ್ಲ. ಇದರಂತೆ ಮಿಕ್ಕ ಇಂದ್ರಿಯಗಳೂ ಯಾರಿಗೆ ನೆರವಾಗಿರುವವೋ ಅವರಿಗೇ ಆಯಾ ಶಬ್ದ, ರಸ, ಗಂಧ- ಎಂಬ ವಿಷಯಗಳ ಅರಿವು ಆಗುತ್ತಿರುವದು. ಈ ಇಂದ್ರಿಯಗಳು ಕೆಲಸಮಾಡದೆ ಇರುವಾಗ- ಉದಾಹರಣೆಗೆ ಕನಸಿನಲ್ಲಿ ಅಥವಾ ತನಿನಿದ್ರೆಯಲ್ಲಿ- ನಮಗೆ ಯಾರಿಗೂ ಎಚ್ಚರದಲ್ಲಿ ಈಗ ಆಗುತ್ತಿರುವ ಬಾಹ್ಯವಸ್ತುಗಳ ಜ್ಞಾನವು ಆಗಲಾರದು. ಆದ್ದರಿಂದ ವಸ್ತು ಇದೆ, ಅದು ತೋರುತ್ತಿದೆ- ಎಂದರೆ ನಮ್ಮ ಇಂದ್ರಿಯಗಳ ಮೂಲಕವಾಗಿ ಅವುಗಳ ಅರಿವು ನಮಗೆ ಆಗುತ್ತಿದೆ ಎಂದೇ ಅರ್ಥ. ಆ ಅರಿವಿನ ಬೆಳಕಿನಿಂದಲೇ ವಸ್ತುಗಳಿವೆ ಯೆಂದೂ ತೋರುತ್ತವೆ- ಎಂದೂ ನಾವು ವ್ಯವಹರಿಸುತ್ತಿರುವೆವು. ಭೌತಿಕವಿಜ್ಞಾನ ಶಾಸ್ತ್ರವು ಕಂಡುಹಿಡಿದಿರುವ ತತ್ತ್ವಗಳೆಲ್ಲ ಈ ಇಂದ್ರಿಯಗಳ ಸಹಾಯದಿಂದಲೇ. ಇಂದ್ರಿಯಗಳೆಲ್ಲವೂ ಯಾವನಿಗೆ ಸುಸ್ಥಿತವಾಗಿರುವವೋ ಅವನಿಗೆ ಮಾತ್ರವೇ ಭೌತಿಕವಿಜ್ಞಾನಶಾಸ್ತ್ರದ ಸೂಕ್ಷ್ಮದರ್ಶಕಯಂತ್ರ, ದೂರದರ್ಶಕಯಂತ್ರ, ಧ್ವನಿವಾಹಕಯಂತ್ರ, ರೈಲು, ಹಡಗು, ಜಹಜು, ವಾಯು, ವಿಮಾನ, ಸ್ಫುಟನಿಕೆ- ಮುಂತಾದವುಗಳ ಅರಿವು ಆಗುವದು ; ಹಾಗಿಲ್ಲದವನಿಗೆ ಇಲ್ಲ.

ಪ್ರಪಂಚದ ಅರಿವು ಹೀಗೆ ಇಂದ್ರಿಯಗಳಿಂದಲೇ ಆಗುತ್ತಿರುವದೆಂಬುದು ನಮಗೆ ಹೇಗೆ ನಿಶ್ಚಿತವಾಗುತ್ತದೆ ?- ಎಂದು ಕೇಳಿದರೆ 'ಮನಸ್ಸಿನಿಂದ' ಎಂದು ಎಲ್ಲರೂ ಉತ್ತರಕೊಡಬೇಕಾಗುತ್ತದೆ. ಮನಸ್ಸಿನಿಂದಲ್ಲವೆ, ನಾವು ಇಂದ್ರಿಯಗಳ ಮೂಲಕ ಎಲ್ಲವನ್ನೂ ಕಾಣುತ್ತಿರುವದು ?

ಸರಿ, ಹಾಗಾದರೆ ಈ ಮನಸ್ಸಿಗಾದರೂ ಅರಿವು ಎಲ್ಲಿಂದ ಬರುತ್ತದೆ ?- ಎಂಬ ಪ್ರಶ್ನೆಯು ಈಗ ಎದ್ದುಕೊಳ್ಳುತ್ತದೆಯಷ್ಟೆ. ಇದಕ್ಕೆ ಉತ್ತರವೇನೆಂದರೆ, ಆತ್ಮನೇ ಮನಸ್ಸನ್ನು ನೇರಾಗಿ ಅರಿಯುತ್ತಾನೆ ; ಅವನ ಚೈತನ್ಯದ ಬೆಳಕೇ ಮನಸ್ಸಿನಲ್ಲಿ ಆಗುವ ವೃತ್ತಿರೂಪವಾದ ಜ್ಞಾನವು. ಹಾಗಾದರೆ ಆತ್ಮನಿಗೊ ? ಅವನಿಗೆಲ್ಲಿಂದ ಈ ಅರಿವು ಬರುತ್ತದೆ ?- ಎಂಬ ಪ್ರಶ್ನೆಯನ್ನು ಯಾರೂ ಹಾಕುವ ಹಾಗಿಲ್ಲ. ಏಕೆಂದರೆ ಆತ್ಮನ ಸ್ವರೂಪವೇ ಚೈತನ್ಯ, ಅರಿವು. ಆ ಅರಿವಿನ ಬೆಳಕಿನಿಂದಲೇ ಮನಸ್ಸು ಬೆಳಗುತ್ತದೆ ; ಆ ಬೆಳಕೇ ಇಂದ್ರಿಯಗಳಲ್ಲಿಯೂ ಸೇರಿಕೊಂಡು ಹೊರಗಿನ ವಿಷಯಗಳನ್ನು ಬೆಳಗಿ ತೋರಿಸುತ್ತಿರುತ್ತದೆ.

ಈಗ ನಮಗೆ ಹೊರಗಿನ ವಸ್ತುಗಳು ತೋರುವದೆಂದರೇನೆಂಬ ಪ್ರಶ್ನೆಗೆ ಉತ್ತರವು ದೊರಕಿದಂತೆ ಆಯಿತು. ಅದೇನೆಂದರೆ : ಪರಮಾತ್ಮನೇ ನಮ್ಮ ಆತ್ಮನು, ಆತನು ಜ್ಞಾನಸ್ವರೂಪನೇ ಆಗಿರುತ್ತಾನೆ. ಅವನ ಜ್ಞಾನದಿಂದಲೇ ಮನಸ್ಸು ಅಚೇತನವಾಗಿದ್ದರೂ- ಬೆಂಕಿಯಿಂದ ಕೆಂಪಗೆ ಕಾಯ್ದು ಹೊಳೆಯುವ ಕಬ್ಬಿಣದಂತೆ- ಹೊಳೆಯುವದಕ್ಕೆ ಮೊದಲಾಗುತ್ತದೆ. ಆ ಹೊಳೆಯುವ ಮನಸ್ಸೇ ಇಂದ್ರಿಯ ಗಳಲ್ಲಿಯೂ ತೋರಿಕೊಳ್ಳುತ್ತದೆ. ಸೂರ್ಯನ ಬೆಳಕಿನಿಂದ ಹೊಳೆಯುವ ತವರದ ತಗಡಿನಂತೆಯೂ ಗಾಜಿನ ಕನ್ನಡಿಗಳಂತೆಯೂ ಮನಸ್ಸು, ಇಂದ್ರಿಯಗಳು- ಎಲ್ಲವೂ ಚೈತನ್ಯವುಳ್ಳ ತತ್ತ್ವಗಳೆನ್ನುವಂತೆಯೇ ಹೊಳೆಯುತ್ತಿದ್ದು ಹೊರಗಿನ ವಸ್ತುಗಳನ್ನು ಆ ತಮ್ಮ ಎರವಲುತಂದ ಜ್ಞಾನದ ಬೆಳಕಿನಿಂದ ಬೆಳಗಿ ತೋರಿಸುತ್ತವೆ.

ಈ ರೀತಿಯಲ್ಲಿ ವಸ್ತುಗಳನ್ನು ಇಂದ್ರಿಯಗಳು ಬೆಳಗುವದು, ಇಂದ್ರಿಯ ಗಳಲ್ಲಿ ಆದರಿಂದಾದ ಮಾರ್ಪಾಡಿನಿಂದ ಮನಸ್ಸಿನಲ್ಲಿ ವೃತ್ತಿಗಳೆಂಬ ಹೊಳೆಯುವ ಅಲೆಗಳು ಎದ್ದುಕೊಳ್ಳುವದು, ಕೊನೆಯಲ್ಲಿ ಎಲ್ಲವೂ ಆತ್ಮನ ಸ್ವಾಭಾವಿಕವಾದ ಚೈತನ್ಯದ ಬೆಳಕನ್ನು ತೋರಿಸಿಕೊಡುವದು- ಇದೇ ವಸ್ತುಜ್ಞಾನಪ್ರಕಾರದ ತತ್ತ್ವ. ಆತ್ಮನು ತಾನೇ ಅರಿವಿನ ರೂಪವಾಗಿರುತ್ತಾನೆ ! ಆದರೆ ಮನಸ್ಸೂ, ಅದರ ಮೂಲಕ ಇಂದ್ರಿಯಗಳೂ ತಮ್ಮಲ್ಲಿ ಯಾವ ಚೈತನ್ಯವೂ ಇಲ್ಲದವುಗಳಾದರೂ ಆತ್ಮನ ಚೈತನ್ಯದಿಂದಲೇ ಚೈತನ್ಯವುಳ್ಳವಾಗಿ ತೋರುತ್ತವೆ. ವಿಷಯಗಳು ಇಂದ್ರಿಯಗಳಿಗೆ

ತೋರುತ್ತವೆ ಎಂದರೆ ಅವು ಇಂದ್ರಿಯಗಳಲ್ಲಿರುವ ಆ ಚೈತನ್ಯದ ಆಭಾಸದ (ತೋರಿಕೆಯ) ನಿಮಿತ್ತದಿಂದಲೇ ಹೊರಗೆ ಇರುವಂತೆ ತೋರುತ್ತವೆ.

ಇದಕ್ಕೊಂದು ದೃಷ್ಟಾಂತವನ್ನು ಶ್ಲೋಕದಲ್ಲಿ ಕೊಟ್ಟಿರುತ್ತದೆ. ಒಂದು ಗಡಿಗೆಯೊಳಗೆ ಒಂದು ದೊಡ್ಡದೀಪವಿದೆ ಎಂದು ಇಟ್ಟುಕೊಳ್ಳೋಣ. ಆಗ ಅದರೊಳಗೆ ಉರಿಯುತ್ತಿರುವ ದೀಪದ ಪ್ರಭೆಯು ಗಡಿಗೆಯನ್ನು ಮಾತ್ರ ವ್ಯಾಪಿಸಿರುತ್ತದೆ. ಆದರೆ ಅದೇ ಗಡಿಗೆಯಲ್ಲಿ ಬಗೆಬಗೆಯ ರಂಧ್ರಗಳಿದ್ದರೆ ಆ ರಂಧ್ರಗಳ ಪರಿಮಾಣಕ್ಕೆ ತಕ್ಕಂತೆ ಪ್ರಭೆಯು ಗಡಿಗೆಯಿಂದ ಹೊರಕ್ಕೂ ಹೋಗಿ ಅಲ್ಲಲ್ಲಿರುವ ವಸ್ತುಗಳನ್ನು ಬೆಳಗುತ್ತದೆಯಲ್ಲವೆ ? ಇದರಂತೆ, ಶರೀರವೆಂಬ ಗಡಿಗೆಯೊಳಗೆ ಇರುವ ಆತ್ಮಚೈತನ್ಯದ ಪ್ರಭೆಯು ಬೇರೆಬೇರೆಯ ಕರಣಗಳ ಮೂಲಕವಾಗಿ ಹೊರಕ್ಕೆ ಬಂದು ಹೊರಗಿನ ವಿಷಯಗಳನ್ನು ಆಯಾ ಕರಮದ ಸ್ವಭಾವಕ್ಕೆ ಅನುಗುಣವಾಗಿ ಬೆಳಗುತ್ತಿರುತ್ತದೆ. ಅದರ ತತ್ತ್ವವನ್ನು ಅರಿಯದವರು ಇಂದ್ರಿಯಗಳೇ ತಮ್ಮ ಸ್ವಂತ ಬೆಳಕಿನಿಂದ ವಿಷಯಗಳನ್ನು ಬೆಳಗುತ್ತವೆ ಎಂದು ಭ್ರಾಂತರಾಗಬಹುದು. ಆದರೆ ನಿಜವೇನು ? ಅವು ಬೆಳಕು ಹೊರಕ್ಕೆ ಹೊರಡುವದಕ್ಕೆ ದ್ವಾರಮಾತ್ರಗಳು. ಬೆಳಕು ಅವುಗಳಿಗೆ ಸೇರಿದ್ದಲ್ಲ; ನಿಜವಾಗಿ ಅದೆಲ್ಲ ಆತ್ಮನ ಬೆಳಕೇ ಆಗಿರುತ್ತದೆ.

ಇಲ್ಲಿ ದೃಷ್ಟಾಂತದಾರ್ಷ್ಟಾಂತಿಕಗಳಿಗೆ ಇರುವ ಒಂದು ಹೆಚ್ಚುಕಡಿಮೆಯನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಅದೇನೆಂದರೆ ದೃಷ್ಟಾಂತದಲ್ಲಿ ಗಡಿಗೆಯು ಮಣ್ಣಿನದಾಗಿರುತ್ತದೆಯಾದ್ದರಿಂದ ಅದರಲ್ಲಿ ಯಾವ ಬೆಳಕೂ ಇರುವದಿಲ್ಲ. ಅದರ ರಂಧ್ರಗಳ ಮೂಲಕ ಹೊರಕ್ಕೆ ಬರುವ ಬೆಳಕು ನೇರಾಗಿ ದೀಪದ್ದೇ ಆಗಿರುತ್ತದೆ. ಆದರೆ ದಾರ್ಷ್ಟಾಂತಿಕದಲ್ಲಿ ಆತ್ಮನ ಬೆಳಕು ಮನಸ್ಸನ್ನೂ ಇಂದ್ರಿಯಗಳನ್ನೂ ವ್ಯಾಪಿಸಿಕೊಂಡು ಬೆಳಗುವದಲ್ಲದೆ, ಅವುಗಳ ವೃತ್ತಿಯನ್ನು ಚಿದಾಭಾಸವಾಗಿ- ಅವಕ್ಕೂ ಅರಿವು ಉಂಟು ಎಂದು ತೋರುವಂತೆ- ಮಾಡಿರುತ್ತದೆ. ಕೆಲವು ದೇವಾಲಯಗಳಲ್ಲಿ ಸೂರ್ಯನ ಬಿಸಿಲನ್ನು ಮಾರುಹೊಳೆಯಿಸುವ ಕನ್ನಡಿಯಿಂದ ಗರ್ಭಗುಡಿಯೊಳಗಿನ ದೇವರ ಮೂರ್ತಿಯನ್ನು ಪೂಜಾರಿಯು ಕಾಣಿಸುವದುಂಟಷ್ಟೆ ? ಅದರಂತೆ ಇಲ್ಲಿ ಅಂತಃಕರಣವೂ ಬಹಿಃಕರಣಗಳೂ ಆತ್ಮನ ಚೈತನ್ಯದ ಆಭಾಸದಿಂದ ಕೂಡಿಕೊಂಡು ಆ ಬೆಳಕಿನ ಆಭಾಸದಿಂದಲೇ ಹೊರಗಿನ ವಿಷಯಗಳನ್ನು ತೋರಿಸುತ್ತಿರುತ್ತವೆ. ನಿಜವಾಗಿ ಅವಕ್ಕೆ ಯಾವ ಬೆಳಕೂ ಇರುವದೇ ಇಲ್ಲ.

ಇನ್ನೂ ಒಳಹೊಕ್ಕು ನೋಡಿದರೆ, ಆತ್ಮಚೈತನ್ಯವು ಎಲ್ಲೆಲ್ಲಿಯೂ ಎಡೆಬಿಡದೆ ವ್ಯಾಪಿಸಿಕೊಂಡೇ ಇರುತ್ತದೆ. ಮನಸ್ಸು, ಇಂದ್ರಿಯಗಳು- ಎಂದು ಹೊರನೋಟ

ದಿಂದ ನಾವು ನಿರ್ಧರಿಸಿರುವ ಕರಣಗಳೂ, ಅವುಗಳ ಅರಿವಿನ ಬೆಳಕಿನಿಂದ ತೋರಿಕೊಳ್ಳುವವೆಂದು ನಾವು ಭಾವಿಸುತ್ತಿರುವ ವಿಷಯಗಳೂ ಎಲ್ಲವೂ ಆತ್ಮಚೈತನ್ಯದಿಂದ ಸಂಪೂರ್ಣವಾಗಿ ವ್ಯಾಪ್ತವಾಗಿಬಿಟ್ಟಿರುತ್ತವೆ. ಮಂಜುಗಡ್ಡೆಯಲ್ಲೆಲ್ಲ ನೀರೇ ವ್ಯಾಪಿಸಿಕೊಂಡಿರುವಂತೆ. ಅನಾತ್ಮಪ್ರಪಂಚವಾದ ಮನಸ್ಸು, ಇಂದ್ರಿಯ, ವಿಷಯಗಳು- ಎಲ್ಲವನ್ನೂ ಆ ಚೈತನ್ಯವು ಸ್ವಲ್ಪವೂ ಉಳಿಯದಂತೆ ನಿಶ್ಶೇಷವಾಗಿ ವ್ಯಾಪಿಸಿಕೊಂಡಿರುತ್ತದೆ. ಈ ದೃಷ್ಟಿಯಿಂದ ನೋಡಿದರೆ ಆತ್ಮನು ಅದ್ವಿತೀಯಚೈತನ್ಯವೇ ಆಗಿರುತ್ತಾನೆ.

ಆದರೆ ನಾವು ಈಗಲೇ ಅಷ್ಟುದೂರ ಹೋಗಿ ವಿಚಾರಿಸದೆ ಇದ್ದರೂ ಆತ್ಮನ ಚೈತನ್ಯವೇ ಅನಾತ್ಮಗಳಲ್ಲಿ ಬೆಳಗುತ್ತಿರುವದೆಂತ ಹೇಳಬೇಕಾಗುತ್ತದೆ. ಅನಾತ್ಮಗಳು ತೋರುವದೆಂದರೆ ಆತ್ಮನ ಚೈತನ್ಯವು ಅವುಗಳನ್ನು ಬೆಳಗಿತೋರಿಸುತ್ತದೆ ಎಂದೇ ಅರ್ಥ.

ಈಗ ಆತ್ಮಚೈತನ್ಯವು ನಮಗೆ ಹೇಗೆ ತೋರುತ್ತಿರುತ್ತದೆ ? 'ನಾನು ಗಡಿಗೆಯನ್ನು ಅರಿತೆನು' ಎಂದು ಭಾವಿಸುವಾಗ 'ನಾನು' ಎಂಬ ವಸ್ತು ತೋರುವದು ಹೇಗೆ ? ಗಡಿಗೆಯು ತೋರುವದು ಹೇಗೆ ? ನೋಡಿದೆನು, ಅರಿತೆನು ಎಂದು ಮುಂತಾಗಿ ಆಗುವ ಅನುಭವದಲ್ಲಿರುವ ಕ್ರಿಯೆ ಯಾವದು ? ಫಲವು ಯಾವದು ?- ಇದನ್ನು ಒಂದಿಷ್ಟು ವಿಮರ್ಶಿಸುವದು ಒಳ್ಳೆಯದು.

ಆತ್ಮನು ಮನಸ್ಸು ಮೊದಲಾಗಿ ಇಂದ್ರಿಯ, ವಿಷಯ, ವೇದನೆಗಳು- ಎಲ್ಲಕ್ಕೂ ಸಾಕ್ಷಿಯಾಗಿ ಎಲ್ಲವನ್ನೂ ತನ್ನ ಕೂಟಸ್ಥವಾದ ಚೈತನ್ಯದಿಂದ ಬೆಳಗುತ್ತಿರುತ್ತಾನೆ. ಇಲ್ಲಿ 'ಆತ್ಮನು ಅನಾತ್ಮವನ್ನು ಬೆಳಗುತ್ತಾನೆ', ಎಂಬುದು 'ಸೂರ್ಯನು ಭೂಮಿಯನ್ನು ಬೆಳಗುತ್ತಾನೆ' - ಎಂಬಂತೆ ಆಗಿರುವ ಔಪಚಾರಿಕ ವ್ಯವಹಾರವಾಗಿರುತ್ತದೆ. ದೃಷ್ಟಾಂತದಲ್ಲಿ ಸೂರ್ಯನೂ ಬೆಳಕೂ ಒಂದೇ ; ಸೂರ್ಯನಲ್ಲಿ ಬೆಳಗುವದೆಂಬ ವ್ಯಾಪಾರವು ಯಾವದೂ ಇರುವದಿಲ್ಲ ; ಹೊಲದಲ್ಲಿರುವ ಪೈರನು ರೈತನು ಕುಡುಗೋಲಿನಿಂದ ಕ್ರಮಕ್ರಮವಾಗಿ ಕೊಯ್ದು ಕೆಳಗಿಡುವಂತೆ ಸೂರ್ಯನೇನೂ ವಸ್ತುಗಳನ್ನು ಕ್ರಮಕ್ರಮವಾಗಿ ಬೆಳಗುತ್ತಲೂ ಆಮೇಲೆ ಬೆಳಗುವ ವ್ಯಾಪಾರವನ್ನು ಬಿಡುತ್ತಲೂ ಇರುವದಿಲ್ಲ. ಇದರಂತೆ ಸಾಕ್ಷಿಚೈತನ್ಯ ಸ್ವರೂಪನಾದ ಆತ್ಮನು 'ಸಾಕ್ಷ್ಯವಾಗಿರುವ ಅನಾತ್ಮನನ್ನು ಬೆಳಗುತ್ತಾನೆ' ಎಂಬಲ್ಲಿ ಆತ್ಮನು ಯಾವ ಮಾರ್ಪಾಡೂ ಇಲ್ಲದ ಅರಿವಿನ ಸ್ವರೂಪನಾಗಿರುತ್ತಾನೆ. ಸರ್ವತ್ರ ವ್ಯಾಪ್ತವಾಗಿರುವ ಅವನ ಚೈತನ್ಯವು ಸಾಕ್ಷ್ಯವೆಲ್ಲವನ್ನೂ ಯಾವ ಪ್ರಯತ್ನವೂ ಯಾವ ವ್ಯಾಪಾರವೂ ಇಲ್ಲದೆ

ಒಮ್ಮೆಗೇ ತೋರಿಸಿಕೊಡುತ್ತಿರುತ್ತದೆ. ಆದ್ದರಿಂದಲೇ ಆತ್ಮನನ್ನು ''ಸರ್ವಜ್ಞನು' ಎಂದು ವೇದಾಂತಿಗಳು ಕರೆಯುತ್ತಿರುವರು.

ಆದರೆ ''ನಾನು'' ಎಂಬ ರೂಪದಿಂದ ಜೀವನು ಅಂತಃಕರಣವೆಂಬ ಉಪಾಧಿಯಿಂದ ಒಂದಾನೊಂದು ದೇಹೇಂದ್ರಿಯಗಳ ಗುಂಪಿನೊಳಗೆ ಇದ್ದು ಕೊಂಡು, ಅಂತಃಕರಣವೆಂಬ ಸಾಧನದಿಂದ ಇಂದ್ರಿಯಗಳ ಮೂಲಕವಾಗಿ ಹೊರಗಿನ ವಿಷಯಗಳನ್ನು ಬೆಳಗುತ್ತಿರುತ್ತಾನೆ. ವಿಷಯಕ್ಕೂ ಇಂದ್ರಿಯಕ್ಕೂ ಸಂಯೋಗವಾದಾಗ ಅವನಲ್ಲಿ ''ಈ ವಿಷಯವನ್ನು ಕಂಡೆನು, ಕೇಳಿದೆನು''- ಎಂದು ಮುಂತಾದ ಅರಿವು ಎದ್ದುಕೊಳ್ಳುತ್ತದೆ. ಆ ಅರಿವು ಚೈತನ್ಯವ್ಯಾಪ್ತವಾದ ಅಂತಃಕರಣದ ವೃತ್ತಿವಿಶೇಷವಾಗಿರುತ್ತದೆ. ಆ ವೃತ್ತಿಯುಂಟಾದಾಗ ''ನನಗೆ ಜ್ಞಾನವುಂಟಾಯಿತು' ಎಂದು ಜೀವನು ಬಗೆಯುತ್ತಾನೆ. ಆಗ ವೃತ್ತಿಯುಂಟಾದ ದ್ದಲ್ಲದೆ ವೃತ್ತಿಯ ಕೊನೆಯಲ್ಲಿ ಆತ್ಮಚೈತನ್ಯಸ್ವರೂಪದಲ್ಲಿಯೇ ಅದು ಪರ್ಯವಸಾನ ವಾಗುತ್ತದೆ. ಇದೇ **ಫಲಜ್ಞಾನವು.** ಚೈತನ್ಯವು ನಿತ್ಯವಾಗಿದ್ದರೂ ಆಯಾ ವೃತ್ತಿಯ ಕೊನೆಯಲ್ಲಿ ಅನುಭವಕ್ಕೆ ಬರುವದರಿಂದ ಆಯಾ ವಿಷಯದ ಅರಿವು- ಎಂಬ ರೂಪದಿಂದ ವ್ಯವಹಾರಕ್ಕೆ ವಿಷಯವಾಗುತ್ತದೆ. ಅಂತೂ ವಿಷಯಜ್ಞಾನದಲ್ಲಿ ಯಾವದು ಫಲರೂಪವಾಗಿರುದೋ, ಅದೇ ನಿಜವಾಗಿ ಆತ್ಮನು ; ಅದೇ ಸ್ವಯಂಪ್ರಕಾಶವಾಗಿರುವ ಚೈತನ್ಯವು.

ಹೀಗೆ ನಾನು ಅರಿಯುತ್ತೇನೆ ಎಂಬ ವ್ಯವಹಾರವನ್ನು ಸಂಪ್ರದಾಯಾನು ಸಾರವಾಗಿ ಬಿಡಿಸಿ ವಿಷಯಜ್ಞಾನವೆಲ್ಲವೂ ವೃತ್ತಿಜ್ಞಾನರೂಪವೆಂದೂ ಅದರ ತಿರುಳು ಸ್ವಯಂಪ್ರಕಾಶವಾಗಿರುವ ಆತ್ಮಚೈತನ್ಯವೇ ಎಂದೂ ಅದರ ಬೆಳಕನ್ನನುಸರಿಸಿಯೇ ಸೂರ್ಯಚಂದ್ರಾದಿಜಗತ್ತೆಲ್ಲವೂ ಬೆಳಗಿತೋರುತ್ತಿರುವದೆಂದೂ ತಿಳಿಸಬಲ್ಲ ಗುರುವೇ ನಮ್ಮಗಳ ಆತ್ಮನಾದ ಶ್ರೀದಕ್ಷಿಣಾಮೂರ್ತಿಯು- ಎಂದಾಯಿತು.

ಃಃಃಃಃಃಃಃಃ

## ೫. ದೇಹಾದಿಗಳಲ್ಲಿ ಆತ್ಮತ್ವಭ್ರಾನ್ತಿ

**ದೇಹಂ ಪ್ರಾಣಮಪೀನ್ದ್ರಿಯಾಣ್ಯಪಿ ಚಲಾಂ ಬುದ್ಧಿಂ ಚ ಶೂನ್ಯಂ ವಿದುಃ**
**ಸ್ತ್ರೀಬಾಲಾನ್ಧಜಡೋಪಮಾಸ್ತ್ವಹಮಿತಿ ಭ್ರಾನ್ತಾ ಭೃಶಂ ವಾದಿನಃ ।**
**ಮಾಯಾಶಕ್ತಿವಿಲಾಸಕಲ್ಪಿತಮಹಾವ್ಯಾಮೋಹಸಂಹಾರಿಣೇ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥**

ಪರಮಾತ್ಮನು ಸ್ವಯಂಪ್ರಕಾಶನೆಂದೂ ಆತನ ಚೈತನ್ಯಪ್ರಕಾಶದಿಂದಲೇ ಹೊರಗಿನ ವಸ್ತುಗಳೆಲ್ಲವೂ ನಮಗೆ ತೋರುತ್ತಿರುವವೆಂದೂ ಈವರೆಗೆ ತಿಳಿದು ಕೊಂಡದ್ದಾಯಿತು. ವಿಷಯಗಳನ್ನು ಇಂದ್ರಿಯಗಳ ಮೂಲಕವಾಗಿ ಚೈತನ್ಯವು ಬೆಳಗುತ್ತಿರುವದರಿಂದಲೇ ವಿಷಯನಾನಾತ್ವವೂ ವಿಷಯವೈಚಿತ್ರ್ಯವೂ ಜ್ಞಾನ ನಾನಾತ್ವವೂ ಜ್ಞಾನವೈಚಿತ್ರ್ಯವೂ ನಮಗೆ ತೋರುತ್ತಿದೆಯೇ ಹೊರತು ಪರಮಾರ್ಥ ವಾಗಿ ಈ ನಾನಾತ್ವವೈಚಿತ್ರ್ಯಗಳು ಇರುವದಿಲ್ಲ- ಎಂದು ಇದರಿಂದ ತಾನೇ ಸಿದ್ಧವಾಗುತ್ತದೆ.

ಆದರೂ ಇಲ್ಲಿ ಒಂದು ಶಂಕೆಯುಂಟಾಗುತ್ತದೆ. ವ್ಯವಹಾರದಲ್ಲಿ ಬೇರೆ ಬೇರೆಯ ವಸ್ತುಗಳನ್ನು ಅರಿಯುವಾಗ ನಮಗೆ ಇವನ್ನು ನೋಡುತ್ತೇನೆ, ಕೇಳು ತ್ತೇನೆ, ಮೂಸುತ್ತೇನೆ, ಮುಟ್ಟುತ್ತೇನೆ, ಅರಿಯುತ್ತೇನೆ- ಎಂದು ಮುಂತಾಗಿಯೇ ಅರಿವಾಗುತ್ತದೆ. ನನ್ನೊಳಗೆ ನಾನು ಆಲೋಚಿಸುತ್ತಿದೇನೆ, ನಿಶ್ಚಯಿಸುತ್ತೇನೆ, ಕಲ್ಪಿಸುತ್ತೇನೆ, ನೆನಪಿಸಿಕೊಳ್ಳುತ್ತೇನೆ- ಎಂದು ಮುಂತಾದ ವ್ಯವಹಾರಗಳೂ ನಮಗೆ ಆಗುತ್ತಿರುತ್ತವೆ. ಯಾವ ಜ್ಞಾನವಾಗಲಿ ಕೆಲಸವಾಗಲಿ ಇಲ್ಲದೆ ಇರುವ ಗಾಢ ನಿದ್ರೆಯ ವಿಷಯದಲ್ಲಿ ಕೂಡ ಸುಮ್ಮನಿದ್ದೆನು, ಏನನ್ನೂ ಮಾಡಲಿಲ್ಲ, ಏನನ್ನೂ ಅರಿಯಲಿಲ್ಲ- ಎಂದೇ ಪರಮಾರ್ಶನವಾಗುತ್ತದೆ. ''ನಾನು''ಎಂಬ ಪ್ರತ್ಯಯದ ಹಂಗಿಲ್ಲದೆ 'ಕೇವಲ ಚೈತನ್ಯಮಾತ್ರವು' ಎಂಬ ಅರಿವು ಆಗುವಂತೆಯೇ ಇಲ್ಲ. ''ನಾನು ಜ್ಞಾನಸ್ವರೂಪನು'' ಎನ್ನುವಾಗಲೂ 'ನಾನು' ಎಂಬ ಅರಿವು ಹತ್ತಿಕೊಂಡೇ ಆತ್ಮವ್ಯವಹಾರವಾಗುವದು ಕಂಡಿರುತ್ತದೆ. ಹೀಗಿರುವದರಿಂದ ಜಗತ್ತೆಲ್ಲವೂ ಕೇವಲ ಶುದ್ಧಚಿನ್ಮಾತ್ರರೂಪವಾದ ಪರಮಾರ್ಥದ ತೋರಿಕೆಯೆಂದೂ ಇದನ್ನು ಅರಿಯುವದು ಅದರ ಬೆಳಕಿನಿಂದಲೇ ಎಂದೂ ನಿಶ್ಚಯಿಸುವದು ಹೇಗೆ ಸರಿಯಾದೀತು ? ವ್ಯವಹಾರದಲ್ಲಿ ಎಲ್ಲರಿಗೂ ಆಗುತ್ತಿರುವ ಅನುಭವಕ್ಕನುಗುಣ ವಾಗಿ 'ನಾನು ಇಂದ್ರಿಯಗಳಿಂದ ವಿಷಯಗಳನ್ನು ಅರಿಯುತ್ತೇನೆ', 'ಮನಸ್ಸಿನ ಸಹಾಯದಿಂದ ಹಾಗೆ ಅರಿಯುತ್ತೇನೆ'- ಎಂದು ನಿಶ್ಚಯಿಸುವದೇ ಯುಕ್ತವಲ್ಲವೆ ? ''ನಾನು ವಿಷಯಗಳನ್ನು ಜ್ಞಾನೇಂದ್ರಿಯಗಳಿಂದಲೂ ಮನಸ್ಸಿನಿಂದಲೂ ಅರಿಯುತ್ತಿರುವ ಜ್ಞಾತೃಸ್ವರೂಪನು, ಕರ್ಮೇಂದ್ರಿಯಗಳ ಸಹಾಯದಿಂದ ಕೆಲಸಮಾಡುತ್ತಿರುವ ಕರ್ತೃಸ್ವರೂಪನು' ಎಂದು ತಿಳಿಯುವದೇ ಯುಕ್ತವಲ್ಲವೆ ?

ಈ ತರ್ಕಸರಣಿಯು ಸರಿಯಲ್ಲ. ಏಕೆಂದರೆ ನಮ್ಮ ಅನುಭವದಲ್ಲಿ ಯಾವದನ್ನು ನಾನೆಂದು ತಿಳಿದಿರುವೆವೋ ಅದೇ ನಮ್ಮ ಆತ್ಮನೆಂದೂ ಅದಕ್ಕಿಂತ ಬೇರೆಯಾಗಿ ಅದರ ಸ್ವರೂಪವು ಇಲ್ಲವೇ ಇಲ್ಲವೆಂದೂ ನಂಬುವದು ಕುರುಡರಿಗೆ

ಬೆಳಕೆಂಬುದು ಕಾಣುವದಿಲ್ಲವಾದ್ದರಿಂದ ಬೆಳಕೆಂಬ ವಸ್ತುವೇ ಇಲ್ಲವೆಂದು ನಿಶ್ಚಯಿಸುವ ಅಪಸಿದ್ಧಾಂತವನ್ನು ಹೋಲುತ್ತದೆ. ಪ್ರಪಂಚದ ವ್ಯವಹಾರದಲ್ಲಿಯೇ ನಿರತರಾಗಿರುವ **ಪ್ರಾಕೃತಜನರು** ಉಣ್ಣುವದು, ತಿನ್ನುವದು, ಕುಡಿಯುವದು, ನಿದ್ರಿಸುವದು- ಇಷ್ಟೇ ಜೀವನದಲ್ಲಿ ಪರಮಪುರುಷಾರ್ಥವೆಂದು ತಿಳಿಯಬಹುದು. ಅಷ್ಟುಮಾತ್ರದಿಂದ ಪ್ರಪಂಚದಲ್ಲಿ ವಿವೇಕಿಗಳಿಗೂ ಅದೇ ಪುರುಷಾರ್ಥವೆನಿಸೀತೆ ? **ಚಾರ್ವಾಕಸಿದ್ಧಾಂತದವರು** ಪ್ರತ್ಯಕ್ಷದಿಂದ ಕಾಣದೆ ಇರುವ ಪದಾರ್ಥಗಳು ಇಲ್ಲವೆಂದೂ ಶರೀರವೇ ನಮ್ಮ ಸ್ವರೂಪವು, ಶರೀರದ ಸುಖಕ್ಕಾಗಿಯೇ ನಮ್ಮ ಜೀವನವನ್ನು ಮೀಸಲಾಗಿಟ್ಟುಕೊಳ್ಳುವದು ನ್ಯಾಯವು ಎಂದೂ ವಾದಿಸಬಹುದು. ದೇಹವನ್ನು ನಾನು ಎಂದು ವ್ಯವಹರಿಸುತ್ತೇವೆಂಬ ಅನುಭವವನ್ನು ಅದಕ್ಕೆ ಪ್ರಮಾಣವಾಗಿ ಉದಾಹರಿಸಲೂಬಹುದು. 'ನಾನು ಬೆಳ್ಳಗಿದ್ದೇನೆ, ಕರ್‍ರಗಿದ್ದೇನೆ, ಆಗ ದಪ್ಪನಾಗಿದ್ದೆನು, ಈಗ ಕೃಶನಾದೆನು ; ಕೂರುತ್ತೇನೆ, ಹಾರುತ್ತೇನೆ'- ಎಂದು ಮುಂತಾಗಿ ಆಗುವ ಪ್ರತ್ಯಯಗಳ ಬಲದಿಂದ ದೇಹಕ್ಕಿಂತ ವ್ಯತಿರಿಕ್ತವಾಗಿ ಏನೂ ಇಲ್ಲವೆಂದೇ ವಾದಿಸಬಹುದು. ಆದಮಾತ್ರಕ್ಕೆ ದೇಹಕ್ಕಿಂತ ಬೇರೆಯಾಗಿರುವ ನಮ್ಮ ಅನುಭವಗಳು ಸುಳ್ಳೆಂದಾಗುವದೆ ? ಇಲ್ಲ. ಮನುಷ್ಯನು ಸತ್ತಮೇಲೂ ಶರೀರವು ಸ್ವಲ್ಪ ಕಾಲದವರೆಗೆ ಇರುತ್ತದೆ ; ಆದರೆ ಆಗ ಅದನ್ನು ಇವನು ನಮ್ಮ ತಂದೆ, ಮಗ, ಅಣ್ಣ, ತಮ್ಮ- ಎಂದು ಯಾರೂ ಮೊದಲಿನಂತೆ ಪ್ರೀತಿಸುವದಿಲ್ಲ. ಆ ಶರೀರವು ಕೊಳೆತುಹೋಗುವದೆಂದು ಎಲ್ಲರಿಗೂ ಗೊತ್ತಾದ್ದರಿಂದ ಅದನ್ನು ಹೂತು ಬಿಡುತ್ತಾರೆ, ಅಥವಾ ಸುಟ್ಟುಬಿಡುತ್ತಾರೆ. ಆದ್ದರಿಂದ ದೇಹವು ಆತ್ಮನಲ್ಲ.

ಹಾಗಾದರೆ ಪ್ರಾಣವೇ ಆತ್ಮನು- ಎಂದು ಯಾರಾದರೂ ವಾದಿಸಬಹುದು. ಏಕೆಂದರೆ ಪ್ರಾಣದಿಂದಲೇ ಮನುಷ್ಯನು ಬದುಕಿರುತ್ತಾನೆ ; ಮನುಷ್ಯನ ಎಲ್ಲಾ ಚಲನವಲನಗಳೂ ಪ್ರಾಣದ ಬಲದಿಂದಲೇ ಆಗುತ್ತಿರುತ್ತವೆ- ಎಂಬ ಯುಕ್ತಿಯಿದೆ. ಪ್ರಾಣವಿಲ್ಲದ ಮನುಷ್ಯನ ಪ್ರತಿಕೃತಿಯನ್ನು ಮಣ್ಣಿನಿಂದ, ಕಲ್ಲಿನಿಂದ ಅಥವಾ ಮತ್ತೆ ಯಾವದಾದರೊಂದು ದ್ರವ್ಯದಿಂದ ಮಾಡಿಸಿಟ್ಟಮಾತ್ರದಿಂದ ಅದನ್ನು ಮನುಷ್ಯನೆಂದೇನೂ ನಾವು ತಿಳಿಯುವದಿಲ್ಲ ಎಂಬ ವ್ಯತಿರೇಕಾನುಮಾನವೂ ಇದೆ. ಆದ್ದರಿಂದ ಪ್ರಾಣವೇ ಆತ್ಮನೆಂದಾಗಲಿ- ಎಂದರೆ ಅದೂ ಸರಿಯಲ್ಲ ; ಏಕೆಂದರೆ ಪ್ರಾಣಕ್ಕೆ ನಾನು ಎಂಬ ಅರಿವು ಇರುವದಿಲ್ಲ. 'ನಾನು ಇದನ್ನು ಅರಿಯುತ್ತೇನೆ' ಎಂಬ ಭಾವನೆಯು ನಮಗೆಲ್ಲ ಇರುತ್ತದೆ ; ಅದರ ಬಲದಿಂದಲೇ ಪ್ರಾಣವು ನಮ್ಮ ಶರೀರದಲ್ಲಿದೆ ಎಂದು ಗೊತ್ತಾಗುತ್ತದೆ. ಆ ನನ್ನ ಅರಿವಿಗೆ ಪ್ರಾಣವೂ ವಿಷಯವಾಗಿರುತ್ತದೆ.

ಆದ್ದರಿಂದ ನಾನೆಂಬ ಆತ್ಮಸ್ವರೂಪಕ್ಕೆ ಹೊರಚ್ಚಾಗಿರುವ ಪ್ರಾಣವು ಹೇಗೆ ತಾನೆ ನನ್ನ ಆತ್ಮವಾದೀತು ? ನನ್ನ ಸ್ವರೂಪಕ್ಕೇ ನಾನೆಂಬ ಅರಿವು ಇಲ್ಲ- ಎನ್ನಬಹುದೆ ?

ಇನ್ನು ಇಂದ್ರಿಯಗಳಿಗೆ ಅರಿಯುವ ಶಕ್ತಿ ಇರುವದರಿಂದ ಅವನ್ನೇ ಆತ್ಮವೆನ್ನೋಣವೆ ?- ಎಂದರೆ ಅದೂ ಆಗುವಂತಿಲ್ಲ. ಏಕೆಂದರೆ ಇಂದ್ರಿಯಗಳು ಅನೇಕವಾಗಿವೆ ; ನಾನು ಅನೇಕರು ಎಂದು ಯಾರೂ ಬಗೆಯುವದಿಲ್ಲ. ನಾನು ಅನೇಕರಾಗಿದ್ದರೆ ನನ್ನ ಸ್ವಾರ್ಥವನ್ನು ಸಂಪಾದಿಸಿಕೊಳ್ಳುವದಕ್ಕೆ ಆಗುತ್ತಿರಲಿಲ್ಲ; ಕಣ್ಣು ಕಂಡದ್ದನ್ನಾಗಲಿ ಕೇಳಿದ್ದನ್ನಾಗಲಿ ನನ್ನ ವಶಕ್ಕೆ ತೆಗೆದುಕೊಳ್ಳಬೇಕು, ಅಥವಾ ನನ್ನಿಂದ ದೂರವಾಗಿರಿಸಿಕೊಳ್ಳಬೇಕು- ಎಂದು ಪ್ರಯತ್ನಿಸುವದು ಆಗುತ್ತಿರಲಿಲ್ಲ . ಈಗ್ಗೆ ಹೀಗಿಲ್ಲ. ಶರೀರೇಂದ್ರಿಯಗಳೆಲ್ಲ ಸೇರಿ ತಮ್ಮತಮ್ಮ ಕಾರ್ಯವನ್ನು ಒಂದಕ್ಕೊಂದು ಹೊಂದುಗೆಯಾಗಿ ಮಾಡಿಕೊಂಡು 'ನಾನು' ಎಂಬ ಆತ್ಮನಿಗಾಗಿ ದುಡಿಯುತ್ತಿರುತ್ತವೆ. ಕಿವಿಯಿಂದ ಕೇಳಿದ ಒಂದು ಶಬ್ದದತ್ತ ಕತ್ತನ್ನು ತಿರುಗಿಸಿ ನೋಡಿದಾಗ ಕಣ್ಣಿಗೆ ಅಲ್ಲಿ ಒಂದು ಹಣ್ಣು ಬೀಳುತ್ತಿದೆ ಎಂದು ತಿಳಿಯಬರಲು, ಕಾಲಿನಿಂದ ಅಲ್ಲಿಗೆ ನಡೆದು ಕೈಯಿಂದ ತೆಗೆದುಕೊಂಡು ಅದನ್ನು ತಿನ್ನುವದಕ್ಕೆ ಪ್ರಯತ್ನಿಸುವೆವೆಂಬುದು ನಮ್ಮೆಲ್ಲರಿಗೂ ಅನುಭವಸಿದ್ಧವಾಗಿದೆ. ಆದ್ದರಿಂದ ಈ ಎಲ್ಲಾ ಕರಣಗಳೂ ಯಾವನಿಗಾಗಿ ಕೆಲಸಮಾಡುತ್ತಿರುವವೋ, ಆ ನಾನೇ ಆತ್ಮನು ಎಂದಾಗುತ್ತದೆ.

ಒಳ್ಳೆಯದು, ಇಂದ್ರಿಯಗಳಿಂದ ಉಂಟಾಗುವ ಎಲ್ಲಾ ತಿಳಿವಳಿಕೆಗಳೂ ಮನಸ್ಸಿನಲ್ಲಿ ಉಂಟಾಗುತ್ತವೆ ; ಅವನ್ನು ಒಂದುಗೂಡಿಸಿ ಇದನ್ನು ಒಂದು ಹಣ್ಣು ಎಂದು ನಿಶ್ಚಯಿಸುವ ಬುದ್ಧಿಯೂ ನಮ್ಮಲ್ಲಿರುತ್ತದೆಯಲ್ಲ ! ಅದೇ ಏಕೆ ನಮ್ಮ ಆತ್ಮನಾಗಿಬಿಡಬಾರದು ?- ಎಂದರೆ ಇದೂ ಸರಿಯಾಗುವದಿಲ್ಲ. ಏಕೆಂದರೆ ಬುದ್ಧಿಯು ಚಂಚಲವಾಗಿರುತ್ತದೆ ; ಒಂದೊಂದು ಕ್ಷಣದಲ್ಲಿ ನಮಗೆ ಒಂದೊಂದು ಬುದ್ಧಿಯುಂಟಾಗುತ್ತಿರುತ್ತದೆ. ಬುದ್ಧಿಯೇ ನಾನು ಎಂಬುದರ ಸ್ವರೂಪವೆಂದಾದರೆ ನಾನು ಒಂದೊಂದು ಗಳಿಗೆಗೂ ಬದಲಾಯಿಸುತ್ತಿರುವೆನೆಂದಾಗುವದು. ಬುದ್ಧಿಯು ಇಲ್ಲವಾದರೆ ನಾನೇ ಇಲ್ಲವಾದೆನೆಂದೂ, ಅದು ಎದ್ದುಕೊಂಡರೆ ನಾನೇ ಎದ್ದುಕೊಂಡೆನೆಂದೂ ತಿಳಿಯಬೇಕಾಗುವದು. ಬುದ್ಧಿಯು ಮಂಕಾಗಿರುವದು, ವಿಕಾಸಹೊಂದುವದು- ಮುಂತಾದ ಮಾರ್ಪಾಡುಗಳನ್ನು ಹೊಂದುತ್ತಿರುವದು ಅನುಭವದಲ್ಲಿದೆ. ಆದರೆ ಆ ಮಾರ್ಪಾಡುಗಳೆಲ್ಲ ನನಗೇ ಆಗುತ್ತವೆಯೆಂದು ಹೇಳುವದು ಸರಿಯಾಗುವದಿಲ್ಲ. ಯಾರಾದರೂ ಹಾಗೆಂದು ಬಗೆದರೆ, ಆ ಮಾರ್ಪಾಡುಗಳನ್ನೆಲ್ಲ ನೋಡಿದವರು ಯಾರು ?- ಎಂದು ಅವರನ್ನು ಕೇಳಬೇಕು.

ತಾನೇ ತನ್ನ ಮಾರ್ಪಾಡುಗಳನ್ನು ಅರಿಯುವದು ಆಗಲಾರದಷ್ಟೆ ? ಆದ್ದರಿಂದ ಅವನ್ನೆಲ್ಲ ಅರಿಯುತ್ತಾ ತನ್ನಲ್ಲಿ ಯಾವ ಮಾರ್ಪಾಡೂ ಇಲ್ಲದ **ಕೂಟಸ್ಥರೂಪ**ವೊಂದು ಇದೆ ಎಂದಾಯಿತು. ಆ ಸ್ವರೂಪದಿಂದಲೇ ನಾವು ದೇಹೇಂದ್ರಿಯಪ್ರಾಣಬುದ್ಧಿಗಳನ್ನು ನೋಡುತ್ತಾ ಇರುತ್ತೇವೆ. ಆ ಕೂಟಸ್ಥರೂಪವೇ ನಮ್ಮ ನಿಜವಾದ ಆತ್ಮನು. ತಿಳಿದೋ ತಿಳಿಯದೆಯೋ ನಾವೆಲ್ಲರೂ ಅದನ್ನೇ ನಾನು ಎಂಬ ಶಬ್ದದಿಂದ ಕರೆಯುತ್ತಿರುತ್ತೇವೆ. ಇದೇ ನಿಜವಾದ ತಿಳಿವಳಿಕೆ, ಮಿಕ್ಕದ್ದೆಲ್ಲವೂ ಭ್ರಾಂತಿ.

ಇಲ್ಲೊಂದು ಪ್ರಶ್ನೆ. ಹಾಗಾದರೆ ದೇಹಾದಿಗಳನ್ನೇ ನಾನು ಎಂದು ಜನರು ತಪ್ಪಾಗಿ ತಿಳಿಯುವದಕ್ಕೆ ಕಾರಣವೇನು ? ನಮ್ಮೊಳಗೆ ನಾನು ಎಂಬ ರೂಪವೂ ಇದೆ, ನಾನಲ್ಲದ ದೇಹಾದಿಗಳೂ ಇವೆ. ಇವುಗಳೊಳಗೆ ನಾನು ಎಂಬ ರೂಪವನ್ನೇ ನಾನು ಎಂದುಕೊಳ್ಳದೆ, ನಾನಲ್ಲದ್ದನ್ನೇ ನಾನು ಎಂದು ಜನರು ತಿಳಿದುಕೊಳ್ಳುತ್ತಿರುವದಕ್ಕೆ ಕಾರಣವೇನು ? ಇದಕ್ಕೆ ಉತ್ತರವನ್ನು ಹೇಳುವದಕ್ಕಾಗಿ ಒಂದು ದೃಷ್ಟಾಂತವನ್ನು ಕೊಡಬಹುದು. ಒಬ್ಬ ಉದ್ಯೋಗಸ್ಥನಿಗೆ ಒಬ್ಬಳು ಹೆಂಡತಿಯೂ ಇಬ್ಬರು ಮೂವರು ಮಕ್ಕಳೂ ಇರುತ್ತಾರೆಂದು ಇಟ್ಟುಕೊಳ್ಳೋಣ. ಅವನು ಕಚೇರಿಯಿಂದ ಮನೆಗೆ ಬಂದಾಗ ಪೇಟೆಯಲ್ಲಿ ಮಕ್ಕಳಿಗೆಂದು ಕೆಲವು ಹಣ್ಣುಗಳನ್ನು ತೆಗೆದುಕೊಂಡು ಬಂದಿರುತ್ತಾನೆ. ಅವನು ಅಂಗಿಯ ಜೇಬಿನಲ್ಲಿ ಕೆಲವು ಬಿಡಿ ನಯೆಪೈಸೆಗಳನ್ನು ಮಕ್ಕಳಿಗೆ ಕೊಡುವದಕ್ಕೆಂದು ಇಟ್ಟುಕೊಂಡಿರುತ್ತಾನೆ. ತನ್ನ ಸಂಬಳದ ಹಣವನ್ನು ಒಂದು ಸಣ್ಣ ಚೀಲದಲ್ಲಿ ಹಾಕಿ ಇಟ್ಟುಕೊಂಡಿರುತ್ತಾನೆ. ಅವನ ಮಕ್ಕಳಲ್ಲಿ ಒಬ್ಬನು ಅವನು ತಂದ ಕೈಚೀಲದಲ್ಲಿ ಯಾವಾಗಲೂ ಹಣ್ಣುಗಳಿರುತ್ತವೆಯೆಂದೂ, ಮತ್ತೊಬ್ಬನು ಅವನ ಜೇಬಿನಲ್ಲಿ ಯಾವಾಗಲೂ ನಯೆಪೈಸೆಗಳಿರುತ್ತವೆಯೆಂದೂ, ತಿಳಿವಳಿಕೆ ಸಾಲದ ಅವನ ಹೆಂಡತಿಯು ಅವನ ಜೇಬಿನಲ್ಲಿ ಯಾವಾಗಲೂ ನೋಟುಗಳಿರುವವೆಂದು ತಿಳಿದುಕೊಂಡರೆ, ಕುರುಡನಾದ ಅವನ ಮಗನೊಬ್ಬನು ಅವನ ಮೈಮೇಲೆ ಇರುವ ಒಂದು ರಂಧ್ರದಲ್ಲಿ ಯಾವದೋ ದುಂಡನೆಯ ಬಿಲ್ಲೆಗಳಿರುವವೆಂದೂ ಅವುಗಳಿಂದ ಮಿಠಾಯಿ ಕೊಂಡುಕೊಳ್ಳಬಹುದೆಂದೂ ಕಲ್ಪಿಸಿದರೆ - ಅವನ ಆ ತಿಳಿವಳಿಕೆಯು ಸರಿಯೆಂದಾದೀತೆ ? ಅವೆಲ್ಲ ಅವರ ಏಕದೇಶ ಕಲ್ಪನೆಗಳಲ್ಲವೆ ? ಅವನ ತಿಳಿವಳಿಕೆಯಲ್ಲಿ ನಿಜವಾಗಿರುವದು, ಇಲ್ಲದ್ದು- ಈ ಎರಡರ ಕಲಬೆರಕೆಯಾಗಿರುವದಷ್ಟೆ ? ಅದರಂತೆಯೇ ಸಾಮಾನ್ಯಜನರು ತಮ್ಮ ದೇಹ, ಪ್ರಾಣ, ಇಂದ್ರಿಯ, ಬುದ್ಧಿ- ಇವುಗಳನ್ನು ನಾನು ಎಂದು ತಿಳಿದುಕೊಂಡಿರುವದಕ್ಕೆ ನಿಜವಾಗಿ ಇರುವದು, ಇಲ್ಲದ್ದು ಈ ಎರಡನ್ನೂ ವಿಂಗಡಿಸಿಕೊಳ್ಳದ್ದರಿಂದಾದ ತಪ್ಪುತಿಳಿವಳಿಕೆಯೇ ಕಾರಣವೆಂದು ನಿಶ್ಚಯಿಸಬೇಕು.

ದೃಷ್ಟಾಂತದಲ್ಲಿ ಆ ಹುಡುಗರೂ ಹೆಂಡತಿಯೂ ಆ ಉದ್ಯೋಗಸ್ಥನ ಅಂಗಿಯ ಜೇಬಿನಲ್ಲಿ, ಹಣದ ಚೀಲದಲ್ಲಿ, ಅಥವಾ ಕೈಚೀಲದಲ್ಲಿ ಹಣವನ್ನೂ ಹಣ್ಣನ್ನೂ ಕಂಡದ್ದೂ ಸುಳ್ಳಲ್ಲ ; ಆದರೆ ಆ ಹಣವು ಅಥವಾ ಹಣ್ಣು ಆ ಜೇಬಿಗೆ ಹಣದ ಚೀಲಕ್ಕೆ ಅಥವಾ ಕೈಚೀಲಕ್ಕೆ ಸ್ವಭಾವದಿಂದ ಸೇರಿದವಲ್ಲ. ಜೇಬು ಅಥವಾ ಚೀಲದಲ್ಲಿ ಹಣವನ್ನಿಟ್ಟರೆ ಇರುತ್ತದೆ, ಇಲ್ಲದಿದ್ದರೆ ಇಲ್ಲ. ಈ ವಿವೇಕವು ಅವನ ಮನೆಯವರಿಗೆ ಇಲ್ಲದೆ ಹೋಗಿರುತ್ತದೆ. ಇದರಂತೆ ಆತ್ಮನಲ್ಲಿರುವ ಚೈತನ್ಯದ ನೆರಳು ಬುದ್ಧಿ, ಇಂದ್ರಿಯ, ಪ್ರಾಣ, ದೇಹ- ಇವುಗಳಲ್ಲಿ ಆಗಾಗ್ಗೆ ತೋರಿಕೊಂಡಿರುತ್ತದೆ. ಅದು ಅವುಗಳಿಗೆ ಸ್ವಭಾವದಿಂದ ಸೇರಿರುವದಿಲ್ಲ. ಇದನ್ನರಿಯದೆ ಜನರು ತಿಳಿವಳಿಕೆ ಸಾಲದ ಸ್ತ್ರೀಯರಂತೆಯೂ, ಹುಡುಗರಂತೆಯೂ, ಕುರುಡರಂತೆಯೂ ಚೈತನ್ಯವು ಆ ದೇಹಾದಿಗಳಿಗೇ ಸೇರಿದ್ದೆಂದು ಭ್ರಾಂತರಾಗಿಬಿಟ್ಟಿರುತ್ತಾರೆ. ಇನ್ನೊಂದು ಹೋಲಿಕೆಯನ್ನೂ ದೃಷ್ಟಾಂತದಾರ್ಷ್ಟಾಂತಿಕಗಳಿಗೆ ಕೊಡಬಹುದು. ಚೀಲದಲ್ಲಿ ಹಣ್ಣೇ ಇರಬೇಕು, ಅಥವಾ ಹಣವೇ ಇರಬೇಕು- ಎಂಬ ನಿಯಮವು ಹೇಗೆ ಇರುವದಿಲ್ಲವೋ, ಹಾಗೆಯೇ ಹಣ್ಣೂ ಹಣವೂ ಚೀಲದಲ್ಲಿಯೇ ಇರಬೇಕೆಂಬ ನಿಯಮವೂ ಇರುವದಿಲ್ಲ. ಇದರಂತೆ ದೇಹಪ್ರಾಣಾದಿಗಳು ಚೈತನ್ಯಯುಕ್ತವಾಗಿಯೇ ಇರಬೇಕೆಂಬ ನಿಯಮವು ಹೇಗಿಲ್ಲವೋ, ಹಾಗೆಯೇ ಚೈತನ್ಯವು ಈ ದೇಹಾದಿಗಳಲ್ಲಿಯೇ ಇರಬೇಕೆಂಬ ನಿಯಮವೂ ಇರುವದಿಲ್ಲ. ಉದಾಹರಣೆಗೆ ಕನಸಿನಲ್ಲಿ ನಮ್ಮ ಆತ್ಮಚೈತನ್ಯಕ್ಕೆ ಎಚ್ಚರದಲ್ಲಿ ಈಗ ಕಾಣುತ್ತಿರುವ ದೇಹ ಪ್ರಾಣೇಂದ್ರಿಯಗಳು ಯಾವವೂ ಗಂಟುಬಿದ್ದಿರುವದಿಲ್ಲ. ಆದರೂ ನಾವು ಅಲ್ಲಿಯೂ ದೇಹಾದಿಗಳೊಳಗೇ ಅದು ಇರುವವೆಂದು ಕಲ್ಪಿಸಿಕೊಂಡಿರುವೆವು. ಇನ್ನು ಸುಷುಪ್ತಿಯ ಅನುಭವವನು ಲೆಕ್ಕಕ್ಕೆ ತೆಗೆದುಕೊಂಡರಂತೂ ನಮ್ಮ ಆತ್ಮಕ್ಕೆ ಯಾವ ದೇಹಾದಿಗಳ ಹಂಗೂ ಇರುವದೇ ಇಲ್ಲ. ಆದ್ದರಿಂದ ದೇಹಾದಿಗಳು ನಾನು ಎಂದು ತಿಳಿದಿರುವದು ಬರಿಯ ಭ್ರಾಂತಿಯೆಂಬುದಿಷ್ಟೇ ಅಲ್ಲ. ನಮ್ಮ ಆತ್ಮನಿಗೆ ಯಾವಾಗಲೂ ದೇಹಾದಿಗಳ ಸಂಬಂಧವಿರುವದೆಂಬುದೂ ಈ ಆತ್ಮನು ಯಾವಾಗಲೂ ದೇಹಾದಿಗಳೊಳಗೇ ಇರುವನೆಂಬುದೂ ಭ್ರಾಂತಿಯೇ ಎಂದಾಯಿತು.

ಈಗ ನಾನು ದೇಹವು, ಪ್ರಾಣವು, ಇಂದ್ರಿಯವು ಅಥವಾ ಬುದ್ಧಿಯು- ಎಂದು ತಿಳಿಯುವ ಭ್ರಾಂತಿಯ ಸ್ವರೂಪವನ್ನು ಇನ್ನಷ್ಟು ಬಿಡಿಸಿನೋಡೋಣ. ಆತ್ಮನೆಂಬುದು **ಚೈತನ್ಯವು,** ಬರಿಯ ಅರಿವಿನ ಸ್ವಭಾವದ್ದು ; ದೇಹಾದಿಗಳು **ಅಚೇತನ**ಗಳು. ತಮ್ಮಲ್ಲಿ ಯಾವ ಚೈತನ್ಯವೂ ಇಲ್ಲದ ತೋರಿಕೆಗಳು. ಆತ್ಮಚೈತನ್ಯವು ಯಾವಾಗಲೂ ತನ್ನ ರೂಪದಲ್ಲಿಯೇ ಇದ್ದುಕೊಂಡಿರುತ್ತದೆ ; ಎಚ್ಚರದಲ್ಲಾಗಲಿ ತನಿನಿದ್ರೆಯಲ್ಲಾಗಲಿ ಈ ಚೈತನ್ಯಸ್ವರೂಪದಲ್ಲಿ ಯಾವ ಹೆಚ್ಚುಕಡಿಮೆಯೂ

ಇರುವದಿಲ್ಲ. ದೇಹಾದಿಗಳು ಹೀಗಲ್ಲ. ಇವು ಎಚ್ಚರದಲ್ಲಿರುವಾಗಲೇ ಬೆಳೆಯುವದು, ಸವೆಯುವದು, ಸೊರಗುವದು- ಮುಂತಾದ ಹೆಚ್ಚುಕಡಿಮೆಗಳನ್ನು ಅನುಭವಿಸುತ್ತಿರುತ್ತವೆ. ಕನಸಿನಲ್ಲಿ ಇವು ಇರುವದೇ ಇಲ್ಲ. ದೇಹಾದಿಗಳಂತೆ ತೋರುವ ಕೆಲವು ತೋರಿಕೆಗಳು ಅಲ್ಲಿರುವದು ನಿಜ ; ಆದರೆ ಅವನ್ನು ಈ ದೇಹಾದಿಗಳೆಂದಾಗಲಿ ಇವಕ್ಕಿಂತ ಬೇರೆಯಾದ ನಿಜವಾದ ದೇಹಾದಿಗಳೆಂದಾಗಲಿ ನಾವುಗಳು ಬಗೆಯುತ್ತಿಲ್ಲ. ಸುಷುಪ್ತಿಯಲ್ಲಂತೂ ಯಾವ ದೇಹಾದಿಗಳೂ ಅಥವಾ ದೇಹಾದಿಗಳ ಹುಸಿತೋರಿಕೆಗಳೂ ಇರುವದೇ ಇಲ್ಲ. ಹೀಗೆ ಆತ್ಮಚೈತನ್ಯವು ಕೂಟಸ್ಥವಾಗಿ ತನ್ನ ಸ್ವರೂಪದಲ್ಲಿ ಯಾವ ಹೆಚ್ಚುಕಡಿಮೆಯೂ ಇಲ್ಲದೆ ಒಂದೇ ರೂಪದಿಂದ ಇದ್ದುಕೊಂಡಿರುವ **ಸತ್ಯವಸ್ತು ;** ದೇಹಾದಿಗಳು ಇದ್ದಂತೆ ಇಲ್ಲದೆ ಮಾರ್ಪಡುತ್ತಿರುವ, ಮತ್ತು ಸುಷುಪ್ತ್ಯಾದಿಗಳಲ್ಲಿ ಸ್ವರೂಪವೇ ಇಲ್ಲದ **ಅನೃತವಸ್ತು.** ಹೀಗೆ ಚೇತನವೂ ಅಚೇತನವೂ ಸತ್ಯವೂ ಅನೃತವೂ ಆಗಿರುವ ಅತ್ಯಂತವಿರುದ್ಧ ಸ್ವಭಾವದ ಈ ಆತ್ಮಾನಾತ್ಮಗಳೆರಡನ್ನೂ ಜನರು ತಮ್ಮ ಬುದ್ಧಿಯಲ್ಲಿ ಕಲೆಬೆರಕೆ ಮಾಡಿಕೊಂಡಿರುತ್ತಾರೆ. ಸತ್ಯವಾದ ಆತ್ಮನ ಸ್ವರೂಪವನ್ನು ಅನೃತವಾದ ದೇಹಾದಿಗಳಂತೆ ಮಾರ್ಪಡುವವನೆಂದು ತಿಳಿದುಕೊಂಡಿರುತ್ತಾರೆ. ಅನೃತವಾಗಿ ಅಚೇತನಗಳಾಗಿರುವ ದೇಹಾದಿಗಳನ್ನೂ ಸತ್ಯವಾಗಿ ಚೈತನ್ಯಸ್ವರೂಪನಾಗಿರುವ ಆತ್ಮನಂತೆಯೇ ನಿತ್ಯವಾಗಿ ಇದ್ದುಕೊಂಡು ಚೇತನವಾಗಿರುವವೆಂದು ತಪ್ಪಾಗಿ ಎಣಿಸಿಕೊಂಡಿರುತ್ತಾರೆ- ಎಂದಾಯಿತು.

ಇನ್ನೂ ಒಂದು ಅಂಶವು ಈ ಭ್ರಾಂತಿಯಲ್ಲಿ ಅಡಗಿರುತ್ತದೆ. ದೇಹ, ಪ್ರಾಣ, ಮನಸ್ಸು, ಬುದ್ಧಿ- ಇವುಗಳಲ್ಲಿ ಯಾವದೊಂದೂ 'ನಾನು' ಎನಿಸಿಕೊಳ್ಳುವದಕ್ಕೆ ಅರ್ಹವಾಗಿರುವದಿಲ್ಲ. ಏಕೆಂದರೆ ಅವುಗಳೆಲ್ಲ ಆತ್ಮಚೈತನ್ಯಕ್ಕೆ ವಿಷಯವಾಗಿ ತೋರಿಕೊಳ್ಳುವದರಿಂದ 'ಇದು' ಎನಿಸಿಕೊಳ್ಳುವದಕ್ಕೆ ತಕ್ಕವಾಗಿರುತ್ತವೆ. ಇನ್ನು ಬರಿಯ ಆತ್ಮಚೈತನ್ಯವೂ ನಾನು ಎನಿಸಿಕೊಳ್ಳುವದಕ್ಕೆ ತಕ್ಕದ್ದಾಗಿಲ್ಲ. ಏಕೆಂದರೆ ನಾನು ಎಂಬುದು 'ನೀನು', 'ಇದು'- ಎಂಬುದಕ್ಕೆ ಪ್ರತಿದ್ವಂದ್ವಿಯಾದ ಶಬ್ದವು. ಆದರೆ ಚೈತನ್ಯಸ್ವರೂಪವು ಸುಷುಪ್ತಿಯಲ್ಲಿ ತಾನೊಂದೇ ಇರುವದರಿಂದ ನಾನು ಎಂದು ಅನುಭವಕ್ಕೆ ಬರುತ್ತಲೇ ಇಲ್ಲ. ಕನಸಿನಲ್ಲಿ ನಾನು ಎಂದು ತೋರಿಬರುತ್ತಿದ್ದರೂ ಅಲ್ಲಿರುವ 'ಇದು' ಎನಿಸಿಕೊಳ್ಳುವ ತೋರಿಕೆಗಳೆಲ್ಲ ಹುಸಿತೋರಿಕೆಗಳೇ ಆಗಿರುವದರಿಂದ ಅದು ನಾನು ಎಂದು ತೋರುವದೆಂಬುದೂ ಹುಸಿಯೇ ಎಂದಾಯಿತು. ಹೀಗೆ ನೋಡಿದರೆ ನಮ್ಮ ನಿಜವಾದ ಆತ್ಮ, ಮತ್ತು ಅನಾತ್ಮ-ಈ ಎರಡರಲ್ಲಿ ಯಾವದೊಂದೂ ನಾನು ಎನಿಸಿಕೊಳ್ಳುವದಕ್ಕೆ ಅರ್ಹವಲ್ಲವೆಂದಾಯಿತು.

ಹೀಗಿದ್ದರೂ ಸತ್ಯಾನೃತಗಳಾದ ಆತ್ಮ, ಅನಾತ್ಮ- ಈ ಎರಡರ ಕಲಬೆರಕೆಯಿಂದಾದ ಭ್ರಾಂತಿಯಲ್ಲಿ ಈ 'ಅಹಂತ್ವ' (ನಾನು ಎನ್ನುವಿಕೆ)ವು ಆತ್ಮನ ಮೇಲೆ ಕೂತಿರುತ್ತದೆ.

ಈ ರೀತಿಯಲ್ಲಿ ನಾನು ಎಂಬ ಅರಿವಿಗೆ ಗೋಚರವಾದ ವಸ್ತುವೇ ನಿಜವಾಗಿ ಯಾವದೂ ಇಲ್ಲದಿದ್ದರೂ ಆತ್ಮನು ನಾನು ಎಂದು ತೋರುತ್ತಿರುವದೇಕೆಂಬುದನ್ನು ತಿಳಿಯುವದಕ್ಕೆ **ಸುಷುಪ್ತಿಯ ಅನುಭವವನ್ನು** ಮತ್ತಷ್ಟು ಬಿಡಿಸಬೇಕಾಗುತ್ತದೆ. ಸುಷುಪ್ತಿಯಲ್ಲಿ ನೀನಿಲ್ಲ, ಅವನಿಲ್ಲ, ಮತ್ತೆ ಯಾವ ಪ್ರಾಣಿಗಳೂ ಇಲ್ಲ; ಅಲ್ಲಿ ನಾನು ಎಂಬ ಅರಿವೂ ಇರುವದಿಲ್ಲ. ಜಾಗ್ರತ್ಸ್ವಪ್ನಗಳಲ್ಲಿ ಮಾತ್ರವೇ ನಾನು, ನೀನು, ಇವರು- ಎಂಬ ವಿಭಾಗದ ಅರಿವು ಉಂಟಾಗುತ್ತದೆ. ಅರಿವಿನ ಸ್ವರೂಪವನ್ನು ನೋಡಿದರೆ ಅದಕ್ಕೆ ಯಾವ ವಿಭಾಗವನ್ನೂ ಕಲ್ಪಿಸುವದಕ್ಕೆ ಆಗದೆ ಇದ್ದರೂ ದೊಡ್ಡದೊಂದು ಕೆರೆಯ ನೀರು ಸ್ವಲ್ಪ ಒಣಗಿದ್ದಾಗ ನಡುವೆ ಎದ್ದುಕೊಂಡ ಭೂಭಾಗದಿಂದ 'ಆಚೆಯ ಕೆರೆ', 'ಈಚೆಯ ಕೆರೆ'- ಎಂದು ಒಂದೇ ಕೆರೆಯಲ್ಲಿ ಎರಡು ಭಾಗವನ್ನು ಮಾಡಿ ವ್ಯವಹರಿಸುವದಿಲ್ಲವೆ? ಹಾಗೆಯೇ ಆತ್ಮಚೈತನ್ಯವು ಅಖಂಡವಾಗಿ ಒಂದೇ ಆಗಿದ್ದರೂ ಎಚ್ಚರಕನಸುಗಳಲ್ಲಿ ತೋರಿಕೊಳ್ಳುವ ನಾಮರೂಪಗಳ ಮಾಯೆಯ ತೋರಿಕೆಯಿಂದ ನಾನು, ನೀನು, ಇವರು- ಮುಂತಾದ ವಿಭಾಗಗಳ ಅರಿವು ಎದ್ದುಕೊಳ್ಳುತ್ತದೆ. **ಮಾಯೆ** ಎಂದರೆ ಅವಿದ್ಯಾಕಲ್ಪಿತವಾದ ಹುಸಿತೋರಿಕೆ. ಈ ಹುಸಿತೋರಿಕೆಯು ಜೀವರ ಸುಷುಪ್ತಿಯಲ್ಲಿ ಬೀಜರೂಪದಿಂದ ಇದ್ದುಕೊಂಡಿದ್ದು ಅವರು ಎಚ್ಚರುತ್ತಲೂ ವಿಭಕ್ತವಾಗಿ ಹರಡಿಕೊಳ್ಳುವದು. ಶರೀರ, ಪ್ರಾಣ, ಇಂದ್ರಿಯ- ಮುಂತಾದ ನಾಮರೂಪಗಳು ಆಧ್ಯಾತ್ಮಿಕವಾದ ಉಪಾಧಿಗಳೆನಿಸಿ ಚೈತನ್ಯವನ್ನು 'ನಾನು' ಎಂಬ ಹೆಸರಿಗೂ ಅರಿವಿಗೂ ತಕ್ಕದ್ದಾಗಿ ಮಾಡುವವು. ಇದರಂತೆ ಆಕಾಶಾದಿಭೂತಗಳ ಪರಿಣಾಮವಾದ ಬೆಟ್ಟ, ನದಿ, ಸಮುದ್ರ- ಮುಂತಾದ ನಾಮರೂಪಗಳ ಗುಂಪುಗಳೂ ಮತ್ತು ಅದೇ ಭೂತಗಳ ಪರಿಣಾಮಗಳಾದ ಮತ್ತೆ ಕೆಲವು ಶರೀರಾದಿಸಂಘಾತಗಳೂ ಎದ್ದು ಹರಡಿಕೊಂಡು ನೀನು, ಇವನು, ಈ ಪ್ರಾಣಿಗಳು- ಮುಂತಾದ ವಿಭಾಗದ ಅರಿವನ್ನುಂಟು ಮಾಡುತ್ತಿರುವವು.

ಅವಿದ್ಯೆಯಿಂದ ಕಲ್ಪಿತವಾಗಿರುವ ನಾಮರೂಪಗಳ ಬೀಜಶಕ್ತಿಗೆ ಮಾಯಾಶಕ್ತಿ ಎಂದು ಹೆಸರು. ಆ ಮಾಯಾಶಕ್ತಿಯು ಜಾಗ್ರತ್ಸ್ವಪ್ನಗಳಲ್ಲಿ ಹರಡಿಕೊಂಡಿರುವದಕ್ಕೆ **ಮಾಯಾಶಕ್ತಿವಿಲಾಸವೆಂದು** ಹೆಸರು. ಈ ಮಾಯಾಶಕ್ತಿಯ ವಿಲಾಸದಲ್ಲಿ ನೆಟ್ಟ ದೃಷ್ಟಿಯಿಂದಲೇ ನಮಗೆ ಅನೇಕ ದೇಹಾದಿಸಂಘಾತಗಳೂ, ಆ ಸಂಘಾತಗಳಲ್ಲಿರುವ ಅನೇಕ ಜೀವರೂ, ಮತ್ತು ಒಂದಾನೊಂದು ಗೊತ್ತಾದ ದೇಹಾದಿಸಂಘಾತಕ್ಕೆ ಅಭಿಮಾನಿಯಾಗಿರುವ ನಾನೂ ವಿಂಗಡವಾಗಿರುವಂತೆ ತೋರುತ್ತಿರುವವು.

ಯಾವ ಜೀವರು ಅನೇಕ ಜನ್ಮಗಳಲ್ಲಿ ತಾವು ಮಾಡಿರುವ ಪುಣ್ಯಮಹಿಮೆಯಿಂದ ಚಿತ್ತಶುದ್ಧಿಯನ್ನು ಹೊಂದಿ ಈ ಶರೀರಾದಿಗಳೇ ತಾವೆಂಬ ತಿಳಿವಳಿಕೆಯಿಂದಾಗಿರುವ ಸಂಸಾರಬಂಧದಿಂದ ಬಳಲಿಬೆಂಡಾಗಿ ಹೇಗಾದರೂ ಈ ಬಂಧದಿಂದ ಮುಕ್ತರಾಗಬೇಕೆಂಬ ದೃಢಸಂಕಲ್ಪದಿಂದ ಪರಮೇಶ್ವರನನ್ನು ಶರಣು ಹೊಂದುವರೋ ಅವರಿಗೆ ಆ ಕರುಣಾಳುವಾದ ಭಗವಂತನು ಪ್ರಸನ್ನನಾಗಿ ಶ್ರೀಗುರುಮೂರ್ತಿಯ ರೂಪದಿಂದ ಕಾಣಿಸಿಕೊಳ್ಳುವನು.

ಯಾರು ಆ ಸದ್ಗುರುಮೂರ್ತಿಗೆ ನಮಸ್ಕಾರವನು ಮಾಡಿ, 'ಸ್ವಾಮಿ, ಈ ಶರೀರಾದಿಗಳಿಂದಾಗುತ್ತಿರುವ ದುಃಖದಿಂದ ಪಾರಾಗುವದಕ್ಕೆ ಯಾವದಾದರೂ ಉಪಾಯವುಂಟೆ ?''- ಎಂದು ದೈನ್ಯದಿಂದ ಬೇಡಿಕೊಳ್ಳುವರೋ ಅವರಿಗೆ ಮಹಾಕರುಣಾಮಯನಾದ ಶ್ರೀಗುರುವು ''ಅಪ್ಪ ಹೆದರದಿರು. ನೀನು ಈಗಲೇ ಇಲ್ಲಿಯೇ ಶ್ರೀದಕ್ಷಿಣಾಮೂರ್ತಿಯಾದ ಪರಶಿವಸ್ವರೂಪನೇ ಆಗಿರುವೆ. ಈ ಶರೀರ, ಪ್ರಾಣ, ಇಂದ್ರಿಯಗಳು, ಬುದ್ಧಿ- ಇವುಗಳಲ್ಲಿ ನಾನು, ನನ್ನದು ಎಂಬ ಅಭಿಮಾನವನ್ನು ಮಾಡದೆ ಇರು ; ಇವು ಬರಿಯ ಮಾಯಾವಿಲಾಸವು, ಕೇವಲ ಹುಸಿತೋರಿಕೆ ; ಇವು ಸ್ವಪ್ನದಲ್ಲಿ ಕಾಣುವ ದೇಹಾದಿಗಳಂತೆಯೇ ನಿನಗೆ ಸಂಬದ್ಧವಾಗಿರದಿದ್ದರೂ ವಿವೇಕಶೂನ್ಯನಾಗಿ ನೀನು ಇವುಗಳ ಧರ್ಮವನ್ನು ನಿನ್ನ ಸ್ವರೂಪದಲ್ಲಿ ಹುಟ್ಟಿಹಾಕಿಕೊಂಡು ವ್ಯಥೆಪಡುತ್ತಿದ್ದೀಯೆ. ಸರಿಯಾಗಿ ನಿನ್ನ ಚೈತನ್ಯಸ್ವರೂಪದಲ್ಲಿ ನಿಂತುಕೊಂಡು ನೋಡು. ನೀನು ಅಖಂಡಸ್ವರೂಪನೇ ಆಗಿರುವೆ. ದೇಹಾದಿಗಳ ರೂಪದಲ್ಲಿ ತೋರುತ್ತಿರುವ ಮಾಯೆಯಲ್ಲೆಲ್ಲ ನಿನ್ನ ಚೈತನ್ಯವೊಂದೇ ಹರಡಿಕೊಂಡಿರುವದು ಅನುಭವಾರೂಢವಾಗುವದು'' ಎಂದು ಬೋಧಿಸುವನು. ಆ ಸದ್ಗುರುವಿನ ದಯಾಪೂರಿತವಾದ ಬೋಧೆಯಿಂದ- ಸೂರ್ಯನು ಉದಯಿಸುತ್ತಲೂ ಕಾವಳದ ಮಬ್ಬು ಹರಿದು ಎಲ್ಲೆಲ್ಲಿಯೂ ಸೂರ್ಯಪ್ರಕಾಶವೇ ತೋರುವಂತೆ- ನಾನು ಶರೀರೇಂದ್ರಿಯಸಂಘಾತಕ್ಕೆ ಕಟ್ಟುಬೀಳದ ಅಖಂಡಚಿನ್ಮಾತ್ರಸ್ವರೂಪನೇ ಎಂಬ ಜ್ಞಾನವು ಉದಯಿಸುವದು.

ঃঃঃঃঃঃঃঃঃ

## ೬. ಆತ್ಮನು ಅದ್ವಿತೀಯಕೂಟಸ್ಥನಿರ್ವಿಶೇಷ ಚೈತನ್ಯಸ್ವರೂಪನು

**ರಾಹುಗ್ರಸ್ತದಿವಾಕರೇಂದುಸದೃಶೋ ಮಾಯಾಸಮಾಚ್ಛಾದನಾತ್**
**ಸನ್ಮಾತ್ರಃ ಕರಣೋಪಸಂಹರಣತೋ ಯೋಽಭೂತ್ಸುಷುಪ್ತಃ ಪುಮಾನ್ ।**

**ಪ್ರಾಗಸ್ವಾಪ್ಸಮಿತಿ ಪ್ರಬೋಧಸಮಯೇ ಯಃ ಪ್ರತ್ಯಭಿಜ್ಞಾಯತೇ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥**

'ರಾಹುವು ನುಂಗಿದ ಸೂರ್ಯಚಂದ್ರರಂತೆ, ಮಾಯೆಯ ಮುಸುಕಿನಿಂದ, ಕರಣಗಳು ಉಪಸಂಹಾರವಾದದ್ದರಿಂದ ಯಾವನು ಸನ್ಮಾತ್ರನಾಗಿ ಸುಪ್ತನಾಗಿರುವನೋ, ಎಚ್ಚತ್ತಾಗ 'ಹಿಂದೆ ನಿದ್ರೆಮಾಡಿದೆನು' ಎಂದು ಗುರುತಿಸಲ್ಪಡುವನೋ, ಅಂಥ ಶ್ರೀಗುರುಮೂರ್ತಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ !' ಎಂಬುದು ಅಕ್ಷರಾರ್ಥ.

ದೇಹ, ಪ್ರಾಣ, ಇಂದ್ರಿಯಗಳು, ಬುದ್ಧಿ - ಇವುಗಳ ಸಂಬಂಧದಿಂದ ಸಾಮಾನ್ಯಜನರಿಗೆ ತಾವೇ ಆ ದೇಹಾದಿಗಳೆಂಬ ಭ್ರಾಂತಿಯುಂಟಾಗುತ್ತದೆ ; ಸುಷುಪ್ತಿಯೇ ಮುಂತಾದ ಅವಸ್ಥೆಗಳಲ್ಲಿ ಏತರ ಅರಿವೂ ಆಗದೆ ಇರುವದರಿಂದ ಅಲ್ಲಿ ಶೂನ್ಯಸ್ವರೂಪವೇ ಆಗಿರುವೆವೆಂದುಕೂಡ ಅತ್ಯಂತಮೂಢರು ತಿಳಿದುಕೊಳ್ಳುತ್ತಾರೆ. ಇವೆಲ್ಲ ಮಾಯಾಶಕ್ತಿಯ ವಿಲಾಸವೇ ಹೊರತು ನಿಜವಲ್ಲ ; ಆತ್ಮನು ಎಂದೆಂದಿಗೂ ನಿರ್ವಿಶೇಷಸಚ್ಚಿತ್ಸುಖಾತ್ಮಕನಾಗಿಯೇ ಇರುತ್ತಾನೆ- ಎಂದು ಹಿಂದಿನ ಶ್ಲೋಕದಲ್ಲಿ ತಿಳಿಸಿದ್ದಾಯಿತು. ಈಗ ವಿಶೇಷವಾಗಿ ''ಸುಷುಪ್ತಿ'' (ಗಾಢನಿದ್ರೆ) ಎಂಬ ಅವಸ್ಥೆಯನ್ನು ಕುರಿತು ವಿಚಾರಿಸಲಾಗುತ್ತದೆ.

**ಸುಷುಪ್ತನಾಗುವದು ಎಂದರೇನು ?** ಎಚ್ಚರದಲ್ಲಿಯೂ ಕನಸಿನಲ್ಲಿ ನಮ್ಮ ಹೊರಗೆ ಒಂದು ಪ್ರಪಂಚವು ಇರುವಂತೆ ಕಾಣಿಸುತ್ತಿರುವದು ; ಒಳಗೆ ನಾವು ಇದ್ದುಕೊಂಡು ಎಲ್ಲವನ್ನೂ ಅರಿಯುತ್ತಿರುತ್ತೇವೆಂಬ ಅರಿವು ಇರುತ್ತದೆ. ಆದರೆ ತನಿ ನಿದ್ರೆಯಲ್ಲಿ ಯಾವದೊಂದರ ಅರಿವೂ ನಮಗೆ ಇರುವದಿಲ್ಲ. ಆದರೂ ಆಗ ನಾವು ಅಲ್ಲಿ ಕಲ್ಲು, ಮಣ್ಣು- ಮುಂತಾದವುಗಳಂತೆ ಯಾವ ಅರಿವೂ ಇಲ್ಲದೆ ಇರುವೆವೆ- ಎಂಬುದನ್ನು ವಿಚಾರಿಸುವದು ಅವಶ್ಯ. ಏಕೆಂದರೆ ಕಲ್ಲಿಗೆ ಯಾವ ಅರಿವೂ ಇರುವದಿಲ್ಲ ; ಅದಕ್ಕೆ ಹಿಂದೆ ಯಾವಾಗಲಾದರೂ ಅರಿವು ಬರಬಹುದೆಂದಾಗಲಿ, ಯಾರೊಬ್ಬರೂ ಕಲ್ಪಿಸಿಲ್ಲ, ಕಲ್ಪಿಸುವದಕ್ಕೆ ಆಗುವಂತೆಯೂ ಇಲ್ಲ. ಇದರಂತೆ ಚೇತನರಾದ ನಮ್ಮಗಳಿಗೆ ಯಾವಾಗಲಾದರೂ ಅರಿವು ಇರಲಿಲ್ಲವೆಂದಾಗಲಿ, ಅಥವಾ ಮುಂದೆ ಆ ಅರಿವು ಇಲ್ಲವಾಗಬಹುದೆಂದಾಗಲಿ ನಾವು ಯಾರೂ ಕಲ್ಪಿಸುವದಿಲ್ಲ, ಕಲ್ಪಿಸಿಕೊಳ್ಳುವದಕ್ಕೆ ಬರುವದೂ ಇಲ್ಲ. ಆದ್ದರಿಂದ ಗಾಢನಿದ್ರೆಯಲ್ಲಿ ನಮಗೆ ಅರಿವು ಹೋಗಿದ್ದು ಎಚ್ಚರಕನಸುಗಳಲ್ಲಿ ಮತ್ತೆ ಬಂದು ಸೇರಿಕೊಳ್ಳುವದೆಂದು ಕಲ್ಪಿಸುವದೂ ಸರ್ವಥಾ ಅಯುಕ್ತವಾಗಿರುತ್ತದೆ. ನಮಗೆ ಯಾವಾಗಲಾದರೂ ಅರಿವು ಇರಲಿಲ್ಲ,

ಅಥವಾ ಇರುವದಿಲ್ಲ- ಎಂದು ಕಲ್ಪಿಸುವದಕ್ಕೆ ಆಗುವದಿಲ್ಲ. ಏಕೆಂದರೆ ಹಾಗೆ ಕಲ್ಪಿಸಿಕೊಳ್ಳುವದಕ್ಕೆ ನಮ್ಮ ಚೈತನ್ಯವು ಬೇಕೇ ಬೇಕಲ್ಲವೆ ?

ಹಾಗಾದರೆ 'ಗಾಢನಿದ್ರೆಯಲ್ಲಿ ನಮಗೆ ಅರಿವೇ ಇರುವದಿಲ್ಲ, ನಾವು ಆಗ ಶೂನ್ಯಪ್ರಾಯರಾಗಿರುವೆವು' ಎಂಬ ಸಾಮಾನ್ಯಜನರ ಭಾವನೆಗೇನು ಗತಿ ?- ಎಂದು ನೀವು ಕೇಳಬಹುದು. ಅದಕ್ಕೆ ಉತ್ತರವೇನೆಂದರೆ : ಆಗ ಕರಣಗಳೆಲ್ಲ ಉಪಸಂಹಾರವಾಗಿ ಆತ್ಮನಲ್ಲಿ ಸೇರಿಬಿಟ್ಟಿರುತ್ತವೆ. ಉಪನಿಷತ್ತಿನಲ್ಲಿ ಇದನ್ನು ಹೀಗೆಂದು ವರ್ಣಿಸಿರುತ್ತದೆ. ''ಹಕ್ಕಿಗಳು ಸಾಯಂಕಾಲದಲ್ಲಿ ತಮ್ಮ ವಾಸದ ಮರವನ್ನು ಸೇರಿಕೊಳ್ಳುವಂತೆಯೇ, ಪೃಥಿವಿ ಮತ್ತು ಪೃಥಿವೀತನ್ಮಾತ್ರೆ, ಅಪ್ಪು ಮತ್ತು ಅಪ್ಪಿನ ತನ್ಮಾತ್ರೆ, ತೇಜಸ್ಸು ಮತ್ತು ತೇಜಸ್ಸಿನ ತನ್ಮಾತ್ರೆ, ವಾಯು ಮತ್ತು ವಾಯುವಿನ ತನ್ಮಾತ್ರೆ, ಆಕಾಶ ಮತ್ತು ಆಕಾಶದ ತನ್ಮಾತ್ರೆ, ಚಕ್ಷುರಿಂದ್ರಿಯ ಮತ್ತು ನೋಡತಕ್ಕ ವಿಷಯ, ಶ್ರೋತ್ರ ಮತ್ತು ಕೇಳತಕ್ಕ ಶಬ್ದ, ಘ್ರಾಣ ಮತ್ತು ಮೂಸತಕ್ಕ ವಾಸನೆ, ರಸನೇಂದ್ರಿಯ ಮತ್ತು ಸವಿಯತಕ್ಕ ರುಚಿ, ತ್ವಗಿಂದ್ರಿಯ ಮತ್ತು ಮುಟ್ಟಬೇಕಾದ ಸ್ಪರ್ಶ, ವಾಗಿಂದ್ರಿಯ ಮತ್ತು ಹೇಳುವ ಮಾತು, ಹಸ್ತೇಂದ್ರಿಯ ಮತ್ತು ತೆಗೆದುಕೊಳ್ಳಬೇಕಾಗಿರುವ ವಿಷಯ, ಉಪಸ್ಥೇಂದ್ರಿಯ ಮತ್ತು ಪಡತಕ್ಕ ಸುಖ, ಪಾಯ್ವಿಂದ್ರಿಯ ಮತ್ತು ಬಿಡಬೇಕಾಗಿರುವ ಮಲ, ಪಾದಗಳು ಮತ್ತು ಗಂತವ್ಯ ವಿಷಯ, ಮನಸ್ಸು ಮತ್ತು ಮನನಮಾಡಬೇಕಾದ ವಿಷಯ, ಬುದ್ಧಿ ಮತ್ತು ಅರಿತುಕೊಳ್ಳಬೇಕಾಗಿರುವ ವಿಷಯ, ಅಹಂಕಾರ ಮತ್ತು ಅಭಿಮಾನಪಡಬೇಕಾದ ವಿಷಯ, ಚಿತ್ತ ಮತ್ತು ಅರಿತುಕೊಳ್ಳಬೇಕಾಗಿರುವ ವಿಷಯ, ತೇಜಸ್ಸು ಮತ್ತು ಬೆಳಗಬೇಕಾಗಿರುವ ವಿಷಯ, ಪ್ರಾಣ ಮತ್ತು ಒಟ್ಟುಕೂಡಿಸಬೇಕಾಗಿರುವ ವಿಷಯ- ಈ ಎಲ್ಲ ಕಾರ್ಯಕರಣಗಳೂ ಪರಮಾತ್ಮನಲ್ಲಿ ಸೇರಿಹೋಗಿರುತ್ತವೆ'' (ಪ್ರಶ್ನ.೪-೭,೮). ಇಂದ್ರಿಯಗಳು ಆತ್ಮನಿಗಿಂತ ಬೇರೆಯಾಗಿದ್ದರಲ್ಲವೆ, ನೋಡುತ್ತೇನೆ, ಕೇಳುತ್ತೇನೆ- ಮುಂತಾದ ಅರಿವು ಆಗಬೇಕು ? ಯಾವಾಗ ಎಲ್ಲವೂ ಆತ್ಮನಲ್ಲಿ ಸೇರಿ ಹೋಗಿರುವವೋ ಆಗ ಯಾವನು ಏನನ್ನು ಏತರಿಂದ ಹೇಗೆ ಅರಿಯಬೇಕು ? ಹೀಗಿರುವದರಿಂದ ಸುಷುಪ್ತಿಯಲ್ಲಿ ನಾವು ಏನನ್ನೂ ಅರಿಯದೆ ಇರುವದು ಅಲ್ಲಿ ನಾವು ಅಚೇತನರಾಗಿರುವದರಿಂದಲ್ಲ, ಮತ್ತೇನೆಂದರೆ ಚೈತನ್ಯದ ಗಟ್ಟಿಯೇ ಆಗಿದ್ದು ಬಿಡಿಯರಿವಿಗೆ ಬೇಕಾಗಿರುವ ಇಂದ್ರಿಯಾದಿಗಳು ಇಲ್ಲದ್ದರಿಂದ ಎಂದು ನಿಶ್ಚಯಿಸಬೇಕು.

ಸುಷುಪ್ತಿಯಲ್ಲಿ ನಮಗೆ ಯಾವ ಅರಿವೂ ಆಗುವದಿಲ್ಲ ಎಂಬುದನ್ನೂ ಎರಡು ದೃಷ್ಟಿಗಳಿಂದ ನೋಡಿ, ತಕ್ಕಂತೆ ಯುಕ್ತಿಯನ್ನೂ ಹೊಂದಿಸಿಕೊಳ್ಳಬೇಕಾಗುವದು. ಹೇಗೆಂದರೆ, ಎಚ್ಚರಕನಸುಗಳಲ್ಲಿ ನಮಗೆ ಇಂದ್ರಿಯಗಳ ಬೆಳಕು ಇರುತ್ತದೆ ;

ಆದ್ದರಿಂದ ಅವುಗಳ ಬೆಳಕಿನಿಂದ ಎಲ್ಲವನ್ನೂ ಅರಿಯುತ್ತಿರುತ್ತೇವೆ. ಆದರೆ ಗಾಢನಿದ್ರೆಯಲ್ಲಿ ನಮಗೆ ಮಾಯೆಯು ಕವಿದುಕೊಂಡುಬಿಟ್ಟಿರುತ್ತದೆ. ಮಾಯೆ ಎಂದರೆ ನಾಮರೂಪಕರ್ಮಗಳು ; ನಾಮರೂಪಕರ್ಮಗಳು ಎಚ್ಚರಕನಸುಗಳಲ್ಲಿ ಬಿಡಿಬಿಡಿಯಾಗಿದ್ದುಕೊಂಡಿರುವದರಿಂದ ಇಂದ್ರಿಯಗಳೆಂಬ ಬೆಳಕುಗಳಿಂದ ವಿಷಯಗಳನ್ನು ನಾವು ಅರಿಯುತ್ತಿರುವೆವು. ಆದರೆ ತನಿನಿದ್ರೆಯಲ್ಲಿ ನಾಮರೂಪ ಕರ್ಮಗಳೆಲ್ಲವೂ ಆತ್ಮನಲ್ಲಿ ಒಂದಾಗಿ ಬೆರೆತು ಅವ್ಯಕ್ತವಾಗಿದ್ದುಕೊಂಡು ಬಿಟ್ಟಿರುತ್ತವೆ. ಆ ಮಾಯೆಯು ನಮ್ಮನ್ನು ಮುಚ್ಚಿಕೊಂಡುಬಿಟ್ಟಿರುತ್ತದೆ. ಆದ್ದರಿಂದ ಕಣ್ಣುಕಟ್ಟಿಸಿ ಕೊಂಡವರಿಗೆ ಏನೂ ಕಾಣಿಸದೆ ಇರುವಂತೆ ನಮಗ ಏತರ ಅರಿವೂ ಆಗದೆ ಇರುತ್ತದೆ. ಸುಷುಪ್ತಿಯ ಅನುಭವವು ಮಾತ್ರ ಹೇಗೋ ನಮಗೆ ಆಗುತ್ತಿರುತ್ತದೆ. ಇದಕ್ಕೊಂದು ದೃಷ್ಟಾಂತ : ಸೂರ್ಯನಿಗಾಗಲಿ ಚಂದ್ರನಿಗಾಗಲಿ ರಾಹುಗ್ರಹಣವಾದಾಗ ಆ ಗ್ರಹಣದಿಂದ ಸೂರ್ಯಚಂದ್ರರು ಮಸುಕುಮಸುಕಾಗಿ ಕಾಣುತ್ತಿರುತ್ತಾರೆ. ಆಗಲೂ ಸೂರ್ಯಚಂದ್ರರ ಪ್ರಕಾಶವೇನೂ ಕಡಿಮೆಯಾಗಿರುವದಿಲ್ಲ ; ಜನರ ಕಣ್ಣಿಗೆ ರಾಹುವು ಮರೆಯಾಗಿರುವದರಿಂದ ಅವರಿಗೆ ಸೂರ್ಯನ ಬೆಳಕು ಚೆನ್ನಾಗಿ ಮನವರಿಕೆಯಾಗುವದಿಲ್ಲ. ಇದರಂತೆ ನಮ್ಮ ಆತ್ಮನು ಗಾಢನಿದ್ರೆಯಲ್ಲಿಯೂ ಚೈತನ್ಯಸ್ವರೂಪನೇ ಆಗಿದ್ದರೂ ಕರಣಾದಿಗಳೆಲ್ಲವೂ ಲಯವಾಗಿ, ಅವ್ಯಕ್ತವಾಗಿದ್ದುಕೊಂಡು ಆತ್ಮಚೈತನ್ಯಕ್ಕೆ ಮರೆಯಾಗಿದ್ದಂತೆ ಇರುವದರಿಂದ ನಮಗೆ ಅರಿವೇ ಇಲ್ಲ- ಎಂಬ ಭ್ರಾಂತಿಯಾಗುತ್ತಿರುವದು. ಇದೆಲ್ಲ **ಎಚ್ಚರದೃಷ್ಟಿಯಿಂದ** ಹೇಳಿದ್ದು. ಈ ದೃಷ್ಟಿಯಿಂದ ನೋಡುವವರಿಗೆ ಅನುಕೂಲಿಸುವಂತೆ ಶ್ಲೋಕಕ್ಕೆ ಅರ್ಥವನ್ನು ಮೇಲೆ ಬರೆದಿರುತ್ತೇವೆ.

ಆದರೆ ಪ್ರತಿಯೊಂದು ಅವಸ್ಥೆಯನ್ನೂ ಆಯಾ ಅವಸ್ಥೆಯ ದೃಷ್ಟಿಯಿಂದ ನೋಡಿ ಅದರ ತತ್ತ್ವವನ್ನು ನಿರ್ಣಯಿಸುವದೇ ಹೆಚು ಯುಕ್ತವಾದದ್ದು. ಈ ದೃಷ್ಟಿಯಿಂದ ನೋಡುವವರಿಗೆ' ಅನುಕೂಲವಾಗುವಂತೆಯೋ ಶ್ಲೋಕದ ಪೂರ್ವಾರ್ಧಕ್ಕೆ ಅರ್ಥವನ್ನು ಮಾಡಬಹುದು. ಹೇಗೆಂದರೆ : 'ಮಾಯೆಯ ಮುಸುಕಿನಿಂದ ಯಾವ ಪುರುಷನು ರಾಹುಗ್ರಸ್ತರಾದ ಸೂರ್ಯಚಂದ್ರರಂತೆ ಇರುವನೋ, ಸನ್ಮಾತ್ರನಾಗಿದ್ದು ಕರಣಗಳ ಉಪಸಂಹಾರದಿಂದ ಯಾವನು ಸುಷುಪ್ತನೆನಿಸುವನೋ' ಎಂದು ಆ ದೃಷ್ಟಿಯಿಂದ ಅರ್ಥ. ಇದರ ಅಭಿಪ್ರಾಯವನ್ನು ಈಗ ವಿವರಿಸುವೆವು.

ನಮ್ಮ ಆತ್ಮನು ನಿಜವಾಗಿ ಯಾವಾಗಲೂ ಸನ್ಮಾತ್ರನೇ ಆಗಿರುತ್ತಾನೆ. ಅವನ ಸಚ್ಚಿದಾನಂದರೂಪಕ್ಕೆ ಯಾವಾಗಲೂ ಹೆಚ್ಚು ಕುಂದುಗಳಿರುವದಿಲ್ಲ. ಹೀಗಿದ್ದರೂ

ರಾಹುಗ್ರಸ್ತರಾದ ಚಂದ್ರಸೂರ್ಯರಿಗೆ ಅವರಲ್ಲಿಲ್ಲದ ಅಶುಕ್ಲರೂಪವು ತೋರುವಂತೆ, ಆತ್ಮನಿಗೆ ಎಚ್ಚರಕನಸುಗಳಲ್ಲಿ ಅವನಲ್ಲಿಲ್ಲದ ವಿಶೇಷರೂಪವು ಕಾಣಿಸುತ್ತಿರುವದು, ರಾಹುವು ಛಾಯಾಗ್ರಹವಾಗಿರುವದರಿಂದ ನಿಜವಾಗಿ ಸೂರ್ಯಚಂದ್ರರಿಗೆ ಅವನಿಂದ ಯಾವಾಗಲೂ ಯಾವ ಕಲಂಕವೂ ಆಗಿರುವದಿಲ್ಲ ; ಇದಲ್ಲದೆ ಛಾಯೆಯು, ಎಂದರೆ ನೆರಳು, ಆ ಸೂರ್ಯಚಂದ್ರರನ್ನು ಮುಟ್ಟದೆ ಅವರಿಗಿಂತ ಎಷ್ಟೋ ದೂರದಲ್ಲಿದ್ದು ಭೂಮಿಯ ಮೇಲೆ ನಿಂತು ನೋಡುವವರಿಗೆ ಸೂರ್ಯನು ಅಥವಾ ಚಂದ್ರನು ರಾಹುಗ್ರಸ್ತವಾಗಿರುತ್ತಾನೆ- ಎಂಬ ಭಾವನೆಯನ್ನುಂಟಮಾಡುತ್ತಿರುವಂತೆ, ಶರೀರೇಂದ್ರಿಯಗಳ ಸಂಘಾತವು ಎಚ್ಚರದಲ್ಲಿಯೂ ಶರೀರೇಂದ್ರಿಯಗಳ ಸಂಘಾತದ ವಾಸನೆಯಿಂದಾದ ರೂಪವು ಮಾತ್ರ ಕನಸಿನಲ್ಲಿಯೂ ಆತ್ಮನಿಗೆ ಸೇರಿಕೊಂಡಿರುವಂತೆ ಅಜ್ಞರಿಗೆ ತೋರುತ್ತಿರುತ್ತದೆ. ನಿಜವಾಗಿ ನೋಡಿದರೆ ರಾಹುವೆಂಬ ನೆರಳು ಹುಸಿತೋರಿಕೆಯಾಗಿರುವದರಿಂದಲೂ ಚಂದ್ರಸೂರ್ಯರನ್ನು ಯಾವಾಗಲೂ ಮುಟ್ಟದೆ ಇರುವದರಿಂದಲೂ ಅವರ ಸ್ವರೂಪಪ್ರಕಾಶಕ್ಕೆ ಯಾವ ಅಡ್ಡಿಯೂ ಎಂದಿಗೂ ಆಗಿರುವದೇ ಇಲ್ಲ. ಅಲ್ಲವೆ ? ಇದರಂತೆ, ಆತ್ಮನಿಗೂ ಸನ್ಮಾತ್ರರೂಪವು ಯಾವಾಗಲೂ ಇದ್ದುಕೊಂಡೇ ಇರುತ್ತದೆ ; ಅವಿದ್ಯೆಯಿಂದ ಕಲ್ಪಿತವಾಗಿರುವ ನಾಮರೂಪಗಳಿಂದಾಗಿರುವ ದೇಹೇಂದ್ರಿಯಸಂಘಾತದ, ಅಥವಾ ಅದರ ವಾಸನೆಯ, ಪ್ರಭಾವದಿಂದ ಎಚ್ಚರಕನಸುಗಳಲ್ಲಿ ಆತ್ಮನಿಗೆ ಸಶರೀರತ್ವವೂ ಬಿಡಿಬಿಡಿಯ ಜ್ಞಾನಗಳೂ ಅವುಗಳ ವಿಷಯಗಳೂ ಸಂಬಂಧಿಸಿರುವಂತೆ ಅಜ್ಞರಿಗೆ ತೋರುತ್ತಿರುವದು. ಹೀಗೆ ಅವಿವೇಕದಿಂದ ಆಗಿರುವ ಮತ್ತೊಂದು ವಿಶೇಷ ರೂಪವು ಸುಷುಪ್ತಿಯಲ್ಲಿ ಸ್ವಲ್ಪವೂ ಉಳಿಯದಂತೆ ಅಳಿಸಿ ಹೋಗಿರುತ್ತದೆ. ಏಕೆಂದರೆ **ವಿಶೇಷರೂಪಕ್ಕೂ ದ್ವೈತಕ್ಕೂ ಅವಿದ್ಯೆಯೇ ಕಾರಣ ;** ಆ ಅವಿದ್ಯೆಯು ಗಾಢನಿದ್ರೆಯಲ್ಲಿ ಇಲ್ಲದೆ ಇರುವದರಿಂದ ಆ ದ್ವೈತವೆಲ್ಲವೂ ಆತ್ಮನಲ್ಲಿಯೇ ಒಂದಾಗಿಬಿಟ್ಟಿರುತ್ತದೆ. ಆದ್ದರಿಂದಲೇ ನಿದ್ರೆಯಲ್ಲಿ ಯಾವ ವಿಶೇಷವಾದ ಅರಿವೂ ಇರುವದಿಲ್ಲ - ಎಂದು ಶ್ರುತಿಯು ಹೇಳುತ್ತದೆ : **'ಸತಿ ಸಂಪದ್ಯ ನ ವಿದುಃ ಸತಿ ಸಂಪದ್ಯಾಮಹೇ ಇತಿ'** ಸದ್ರೂಪವಾದ ಬ್ರಹ್ಮದಲ್ಲಿ ಬೆರೆತುಹೋಗಿದ್ದರೂ- ಹಾಗೆ ಬೆರೆತುಹೋಗಿದ್ದೇವೆ- ಎಂದು ಅರಿಯದೆ ಇರುವರು ಎಂದು ಶ್ರುತಿಯ ಅರ್ಥ. ಆದ್ದರಿಂದಲೇ ಸೂತ್ರಭಾಷ್ಯದಲ್ಲಿ **ಸತಿ ಸಂಪನ್ನಸ್ತಾವದೇಕತ್ವಾನ್ನ ವಿಜಾನಾತೀತಿ ಯುಕ್ತಮ್** (ಸತ್ತಿನಲ್ಲಿ ಬೆರೆತ ಜೀವನಾದರೂ ಆ ಬ್ರಹ್ಮದೊಡನೆ ಬೆರೆತು ಒಂದಾಗಿರುವದರಿಂದ ತಿಳಿಯುವದಿಲ್ಲ ಎಂಬುದು ಯುಕ್ತ) ಎಂದು ಬರೆದಿರುತ್ತಾರೆ. ಜ್ಞಾನಕ್ಕೆ ದ್ವೈತವು ಬೇಕು ; ಇಲ್ಲಿ ಆತ್ಮನು ಸನ್ಮಾತ್ರನಾಗಿರುವದರಿಂದ ಅರಿಯುವದಿಲ್ಲ ಎಂಬುದು ಭಾಷ್ಯದ ಅರ್ಥ.

ನಿಜವಾಗಿ ಆತ್ಮನು ಯಾವಾಗಲೂ ಸಚ್ಚಿದ್ರೂಪನೇ ಆಗಿದ್ದು ಯಾವಾಗಲೂ ಅದೇ ರೂಪದಿಂದ ಇರುತ್ತಾನಾದರೆ 'ಈಗ ಎಚ್ಚರವಾಗಿರುತ್ತಾನೆ, ಆಗ ಗಾಢನಿದ್ರೆಯಲ್ಲಿದ್ದನು' ಎಂದು ಅವಸ್ಥಾಭೇದವಿರುವದಕ್ಕೇನು ಕಾರಣ ?- ಎಂಬಶಂಕೆಗೆ ಈಗ ಪರಿಹಾರವು ಸಿಕ್ಕುತ್ತದೆ : ಎಚ್ಚರಕನಸುಗಳಲ್ಲಿ ಅನೃತವಾದ ಕಾರ್ಯಕರಣಗಳ ಸಂಬಂಧವಿರುತ್ತದೆ ; ಕರಣಗಳಿಂದ ವಿಷಯಗಳನ್ನು ಅರಿಯುತ್ತಿರುವದರಿಂದಲೇ ಎಚ್ಚೆತ್ತಿದ್ದಾನೆ ಎಂಬ ವ್ಯವಹಾರವಾಗಿರುತ್ತದೆ. ಆದರೆ ತನಿನಿದ್ರೆಯಲ್ಲಿ ಆ ಕರಣಗಳೆಲ್ಲ ಆತ್ಮನಲ್ಲಿ ಉಪಸಂಹಾರವಾಗಿ ಬೆರೆತುಹೋಗಿಬಿಟ್ಟಿರುವದರಿಂದ ಏನನ್ನೂ ಅರಿಯುವದಿಲ್ಲ. ಎಚ್ಚರದಂತೆ ಅಲ್ಲಿ ವಿಶೇಷವಾದ ಅರಿವಿಲ್ಲ ಎಂಬ ಕಾರಣದಿಂದ ಅವನು **ಸುಷುಪ್ತನಾಗಿ**ದಾನೆ ಎಂಬ ವ್ಯವಹಾರವಾಗುತ್ತದೆ. ಅಷ್ಟೆ.

ಹಾಗಾದರೆ ಸುಷುಪ್ತಿಯಲ್ಲಿ ಅವನ ಚೈತನ್ಯವು ಇರುತ್ತದೆಯೆ ? ಇದ್ದರೆ ಏಕೆ ಅರಿಯುವದಿಲ್ಲ ? ಅದು ಇದೆ ಎಂಬುದಕ್ಕೆ ಏನು ಗುರುತು ? ಎಂದು ಯಾರಾದರೂ ಕೇಳಬಹುದು. 'ನಾನು ಈವರೆಗೆ ನಿದ್ರಿಸುತ್ತಿದ್ದೆನು' ಎಂಬ ಪರಾಮರ್ಶವು ಎಚ್ಚತ್ತವರಿಗೆ ಆಗುತ್ತದೆಯಲ್ಲವೆ ? ಅದು ಏತರ ಬಲದಿಂದ ಆಗುತ್ತದೆ ; ಎಚ್ಚರ, ಕನಸು, ತನಿನಿದ್ರೆ- ಈ ಅವಸ್ಥೆಗಳು ಏತರ ಬಲದಿಂದ ಆತ್ಮನಿಗೆ ಆಗುತ್ತವೆ ?- ಇದನ್ನು ಆಲೋಚಿಸಿದವರಿಗೆ ಇದೆಲ್ಲಕ್ಕೂ ಆತ್ಮನ ಸ್ವರೂಪವೇ ಆಗಿರುವ ಚೈತನ್ಯವೇ ಸಾಧನವೆಂಬುದು ಗೊತ್ತಾಗುತ್ತದೆ. 'ನಾನು ಅವಸ್ಥೆಗಳನ್ನೆಲ್ಲ ನೋಡುತ್ತಿರುವೆನು' ಎಂಬ ಅರಿವು ಈ ಚೈತನ್ಯಬಲದಿಂದಲೇ ಆಗುತ್ತದೆ. ಹಾಗಿಲ್ಲದಿದ್ದರೆ 'ಸುಷುಪ್ತಿಯಲ್ಲಿ ನಾನಿರಲಿಲ್ಲ' ಎಂದು ಅರಿವಾಗಬೇಕಾಗಿತ್ತು. ಹಾಗೆ ಆಗಲು ಯಾರಿಗೂ ಶಕ್ಯವಿಲ್ಲ. ಆತ್ಮನು ಸ್ವತಂತ್ರನಾಗಿರುತ್ತಾನೆ, ಸ್ವತಂತ್ರನಾಗಿ ಅವಸ್ಥೆಗಳನ್ನೆಲ್ಲ ತನ್ನ ಸ್ವರೂಪಚೈತನ್ಯದಿಂದ ಅರಿಯುತ್ತಿರುತ್ತಾನೆ. ಸುಷುಪ್ತಿಯಲ್ಲಿಯೂ ಆ ಚೈತನ್ಯವು ಇದ್ದೇ ಇರುತ್ತದೆ ; ಆದರೆ ಅರಿವಿಗೆ ವಿಷಯವಾದ ಮತ್ತೊಂದು ಪದಾರ್ಥವಿರುವದಿಲ್ಲ. ಆದ್ದರಿಂದಲೇ **'ನ ತು ತದ್ದ್ವಿತೀಯಮಸ್ತಿ ತತೋऽನ್ಯದ್ವಿಭಕ್ತಂ ಯತ್ಪಶ್ಯೇತ್'** (ಬೃ.೪-೩-೨೩) ಅವನಿಗಿಂತ ಬೇರೆಯಾದ ವಸ್ತುವು ವಿಂಗಡವಾಗಿರುವದಿಲ್ಲ ; ಹಾಗಿದ್ದಿದ್ದರೆ ಅರಿಯಬಹುದಾಗಿದ್ದಿತು- ಎಂದು ಶ್ರುತಿಯೇ ಸಾರುತ್ತಿದೆ.

ಈಗ ಇನ್ನೊಂದು ವಿಷಯವನ್ನು ತಿಳಿಸಿ ಶ್ಲೋಕದ ವಿವರಣೆಯನ್ನು ಮುಗಿಸಬೇಕಾಗಿದೆ. ಆತ್ಮನು ತನಗೆ ತಾನು ಯಾವ ದೇಶದಿಂದಾಗಲಿ ಕಾಲದಿಂದಾಗಲಿ ವಸ್ತುವಿನಿಂದಾಗಲಿ ಮರೆಯಾಗಿರುವದಿಲ್ಲ ; ಆದ್ದರಿಂದ ಅವನಿಗೆ ತನ್ನ ವಿಷಯದಲ್ಲಿ 'ಅಲ್ಲಿ ಆಗ ಹಾಗಿದ್ದವನು ಇಲ್ಲಿ ಈಗ ಹೀಗಿರುತ್ತೇನೆ, ಎಂಬ ರೂಪದ

ಪ್ರತ್ಯಭಿಜ್ಞೆಯಾಗುವ ಸಂಭವವಿಲ್ಲ. 'ಅಲ್ಲಿ ಆಗ ನೋಡಿದ ದೇವದತ್ತನೇ ಇವನು' ಎಂಬ ರೂಪದ ಅರಿವಿಗೆ **ಪ್ರತ್ಯಭಿಜ್ಞೆ** ಎಂದು ಹೆಸರು ; ಇದು ದೇಶಕಾಲಗಳಲ್ಲಿ ವ್ಯವಹಿತವಾಗಿರುವ- **ಮತ್ತೊಂದರಿಂದ** ಮರೆಯಾಗಿರುವ- ವಸ್ತುವಿನ ವಿಷಯಕ್ಕೆ ಆಗುವ ಜ್ಞಾನ. ಆದರೆ ಆತ್ಮನು ನಿತ್ಯಚೈತನ್ಯರೂಪನಾದ್ದರಿಂದ ಅವನಲ್ಲಿ ಯಾವ ವಿಕಾರವೂ ಆಗುವಂತಿಲ್ಲ, ಆಯಿತೆಂದು ಕಲ್ಪಿಸುವದಕ್ಕೂ ಬರುವಂತಿಲ್ಲ. ದೇಶ, ಕಾಲ, ಅವಸ್ಥೆಗಳು- ಎಲ್ಲವನ್ನೂ ವ್ಯಾಪಿಸಿಕೊಂಡಿರುವದು ಅವನ ಚೈತನ್ಯ. **'ಯೇನ ಸರ್ವಮಿದಂ ತತಮ್'** (ಗೀ.೨-೧೭) ಎಂಬ ಗೀತಾವಚನಕ್ಕೆ ಇದೇ ಅಭಿಪ್ರಾಯ. ಹೀಗೆ ಅದ್ವಿತೀಯನಾದ ಆತ್ಮನ ವಿಷಯದಲ್ಲಿ ಪ್ರತ್ಯಕ್ಷವಾಗಿ ಆಗುವ ಅಭಿಜ್ಞೆಯೂ ಇಲ್ಲ, ಕಾಲಾಂತರದಲ್ಲಿ ಆಗುವ ಪ್ರತ್ಯಭಿಜ್ಞೆಯೂ ಇಲ್ಲ. ಹೀಗಿದ್ದರೂ ಎಚ್ಚರದ ದೃಷ್ಟಿಯಿಂದ ಮೂರು ಅವಸ್ಥೆಗಳುಂಟೆಂದೂ ಅವು ಒಂದಾಗುತ್ತಲೊಂದು ಬರುತ್ತಿರುವವೆಂದೂ ಇಟ್ಟುಕೊಂಡು, 'ಹಿಂದೆ ನಿದ್ರಿಸುತ್ತಿದ್ದೆನು' ಎಂದು ಎಚ್ಚರದ ಕಾಲದಲ್ಲಿ ಆತ್ಮನನ್ನು ಗುರುತಿಸುತ್ತಾರೆ ಎಂದು ಶ್ಲೋಕದಲ್ಲಿ ಹೇಳಿದೆ. ಈ ಗುರುತಿಸುವ ಜ್ಞಾನದಿಂದಲೂ ಸುಷುಪ್ತಿಯಲ್ಲಿ ಆತ್ಮನು ಚೈತನ್ಯರೂಪದಿಂದ ಇದ್ದೇ ಇರುವನೆಂತಲೂ ಅದೇ ರೂಪವೇ ಈಗ ಅವನಿಗೆ ಅಚ್ಚಳಿಯದೆ ಇರುವದೆಂತಲೂ ಸಿದ್ಧವಾಗುತ್ತದೆ.

ಒಟ್ಟಿನಲ್ಲಿ ನಮ್ಮಗಳೆಲ್ಲರ ಆತ್ಮನು ನಿತ್ಯಶುದ್ಧಬುದ್ಧಮುಕ್ತಸ್ವಭಾವನಾಗಿ ಯಾವಾಗಲೂ ಒಂದೇ ರೂಪದಿಂದ ಇರುತ್ತಿರುವನಾದರೂ ಎಚ್ಚರದಲ್ಲಿ ಅವಿದ್ಯಾ ಕಲ್ಪಿತನಾಮರೂಪಗಳಿಂದ ಪರಿಚ್ಛಿನ್ನಜ್ಞಾನಶಕ್ತಿಗಳುಳ್ಳವನಂತೆ ತೋರುತ್ತಿರುತ್ತಾನೆ. ಸುಷುಪ್ತಿಯ ಅವಸ್ಥೆಯನ್ನು ಚೆನ್ನಾಗಿ ಪರೀಕ್ಷಿಸಿ ವಿಚಾರಮಾಡಿದರೆ ಅಲ್ಲಿಯೂ ಮಿಕ್ಕ ಅವಸ್ಥೆಗಳಲ್ಲಿಯೂ ನಮ್ಮ ಆತ್ಮನು ನಿರ್ವಿಶೇಷನಾದ ಸಚ್ಚಿದ್ಬ್ರಹ್ಮರೂಪನೇ ಆಗಿರುತ್ತಾನೆ. ಎಲ್ಲಾ ಅವಸ್ಥೆಗಳನ್ನೂ ತನ್ನ ಚೈತನ್ಯದಿಂದ ವ್ಯಾಪಿಸಿಕೊಂಡಿರುವ ಅವನಿಗೆ ನಿಜವಾಗಿಯೂ ಹೆಚ್ಚಾಗಲಿ ಕುಂದಾಗಲಿ ಎಂದಿಗೂ ಇರುವದಿಲ್ಲ- ಎಂಬುದು ಗುರುಮೂರ್ತಿಯಾದ ಆ ದಕ್ಷಿಣಾಮೂರ್ತಿಯಿಂದಲೇ ತಿಳಿದು ಬರುವದು- ಎಂದು ಶ್ಲೋಕದ ಅಭಿಪ್ರಾಯ.

ః:::::::::

## ೭. ಆತ್ಮಪ್ರತ್ಯಯ

**ಬಾಲ್ಯಾದಿಷ್ವಪಿ ಜಾಗ್ರದಾದಿಷು ತಥಾ ಸರ್ವಾಸ್ವವಸ್ಥಾಸ್ವಪಿ**
**ವ್ಯಾವೃತ್ತಾಸ್ವನುವರ್ತಮಾನಮಹಮಿತ್ಯನ್ತಃಸ್ಫುರನ್ತಂ ಸದಾ ।**

**ಸ್ವಾತ್ಮಾನಂ ಪ್ರಕಟೀಕರೋತಿ ಭಜತಾಂ ಯೋ ಮುದ್ರಯಾ ಭದ್ರಯಾ**
**ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥**

'ಬಾಲ್ಯವೇ ಮುಂತಾದ, ಮತ್ತು ಎಚ್ಚರವೇ ಮುಂತಾದ, ಎಲ್ಲಾ ಅವಸ್ಥೆಗಳೂ ಬೇರೆಬೇರೆಯಾಗುತ್ತಿರುವಲ್ಲಿ, ಅನುಸರಿಸಿಕೊಂಡೇ ಬರುತ್ತಿರುವ 'ನಾನು' ಎಂದು ಒಳಗೆ ಸ್ಫುರಿಸುತ್ತಿರುವ ತಮ್ಮ ಆತ್ಮನನ್ನು ಭಜಿಸುತ್ತಿರುವವರಿಗೆ ತನ್ನನ್ನು ಭದ್ರಮುದ್ರೆಯಿಂದ ಯಾವನು ಪ್ರಕಟಗೊಳಿಸುತ್ತಿರುವನೋ ಅಂಥ ಶ್ರೀಗುರುಮೂರ್ತಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ !'- ಎಂದು ಶ್ಲೋಕದ ಅಕ್ಷರಾರ್ಥ.

ಹಿಂದಿನ ಶ್ಲೋಕದಲ್ಲಿ ಆತ್ಮನು ಸವಿಶೇಷನಾಗಿಯೂ ನಿರ್ವಿಶೇಷನಾಗಿಯೂ ಇದಾನೆಂದು ತೋರುತ್ತಿದ್ದರೂ ನಿರ್ವಿಶೇಷಸನ್ಮಾತ್ರನಾಗಿರುವದೇ ಅವನ ಸ್ವರೂಪವೆಂದೂ ತಿಳಿಸಲಾಗಿತ್ತು. ಈಗ ಆ ಸ್ವರೂಪವನ್ನು ಯಾವ ಪ್ರಕಾರದಿಂದ ವಿಚಾರಮಾಡಿ ತಿಳಿದುಕೊಳ್ಳಬೇಕೆಂಬುದನ್ನು ತಿಳಿಸಲಾಗುತ್ತದೆ. ದೇಹಾದಿಗಳಲ್ಲಿ ಆತ್ಮನೆಂಬ ಬುದ್ಧಿಯಿರುವದು ಅಜ್ಞರ ಸ್ವಭಾವ, ಮಾಯೆಗೆ ಒಳಗಾಗಿ ಅವರು ಆತ್ಮನನ್ನು ಬಗೆಬಗೆಯಾಗಿ ವಿಕಲ್ಪಿಸುವರು- ಎಂದು ಐದನೆಯ ಶ್ಲೋಕದಲ್ಲಿ ಹೇಳಿತ್ತಷ್ಟೆ ? ಮಾಯೆಯ ಹುಸಿತೋರಿಕೆಯನ್ನು ಕೈಬಿಟ್ಟು ನಿಜವಾದ ಆತ್ಮಸ್ವರೂಪನನ್ನೇ ಗೊತ್ತುಮಾಡುವದು ಹೇಗೆಂಬುದನ್ನು ಇಲ್ಲಿ ತಿಳಿಸಲಾಗುವದು.

ಆತ್ಮಸ್ವರೂಪವನ್ನು 'ನಾನು' ಎಂಬ ಪ್ರತ್ಯಯಕ್ಕೆ ನಿಜವಾದ ವಿಷಯವು ಯಾವದು ?- ಎಂದು ಹುಡುಕುವದರಿಂದ ನಿಶ್ಚಯಿಸಬಹುದು- ಎಂದು ಶ್ರುತಿಯಲ್ಲಿ **'ಏಕಾತ್ಮಪ್ರತ್ಯಯಸಾರಮ್'** (ಮಾಂ.೭) ಎಂಬ ವಿಶೇಷಣದಿಂದ ತಿಳಿಸಲಾಗಿದೆ. ಆತ್ಮನು ಆತ್ಮಪ್ರತ್ಯಯಗಮ್ಯನಾಗಿರುತ್ತಾನೆ, ನಾನು ಎಂಬ ಅರಿವಿನಿಂದ ತಿಳಿದುಬರುತ್ತಾನೆ, ಎಂದರೆ ಘಟಪಟಾದಿಗಳು ಆಯಾ ಪ್ರತ್ಯಯಗಳಿಗೆ ವಿಷಯವಾಗಿರುವಂತೆ ನಾನು ಎಂಬ ಪ್ರತ್ಯಯಕ್ಕೆ ಆತ್ಮನು ವಿಷಯನಾಗಿರುತ್ತಾನೆ ಎಂದೇನೂ ಅರ್ಥವಲ್ಲ. ಏಕೆಂದರೆ 'ನಾನು' ಎಂಬ ಅರಿವಿನಿಂದ ತಿಳಿಯಬಹುದಾದದ್ದು ಯಾವದೂ ವಿಷಯವಾಗಿರುವಂತೆ ಇಲ್ಲ, ನಾನು ಎಂದು ಯಾವದನ್ನು ಅರಿತುಕೊಂಡರೂ ಅದಕ್ಕೆ ಹೊರಗಿನ ವಸ್ತುವು ವಿಷಯವಾಗಿ ಇರುತ್ತದೆ. ಭ್ರಾಂತಿಯಿಂದ ದೇಹವನ್ನೇ ನಾನು ಎಂದು ಭಾವಿಸುವಾಗಲೂ 'ನಾನು ಇದನ್ನು ಮುಟ್ಟುತ್ತೇನೆ', 'ಅಲ್ಲಿಗೆ ಹೋಗುತ್ತೇನೆ' ಎಂದು ಹೊರಗಿನ ವಸ್ತುವನ್ನು **ವಿಷಯ**ವಾಗಿಯೂ ದೇಹವನ್ನು **ವಿಷಯಿ**ಯಾಗಿಯೂ ಇಟ್ಟುಕೊಳ್ಳುತ್ತೇವೆ.

ಆದರೆ ನಾನು ಎಂದು ಒಂದು ಸಲ ತೋರುವ ಈ ದೇಹವು ಇನ್ನೊಂದು ಸಲ ನಮಗೆ ವಿಷಯವಾಗಿಯೂ ತೋರಬಹುದು. ಹೇಗೆಂದರೆ 'ನಾನು ಹುಡುಗ

ಸಾಗಿದ್ದಾಗ ಇಂಥದ್ದೊಂದು ತೊಟ್ಟಿಲಿನಲ್ಲಿ ನನ್ನನ್ನು ಮಲಗಿಸುತ್ತಿದ್ದರಂತೆ. ಸ್ವಲ್ಪ ದೊಡ್ಡವನಾದಮೇಲೆ ಇಂಥ ಪಾಠಶಾಲೆಯಲ್ಲಿ ಓದುತ್ತಿದ್ದೆನು' ಎಂದು ಶರೀರಸಹಿತವಾಗಿರುವ ಇಂದ್ರಿಯಗಳನ್ನು ನನಗೆ ನಾನೇ ವಿಷಯವಾಗಿ ಮಾಡಿಕೊಳ್ಳಬಹುದು ; ಆಗ ಮನಸ್ಸೇ ನನ್ನ ಆತ್ಮವೆಂಬ ಭಾವನೆ ಇದ್ದುಕೊಂಡಿರುತ್ತದೆ. 'ಹುಡುಗನಾಗಿದ್ದಾಗ ನಮ್ಮ ಅಜ್ಜನನ್ನು ಕಂಡಿದ್ದೆನು ; ಈಗ ಅಪ್ಪ, ಅಜ್ಜ- ಯಾರೂ ಇಲ್ಲ, ಮಕ್ಕಳೂ ಮೊಮ್ಮಕ್ಕಳೂ ಇದಾರೆ' ಎನ್ನುವಾಗ ಶರೀರಸಂಬಂಧದ ಅಪ್ಪ, ಅಜ್ಜ, ಮಕ್ಕಳು, ಮೊಮ್ಮಕ್ಕಳು- ಇವರನ್ನೇ ಪರಾಮರ್ಶಮಾಡಿದ್ದರೂ, ಶರೀರವು ಬೇರೆಬೇರೆಯ ವಿಕಾರಗಳನ್ನು ಪಡೆದಿದೆಯೆಂಬುದೂ ನಾನು ಮಾತ್ರ ಅವನೇ ಎಂಬುದೂ ನಮಗೆ ಸ್ಫುಟವಾಗಿರುತ್ತದೆ- ಅಲ್ಲವೆ ? ಆದ್ದರಿಂದ 'ನಾನು' ಎಂಬ ಅರಿವಿನಿಂದ ನಾನು ಈಗ ಅನುಭವಿಸುತ್ತಿರುವ ಆತ್ಮನು ದೇಹಕ್ಕಿಂತ ಬೇರೆ ಎಂದಾಯಿತು. ಬಾಲ್ಯ, ಯೌವನ, ಕೌಮಾರ, ವಾರ್ಧಕ- ಎಂಬ ಅವಸ್ಥೆಗಳು ಬೇರೆಬೇರೆಯಾಗಿದ್ದರೂ ನನ್ನಲ್ಲಿ ಯಾವ, ಮಾರ್ಪಾಡೂ ಆಗಿಲ್ಲವೆಂದಾಯಿತು. ಇದರಂತೆಯೇ ಹುಡುಗನಾಗಿದ್ದಾಗ ನನ್ನ ಮನಸ್ಸಿಗೆ ಎಲ್ಲವೂ ಸರಿಯೆಂದೇ ತೋರುತ್ತಿತ್ತು ; ಈಗ ಎಲ್ಲವನ್ನೂ ವಿಚಾರಿಸಿಯೇ ಅರಿಯುತ್ತಿದ್ದೇನೆ' ಎಂಬ ಅರಿವಿನಲ್ಲಿ ಮನಸ್ಸಿಗೆ ಬೆಳವಣಿಗೆಯಾಗಿರುವದು ನನ್ನ ಅನುಭವದಲ್ಲಿರುವದರಿಂದ ನಾನು ಅದಕ್ಕಿಂತ ಬೇರೆ ಎಂದಾಗುತ್ತದೆ. ಆ ಮನಸ್ಸಿನ ಮಾರ್ಪಾಡುಗಳನ್ನು ನೋಡುತ್ತಿರುವ ನಾನು ಮಾತ್ರ ಅವನೇ ಎಂದು ನಿಶ್ಚಯಿಸಿಕೊಳ್ಳುತ್ತೇವೆ. ಹೀಗೆ ಆತ್ಮಪ್ರತ್ಯಯವು- ಅಥವಾ ನಾನು ಎಂಬ ಅರಿವು ದೇಹ, ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ- ಎಲ್ಲವನ್ನೂ ವಿಷಯೀಕರಿಸಿಕೊಳ್ಳುತ್ತಿರುವದರಿಂದ, ಇವುಗಳಲ್ಲಿ ಯಾವ ಯಾವ ಮಾರ್ಪಾಡು ಆಗುತ್ತಿದ್ದರೂ ಇವುಗಳನ್ನೆಲ್ಲ ಅನುಸರಿಸಿಕೊಂಡಿರುವ ನಾನೇ ಆತ್ಮನು ಎಂದು ಈ ಪ್ರತ್ಯಯದಿಂದ ನಿರ್ಧರಿಸಬಹುದಾಗಿರುತ್ತದೆ.

ಆತ್ಮನನ್ನು ಪ್ರತ್ಯಕ್ಷಾದಿಪ್ರಮಾಣಗಳಿಂದ ಅರಿಯುವದಕ್ಕೆ ಬರುವಂತಿಲ್ಲ ; ಏಕೆಂದರೆ ಅವನನ್ನು ಅವಲಂಬಿಸಿಯೇ ಆ ಪ್ರಮಾಣಗಳು ತಮ್ಮತಮ್ಮ ವಿಷಯವನ್ನು ತಿಳಿಸುತ್ತವೆ. ಆದರೂ ಪ್ರಮಾಣದ ವಿಷಯಗಳೂ ಪ್ರಮಾಣಗಳೂ ಬೇರ್ಪಡುತ್ತಿದ್ದರೂ ಅವುಗಳನ್ನು ವಿಷಯೀಕರಿಸುತ್ತಿರುವ ಆತ್ಮನೇ ನಾನು- ಎಂದು ಆತ್ಮಪ್ರತ್ಯಯದಿಂದ ಅವನನ್ನು ನಿಶ್ಚಯಿಸಬಹುದಾಗಿದೆ. ಹೀಗೆ ಆತ್ಮನನ್ನು ಆತ್ಮಪ್ರತ್ಯಯದಿಂದ ಅರಿಯುವದೆಂದರೆ ಅವನನ್ನು ಅದಕ್ಕೆ ವಿಷಯವಾಗಿಸಿಕೊಳ್ಳುವದಲ್ಲ ; ಏಕೆಂದರೆ ಯಾವದನ್ನು ವಿಷಯೀಕರಿಸಿಕೊಂಡರೂ ಆತ್ಮನು ವಿಷಯಿಯಾಗಿಯೇ ಉಳಿಯುತ್ತಾನೆ.

ಈಗ ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಗಿ ವಿಚಾರಮಾಡಬಹುದು. ನಾನು, ಇದು- ಎಂಬ ವಿಭಾಗದಿಂದ ನಮ್ಮ ಒಳಗೂ ಹೊರಗೂ ತೋರುವದೆಲ್ಲವೂ ನಮ್ಮ ಆತ್ಮನಿಗೇ ವಿಷಯವಾಗಿರುತ್ತದೆ. ರಸ್ತೆಯಲ್ಲಿರುವ ದೀಪದ ಕಂಬವು ತಾನು ನಿಂತಲ್ಲಿ ನಿಂತಿದ್ದರೂ ಆ ಕಡೆಯಿಂದ ಈ ಕಡೆಗೂ ಈ ಕಡೆಯಿಂದ ಆ ಕಡೆಗೂ ಓಡಾಡುವ ವಾಹನಗಳನ್ನೂ ಪ್ರಾಣಿಗಳನ್ನೂ ಮನುಷ್ಯರನ್ನೂ ತನ್ನ ಬೆಳಕಿನಿಂದ ಬೆಳಗುತ್ತಿರುವದಲ್ಲವೆ ? ಹಾಗೆಯೇ ದೇಹಾದಿಗಳೂ ಬಾಲ್ಯಾದ್ಯವಸ್ಥೆಗಳೂ ಬಂದು ಹೋಗುತ್ತಿರುವದನ್ನು ಎಂದೆಂದಿಗೂ ಈ ಆತ್ಮನು ತನ್ನ ಸ್ವರೂಪವಾದ ಜ್ಞಾನದಿಂದ ಬೆಳಗುತ್ತಿರುವ ಮಹಾಪ್ರದೀಪವಾಗಿರುತ್ತಾನೆ. ಮಾರ್ಪಡುವದೆಲ್ಲವನ್ನೂ ಅರಿಯುವಾಗ ಈ ಆತ್ಮನಲ್ಲಿ ಯಾವ ವಿಕ್ರಿಯೆಯೂ ಆಗಿರುವದಿಲ್ಲ. ಈ ಆತ್ಮನ ಸ್ವರೂಪವನ್ನು ನಾವು ಇದೆ ಎಂದಾಗಲಿ, ಇಲ್ಲ ಎಂದಾಗಲಿ ಅರಿಯುವದಕ್ಕೆ ಬರುವಂತಿಲ್ಲ ; ಏಕೆಂದರೆ ಈ ಆತ್ಮಸ್ವರೂಪದ ಅವಲಂಬನೆಯಿಂದಲೇ ನಾವು ಏನನ್ನಾದರೂ ಇದೆ, ಇಲ್ಲ- ಎನ್ನುತ್ತಿರುವೆವು. ಹಿಂದಿನ, ಈಗಿನ, ಮುಂದಿನ ಎಲ್ಲಾ ವಿಷಯಗಳನ್ನೂ ಅರಿಯುತ್ತಿರುವ ಈ ಆತ್ಮಸ್ವರೂಪವು ಇದೆಯೆಂಬುದು ಅನುಭವಮಾತ್ರದಿಂದಲೇ ನಮಗೆ ಗೊತ್ತಾಗುತ್ತದೆ. ನಾನು ಎಂಬ ಪ್ರತ್ಯಯವು ವಿಚಾರಕ್ಕೆ ಬರಿಯ ನೆಪವಾಗಿರುತ್ತದೆ.

ಮುಪ್ಪಿನವರೆಗಿನ ಅವಸ್ಥೆಗಳನ್ನು ಈ ಆತ್ಮನು ಅರಿಯುತ್ತಿರುವದರಿಂದ ಇವನನ್ನು **ಬಾಲ್ಯಾದ್ಯವಸ್ಥೆಗಳು** ಯಾವವೂ ಹೇಗೆ ಸೋಂಕದೆ ಇರುವವೋ ಹಾಗೆಯೇ ಜನ್ಮಮರಣಗಳೆಂಬ ಅವಸ್ಥೆಗಳೂ ಇವನನ್ನು ಸೋಂಕುವಹಾಗಿಲ್ಲ ; ಏಕೆಂದರೆ ದೇಹವು ಹುಟ್ಟುವದರಿಂದ ಆತ್ಮಸ್ವಭಾವವು ಹುಟ್ಟುವದಿಲ್ಲ, ದೇಹವು ಸಾಯುವದರಿಂದ ಇದು ಸಾಯುವಹಾಗಿಲ್ಲ. ಆದ್ದರಿಂದಲೇ **'ಸ ವಾ ಏಷ ಮಹಾನಜ ಆತ್ಮಾಽಜರೋಽಮರೋಽಮೃತೋಽಭಯೋ ಬ್ರಹ್ಮ'** (ಬೃ.೪-೪-೨೫) ಈ ನಮ್ಮ ಆತ್ಮನೇ ಜನ್ಮವಿಲ್ಲದ ಮಹಾನಾತ್ಮನು, ಇವನು ಮುಪ್ಪಿಲ್ಲದವನು, ಸಾವಿಲ್ಲದವನು, ಸಾವಾಗದ ಸ್ವಭಾವದವನು, ಅಂಜಿಕೆಯಿಲ್ಲದವನು, ಬ್ರಹ್ಮವು- ಎಂದು ಶ್ರುತಿಯು ಸಾರುತ್ತಿರುವದು. ಈ ಆತ್ಮನು ನಿತ್ಯವೂ ತನ್ನಲ್ಲಿ ತಾನು ಇದ್ದಂತೆ ಇರುವ ಸ್ವಭಾವದವನಾಗಿರುತ್ತಾನೆ.

ಈಗ ಬಾಲ್ಯಾದವಸ್ಥೆಗಳನ್ನು ಬಿಟ್ಟು **ಜಾಗರಿತಾದ್ಯವಸ್ಥೆ**ಗಳನ್ನು ವಿಚಾರಕ್ಕೆ ತೆಗೆದುಕೊಳ್ಳಬಹುದು. ಈ ಎರಡು ಅವಸ್ಥಾರಾಶಿಗಳಲ್ಲಿ ಒಂದಕ್ಕಿಂತ ಒಂದು ವಿಲಕ್ಷಣವಾಗಿರುತ್ತದೆ. ಅದೇನೆಂದರೆ : ಬಾಲ್ಯಾದಿಗಳು ಒಂದರ ಹಿಂದೆ ಒಂದು ಬರುವಂತೆ ತೋರುತ್ತಿರುವತ್ತವೆ ; ಜನ್ಮದಿಂದ ಹಿಡಿದು ಮರಣದವರೆಗೂ ಆಗುವ

ದೇಹದ ವಿಕಾರಗಳು ಒಂದರ ಹಿಂದೊಂದು ಬರುತ್ತಿದ್ದರೂ ಈ ದೇಹಾದಿಗಳು ನನಗೇ ಸಂಬಂಧಪಟ್ಟಿರುವವು- ಎಂಬ ಭ್ರಾಂತಿಯೊಂದು ಅವಿವೇಕಿಗಳಿಗೆ ಅಂಟಿ ಕೊಂಡಿರುತ್ತದೆ. ಶರೀರವು ಬಾಲ್ಯವೆಂಬ ಮೊದಲನೆಯ ಅವಸ್ಥೆಯಿಂದ ಮುಪ್ಪು ಎಂಬ ಕೊನೆಯ ಅವಸ್ಥೆಗೆ ಬರುವವರೆಗೆ ಅದೇ ಈ ದೇಹವೆಂದು ಹೇಳುವದಕ್ಕೆ ಗುರುತೇ ಇಲ್ಲದಷ್ಟು ಮಾರ್ಪಾಡುಗಳು ಅದರಲ್ಲಿ ಆಗಿಹೋಗಿರುತ್ತವೆ ; ಆದರೂ ಅದೇ ಈ ನನ್ನ ದೇಹವು ಎಂಬ ಭಾವನೆಯೊಂದು ನಮ್ಮನ್ನು ಬೆನ್ನಂಟಿರುತ್ತದೆ. ಹೀಗೆ ವಿಕಾರಗಳು ಆಗುತ್ತಿದ್ದರೂ 'ಅದೇ ಇದು'- ಎಂಬ ಬುದ್ಧಿಗೆ ವಿಷಯವಾಗಿರುವ ವಸ್ತುಗಳನ್ನು **ಪರಿಣಾಮಿನಿತ್ಯ-** ಎನ್ನುತ್ತಾರೆ. ಪರಿಣಾಮಿನಿತ್ಯನಾಗಿರುವ ದೇಹವೇ ಮುಂತಾದವುಗಳ ಸಂಬಂಧವು ಆತ್ಮನಿಗೆ ನಿಜವಾಗಿರುವದಿಲ್ಲವಾದರೂ ಅವಿವೇಕಿಗಳಿಗೆ ಈ ಸಂಬಂಧವು ನಿತ್ಯವಾಗಿರುವದೆಂಬ ಭ್ರಾಂತಿಯು ಉಂಟಾಗು ತ್ತಲೇ ಇರುವದು. ಆದ್ದರಿಂದ ಈ ಭ್ರಾಂತಿಯನ್ನು ನಿರ್ಮೂಲಮಾಡುವ ಅನುಭವವೊಂದನ್ನು ತೋರಿಸಿಕೊಡುವದು ಅವಶ್ಯವಾಗಿರುತ್ತದೆ. ಅದಕ್ಕಾಗಿಯೇ ಜಾಗ್ರದಾದ್ಯವಸ್ಥೆಗಳನ್ನು ಉದಾಹರಿಸಿರುವದು.

ಈ ಎರಡನೆಯ ರಾಶಿಯ ಅವಸ್ಥೆಗಳಲ್ಲಿ ಒಂದು ವಿಶೇಷವಿರುತ್ತದೆ. ಎಚ್ಚರ ಕನಸು- ಇವೆರಡರಲ್ಲಿ ಯಾವದಾದರೊಂದು ಎರಡನೆಯ ವಸ್ತುವನ್ನು ಕಾಣುತ್ತಿರುತ್ತೇವೆ ; ಸುಷುಪ್ತಿಯಲ್ಲಿ ನಮಗೆ ಏನೂ ಕಾಣಿಸುವದೇ ಇಲ್ಲ. ಎರಡನೆಯ ವಸ್ತುವಿನ ಅರಿವು ಇರುವ **ದರ್ಶನವೃತ್ತ್ಯವಸ್ಥೆ,** ಯಾವ ಅರಿವೂ ಇಲ್ಲದ **ಅದರ್ಶನವೃತ್ತ್ಯವಸ್ಥೆ-** ಎಂಬ ಎರಡು ಪಂಗಡಗಳಲ್ಲಿ ಸೇರದೆ ಇರುವ ಯಾವ ಅವಸ್ಥೆಯೂ ಇರುವದಿಲ್ಲ. ಆದ್ದರಿಂದ ಸನ್ನಿ, ಮೂರ್ಛೆ- ಮುಂತಾದ ಬೇರೆಯ ಅವಸ್ಥೆಗಳನ್ನು ಇಲ್ಲಿ ವಿಚಾರಕ್ಕೆ ತೆಗೆದುಕೊಳ್ಳಬೇಕಾಗಿರುವದಿಲ್ಲ. ಜಾಗ್ರತ್ಸ್ವಪ್ನ ಸುಷುಪ್ತಿಗಳನ್ನು ವಿಚಾರಮಾಡಿಬಿಟ್ಟರೆ ಜ್ಞೇಯರಾಶಿಯನ್ನೆಲ್ಲ ವಿಚಾರಮಾಡಿದಂತೆ ಆಗಿಬಿಡುತ್ತದೆ. ಏಕೆಂದರೆ ಈ ಮೂರು ಅವಸ್ಥೆಗಳೊಳಗೆ ಅಡಕವಾಗದೆ ಇರುವ ಅವಸ್ಥೆಯೇ ಇಲ್ಲವಾದ್ದರಿಂದ ಇವುಗಳಿಗಿಂತ ವ್ಯತಿರಿಕ್ತವಾದ ಜ್ಞೇಯವೇ ಇರುವದಿಲ್ಲ.

ಬಾಲ್ಯಾದಿಗಳ ಪರೀಕ್ಷೆಗೂ ಜಾಗ್ರದಾದಿಗಳ ಪರೀಕ್ಷೆಗೂ ಇರುವ ಒಂದು ವೈಲಕ್ಷಣ್ಯವೇನೆಂದರೆ, ಬಾಲ್ಯಾದಿಗಳೆಲ್ಲ ಎಚ್ಚರವೆಂಬ ಒಂದೇ ಅವಸ್ಥೆಗೆ ಸೇರಿರುತ್ತವೆ; ಅವುಗಳೆಲ್ಲ ಎಚ್ಚರದ ಕಾಲದಲ್ಲಿ ಉಂಟಾಗುತ್ತಿರುತ್ತವೆ. ಹುಡುಗ ನಾಗಿದ್ದವನು ಹರೆಯದವನಾಗಿದ್ದಾಗ ಹುಡುಗತನವೂ ಯೌವನವೂ ಒಂದಿರು ವಾಗ ಇನ್ನೊಂದಿರುವದಿಲ್ಲವಾದರೂ ಹುಡುಗನಾಗಿದ್ದವನೇ ಹರೆಯದವನಾಗುವ

ನೆಂಬ ಭಾವನೆಯು ನಮ್ಮನ್ನು ಹಿಡಿದುಕೊಂಡಿರುವದರಿಂದ 'ಹುಡುಗತನವಿದ್ದಾಗ ಅದು ನಿಜವಾಗಿಯೂ ಇತ್ತು, ಆಮೇಲೆ ಅದೇ ವ್ಯಕ್ತಿಗೇ ಯೌವನವು ಬಂದಿತು ಎಂದೇಕೆ ತಿಳಿಯಬಾರದು ? ಎಂಬ ಶಂಕೆ ಏಳುವ ಸಂಭವವಿದೆ. ಆದರೆ ಎಚ್ಚರ ಕನಸು- ಮುಂತಾದ ಅವಸ್ಥೆಗಳನ್ನು ಪರೀಕ್ಷಿಸುವಾಗ ಹೀಗಿಲ್ಲ. ಎಚ್ಚರವು ಇರುವಾಗ ಸ್ವಪ್ನವಾಗಲಿ ಸುಷುಪ್ತಿಯಾಗಲಿ ಇರುವದೇ ಇಲ್ಲ ; ಅವು ಈಗ ಎಲ್ಲಿಯಾದರೂ ಬೇರೊಂದೆಡೆಯಲ್ಲಿ ನಿಜವಾಗಿದ್ದುಕೊಂಡಿರುವವೆಂದು ನಾವು ಯಾರೂ ಭಾವಿಸುವದಿಲ್ಲ ; ಹೀಗೆಯೇ ಕನಸನ್ನು ಕಾಣುತ್ತಿರುವಾಗ ಎಚ್ಚರವಾಗಲಿ ತನಿನಿದ್ರೆಯಾಗಲಿ ಎಲ್ಲಿಯೂ ಇರುವದೇ ಇಲ್ಲ. ಇದೂ ಅಲ್ಲದೆ ಎಚ್ಚರ, ಕನಸು, ನಿದ್ರೆ- ಇವು ಮೂರೂ ಬಾಲ್ಯ, ಯೌವನ, ಕೌಮಾರ- ಈ ಅವಸ್ಥೆಗಳಂತೆ ಒಂದೇ ಕಾಲ ಪ್ರವಾಹದಲ್ಲಿ ಒಂದಾಗುತ್ತಲೊಂದು ಬರುತ್ತಿರುವದಿಲ್ಲ. ಏಕೆಂದರೆ ಎಚ್ಚರದಲ್ಲಿ ನಮ್ಮ ಅನುಭವಕ್ಕೆ ಬರುವ ಕಾಲವೇ ಬೇರೆ, ಕನಸುಗಳಲ್ಲಿ ಕಾಣಬರುವ ಕಾಲಪ್ರವಾಹವೇ ಬೇರೆ. ಈ ದೃಷ್ಟಿಯಿಂದ ವಿಚಾರಮಾಡುವಾಗ ಎಚ್ಚರದ ಕಾಲದಲ್ಲಿ ಸ್ವಪ್ನವು ಹಿಂದಿನ ಕಾಲಕ್ಕೆ ಅಥವಾ ಮುಂದಿನ ಕಾಲಕ್ಕೆ ಸೇರುವಂತೆಯೇ ಇಲ್ಲ. ಕನಸುಗಳಲ್ಲಿ ತೋರುತ್ತಿರುವ ಪ್ರತಿಯೊಂದು ಕಾಲಪ್ರವಾಹದಲ್ಲಿಯೂ ಹಿಂದೆ ಈಗ, ಮುಂದೆ- ಎಂಬ ಭಾಗಗಳು ಇರುತ್ತಿದ್ದರೂ ಎಚ್ಚರವು ಆ ಕಾಲ ಪ್ರವಾಹಗಳಲ್ಲಿ ಯಾವದೊಂದರಲ್ಲಿಯೂ ಇರುವದೇ ಇಲ್ಲ. ಆದರೂ ಎಚ್ಚರ ದಲ್ಲಿಯೂ ಕನಸುಗಳಲ್ಲಿಯೂ ಆತ್ಮನು ಒಬ್ಬನೇ ಇರುತ್ತಾನೆ ; ನಾನೇ ಎಚ್ಚರವನ್ನು ಕಾಣುತ್ತಿರುವವನು, ನಾನೇ ಅನೇಕಸ್ವಪ್ನಗಳನ್ನು ಅನುಭವಿಸಿರುವವನು- ಎಂಬ ಅನುಭವಕ್ಕೆ ಎಂದಿಗೂ ಬಾಧೆಯಿಲ್ಲ. ಆದ್ದರಿಂದ ಅವಸ್ಥೆಗಳು ಒಂದೊಂದೂ ಮಿಕ್ಕಿನ ಎರಡೂ ಅವಸ್ಥೆಗಳನ್ನು ಪೂರ ಒರೆಸಿಹಾಕಿಯೇ ತೋರಿಕೊಳ್ಳುವವೆಂದು ಆಯಿತು. ಯಾವ ಎರಡು ಅವಸ್ಥೆಗಳಿಗೂ ಯಾವ ಕಾಲಕೃತವಾದ ಸಂಬಂಧವೂ ಇಲ್ಲ. ಈ ಅವಸ್ಥೆಗಳು ಬೇರ್ಪಡುತ್ತಿರುವವು ಎಂದರೆ ಒಂದರ ಹಿಂದೊಂದು ಬರುತ್ತಿರುವವು ಎಂದೇನೂ ಅರ್ಥವಲ್ಲ. ಒಂದು ಮತ್ತೆರಡನ್ನೂ ಅಳಿಸಿಹಾಕಿಯೇ ಬರುತ್ತಿರುವದು. ಎಂದೇ ಅರ್ಥ.

ಈ ದೃಷ್ಟಿಯಿಂದ ನೋಡಿ ವಿಮರ್ಶಿಸಿದಾಗ ಏರ್ಪಡುವ ಸಿದ್ಧಾಂತ ವೇನೆಂದರೆ: ಆತ್ಮನು ಎಲ್ಲಾ ಅವಸ್ಥೆಗಳನ್ನೂ ಕಾಣುತ್ತಾ, ತನ್ನ ಸ್ವರೂಪದಲ್ಲಿ ಯಾವ ಮಾರ್ಪಾಡೂ ಇಲ್ಲದೆ, ಇರುತ್ತಾನೆ. ಆದ್ದರಿಂದ ಅವನು **ಪರಮಾರ್ಥ ಸತ್ಯಸ್ವರೂಪನು.** ಆದರೆ ಅವಸ್ಥೆಗಳು ಹಾಗಲ್ಲ. ಒಂದು ಹಗ್ಗವನ್ನು ಕೋಲು, ನೀರಿನ ಕೋಡಿ, ನೆಲದ ಬಿರುಕು, ಹಾವು ಎಂದು ಬಗೆಬಗೆಯಾಗಿ ನಾವು

ಕಲ್ಪಿಸಿಕೊಳ್ಳುವಾಗ ಅವು ಕಲ್ಪನಾಮಾತ್ರದಿಂದ ತೋರುತ್ತಿರುವವೇ ಹೊರತು ನಿಜವಾಗಿ ಹಗ್ಗದಲ್ಲಿ ಇದ್ದುಕೊಂಡೇ ಇರುವದಿಲ್ಲ. ಅವು ನಮ್ಮ ಮನಸ್ಸಿಗೆ ತೋರುವ **ವಿಕಲ್ಪ** ಮಾತ್ರವಾಗಿರುತ್ತವೆ. ಆದ್ದರಿಂದ ಅವು ಬರಿಯ ಹುಸಿತೋರಿಕೆಗಳು. ಇದರಂತೆ ಆತ್ಮನು ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಅವಸ್ಥೆಗಳನ್ನು ಅನುಭವಿಸುವಂತೆ ತೋರಿದರೂ- ಹಗ್ಗದಲ್ಲಿ ತೋರುವ ಕೋಲು, ನೀರಿನ ಕೋಡಿ ಮುಂತಾದವು ಹಗ್ಗವನ್ನು ಸ್ವಲ್ಪವೂ ಸೋಂಕದೆ ಇರುವಂತೆ- ಈ ಅವಸ್ಥೆಗಳು ಆತ್ಮನ ಸ್ವರೂಪವನ್ನು ಸ್ವಲ್ಪವೂ ಸೋಂಕದೆ ಇರುತ್ತವೆ. ಹಗ್ಗದಲ್ಲಿ ತೋರುವ ಹಾವಿನಿಂದ ಹಗ್ಗದಲ್ಲಿ ಯಾವ ಮಾರ್ಪಾಡೂ ಆಗಿರುವದಿಲ್ಲ, ಅದು ನಿಜವಾಗಿಲ್ಲವೆಂದು ತಿಳಿಯಬಂದಾಗ ಆ ಹಾವಿನ ಕಲೆಯಾವದೂ ಹಗ್ಗಕ್ಕೆ ಅಂಟಿಕೊಂಡಿರುವದಿಲ್ಲ. ಇದರಂತೆ ನಾವು ನೋಡಿರುವ ಎಚ್ಚರದಿಂದಾಗಲಿ ಕನಸುಗಳಿಂದಾಗಲಿ ನಮ್ಮ ನಿಜವಾದ ಸ್ವರೂಪದಲ್ಲಿ ಯಾವ ಮಾರ್ಪಾಡೂ ಆಗಿರುವದಿಲ್ಲ ; ಎಚ್ಚರವನ್ನು ಬಿಟ್ಟು ಕನಸಿಗಾಗಲಿ ಕನಸನ್ನು ಬಿಟ್ಟು ಎಚ್ಚರಕ್ಕಾಗಲಿ ನಾವು ಹೋದಾಗ ಮೊದಲಿನ ಅವಸ್ಥೆಯ ಕಲೆಯು ನಮ್ಮ ಸ್ವರೂಪಕ್ಕೆ ಒಂದಿಷ್ಟೂ ಅಂಟಿಕೊಂಡಿರುವದಿಲ್ಲ. ಪರಮಾರ್ಥವಸ್ತುವಿಗೆ ಅದರಲ್ಲಿ ಹುಟ್ಟುಗಟ್ಟಿಕೊಂಡಿರುವ ಹುಸಿತೋರಿಕೆಯಿಂದ ಎಂದಿಗಾದರೂ ಯಾವದಾದರೂ ಗುಣದ ಅಥವಾ ದೋಷದ ಅಂಟು ಹೇಗೆತಾನೆ ಬಂದೀತು ?

'ಈ ಅವಸ್ಥೆಗಳನ್ನು ನಾನೇ ಅನುಭವಿಸುತ್ತಿರುವೆನು' ಎಂದು ನಮಗೆ ಅನುಭವವಾಗುತ್ತಿದ್ದರೂ ಇಲ್ಲಿರುವ 'ನಾನು' ಎಂಬ ಪ್ರತ್ಯಯಕ್ಕೂ ಶಬ್ದಕ್ಕೂ ಗುರಿಯಾಗಿರುವ ಆತ್ಮವಸ್ತು ಯಾವದೊಂದು ಅವಸ್ಥೆಗೂ ಕಟ್ಟುಬಿದ್ದಿರುವದಿಲ್ಲವಾದ್ದರಿಂದ ಅಹಂಪ್ರತ್ಯಯಕ್ಕೆ ವಿಷಯವಾಗಿರುವ ವಸ್ತುವನ್ನೇನೂ ಇಲ್ಲಿ ನಾನು ಎಂಬ ಮಾತಿನಿಂದ ಹೇಳಿಲ್ಲ ಎಂಬುದನ್ನು 'ಅಹಮಿತ್ಯನ್ತಃಸ್ಫುರನ್ತಮ್' (ನಾನು ಎಂದು ಒಳಗೆ ತೋರಿಕೊಳ್ಳುತ್ತಿರುವ) ಎಂಬ ವಿಶೇಷಣವು ತಿಳಿಸುತ್ತದೆ. ಆದ್ದರಿಂದ ಸದಾ ('ಯಾವಾಗಲೂ' ತೋರುತ್ತಿರುವ) ಎಂಬಲ್ಲಿರುವ ಶಬ್ದವೂ ಕಾಲವಾಚಕವಲ್ಲ; ಏಕೆಂದರೆ ಬೇರೆಬೇರೆಯ ಕಾಲದ ಭಾವವು ಆಗುತ್ತಿರುವ ಎಚ್ಚರಕನಸುಗಳಲ್ಲಿಯೂ ಕಾಲದ ತೋರಿಕೆಯಾಗಲಿ ಅರಿವಾಗಲಿ ಇಲ್ಲದಿರುವ ಸುಷುಪ್ತಿಯಲ್ಲಿಯೂ ಆತ್ಮನು ತನ್ನ ಸ್ವರೂಪವನ್ನು ಮರೆಮಾಡದೆ ಸ್ವಪ್ರಕಾಶನಾಗಿಯೇ ತೋರುತ್ತಿರುತ್ತಾನೆ ; ಅವನೇ ನಾವುಗಳು 'ನಾನು'ಎಂದು ವ್ಯವಹರಿಸುತ್ತಿರುವ ಆತ್ಮನ ಪರಮಾರ್ಥಸ್ವರೂಪವು- ಎಂದೇ ಆ ಮಾತಿನಿಂದ ವಿವಕ್ಷಿತವಾಗಿರುವ ಅರ್ಥ- ಎಂದಾಯಿತು.

ಹೀಗೆ ಯಾವ ಮಾರ್ಪಾಡುಗಳೂ ತನ್ನ ಸ್ವರೂಪದಲ್ಲಿಲ್ಲದೆ, ಜಾಗ್ರತ್ಸ್ವಪ್ನ ಗಳಲ್ಲಿ ಕಾಣಬರುವ ಎಲ್ಲಾ ಮಾರ್ಪಾಡುಗಳಿಗೂ ಸಾಕ್ಷಿಯಾಗಿ, ಅವಸ್ಥೆಗಳೆಂಬ ಎಲ್ಲಾ ವಿಕಲ್ಪಗಳಿಗೂ ಸಾಕ್ಷಿಯಾಗಿ, ತನ್ನ ಚೈತನ್ಯದಿಂದ ಎಲ್ಲಾ ವಿಕಲ್ಪಗಳನ್ನೂ ವ್ಯಾಪಿಸಿಕೊಂಡಿರುವ ಈ ಅದ್ವೈತಸ್ವರೂಪವು, ಶ್ರೀದಕ್ಷಿಣಾಮೂರ್ತಿಯಾದ ಪರಮೇಶ್ವರನ ಭಕ್ತರಿಗೆ ಮಾತ್ರವೇ ದೊರಕುವದು- ಆತ್ಮನೇ ಅವರ ಬುದ್ಧಿವೃತ್ತಿ ಯನ್ನು ಸರಿಯಾದ ದಿಕ್ಕಿನಲ್ಲಿ ಹರಿಯಿಸಿ ತನ್ನ ಸ್ವರೂಪದ ಜ್ಞಾನವನ್ನು ಅನುಗ್ರಹಿಸುತ್ತಾನೆ. ಆದರೆ ಯಾರು ಆ ಪರಮೇಶ್ವರನ ವಿಷಯಕ್ಕೆ ವಿಮುಖರಾಗಿರು ವರೋ, ಯಾರು ಲೌಕಿಕವಿಷಯಭೋಗಗಳಲ್ಲಿಯೇ ಆಸಕ್ತಿಯುಳ್ಳವರಾಗಿರು ವರೋ, ಅವರಿಗೆ ಈ ಪರಮಾರ್ಥವು ಆತ್ಮನೇ ಆಗಿರುತ್ತಿದ್ದರೂ ಯಾವ ಪ್ರಯೋಜನವನ್ನೂ ಉಂಟುಮಾಡಲಾರದೆ ಇರುತ್ತದೆ.

ಆತ್ಮನು **'ಏಕಾತ್ಮಪ್ರತ್ಯಯಸಾರನು'** ಎಂದು ಉಪನಿಷತ್ತಿನಲ್ಲಿ ಸಾರಿರುತ್ತದೆ ಯಷ್ಟೆ ? ಆತ್ಮಪ್ರತ್ಯಯವು, ಎಂದರೆ ನಾನು ಎಂಬ ಅರಿವು, ಯಾವದನ್ನು ಹೇಳು ತ್ತದೆ?- ಎಂದು ತಮ್ಮೊಳಗೆ ತಾವೇ ವಿಚಾರಮಾಡಿಕೊಳ್ಳುವದರಿಂದ ಈ ಆತ್ಮನನ್ನು ಅನುಸರಿಸಿಕೊಂಡು ಹೋಗಿ ಕಂಡುಕೊಳ್ಳಬಹುದು- ಎಂಬುದು ಆ ವಿಶೇಷಣಕ್ಕೆ ಒಂದು ಅರ್ಥ. ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲಿ ಒಬ್ಬನೇ ಆತ್ಮನಿರುವನು, ಅವನೇ ನನ್ನ ಪರಮಾರ್ಥಸ್ವರೂಪವು- ಎಂಬ ಭಾವನೆಯಿಂದ ಹುಡುಕಿದಾಗ ನಮಗೆ ದೊರಕುವ ತತ್ತ್ವವೇ ಆ ಆತ್ಮನು ಎಂಬುದು ಅದೇ ವಿಶೇಷಣಕ್ಕೆ ಎರಡನೆಯ ಅರ್ಥ. ಹೀಗೆ ಎರಡೂ ಬಗೆಯಿಂದ ಆತ್ಮಾನ್ವೇಷಣೆಯನ್ನು ಮಾಡಬೇಕೆಂಬುದು ನಮಗೆ ಹೇಗೆ ಹೊಳೆಯಬೇಕು ?- ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರ ವೇನೆಂದರೆ : ಈವರೆಗೆ ಹೇಳುತ್ತಾಬಂದಿರುವಂತೆ ನಿರಾಕಾರನೂ ನಿರ್ವಿಶೇಷನೂ ಆಗಿರುವ ಆ ಪರನೇಶ್ವರನನ್ನೇ ಭಕ್ತಿಯಿಂದ ಸೇವಿಸುವವರಿಗೆ ಉಪಾಸ್ಯನಾದ ಆತನು ದಯೆಯಿಂದ ಶ್ರೀದಕ್ಷಿಣಾಮೂರ್ತಿಯ ರೂಪದಿಂದಲೂ, ಅದಕ್ಕಿಂತ ಮೊದಲು ಶ್ರೀಗುರುಮೂರ್ತಿಯ ರೂಪದಿಂದಲೂ ಪ್ರಕಟನಾಗುವನು. ಸದ್ಗುರುರೂಪದಿಂದ ಉಪದೇಶಿಸುವಾಗ ಆತನು **ಚಿನ್ಮುದ್ರೆ**ಯಿಂದ ಈ ತತ್ತ್ವವನ್ನು ತಿಳಿಸಿಕೊಡುತ್ತಾನೆ. ಚಿನ್ಮುದ್ರೆಯಲ್ಲಿ ಎರಡು ಬೆರಳುಗಳೂ ಒಂದಾಗಿರುವಂತೆ ದ್ವೈತವೆಲ್ಲವೂ ನನ್ನ ಪರಮಾರ್ಥಸ್ವರೂಪದಲ್ಲಿ ಒಂದಾಗಿರುತ್ತದೆ ಎಂಬುದನ್ನೂ ಆತನು ಉಪದೇಶದಿಂದ ತಿಳಿಸಿಕೊಡುತ್ತಾನೆ. ಎರಡು ಬೆರಳುಗಳನ್ನು ಕೂಡಿಸಿದಾಗಲೂ ಅವು ಬೇರೆಬೇರೆ ಯಾಗಿಯೇ ತೋರುತ್ತಿರುವದೆಂಬುದನ್ನೇನೂ ಇಲ್ಲಿ ಲಕ್ಷ್ಯಕ್ಕೆ ತರಬಾರದು. ಏಕೆಂದರೆ ಜಾಗ್ರತ್ಸ್ವಪ್ನಗಳಲ್ಲಿ ತೋರುತ್ತಿರುವ ದ್ವೈತವೆಲ್ಲವೂ ಹೇಳಹೆಸರಿಲ್ಲದಂತೆ

ಸುಷುಪ್ತಿಯಲ್ಲಿ ಅಡಗುವಂತೆ, ಶ್ರೀಸದ್ಗುರುಮೂರ್ತಿಯಾದ ಶ್ರೀದಕ್ಷಿಣಾಮೂರ್ತಿಯ ಅನುಗ್ರಹದಿಂದಾದ ಮನಸ್ಸಮಾಧಿಯಲ್ಲಿ ಈ ಅವಿದ್ಯಾಕಲ್ಪಿತವಾಗಿರುವ ದ್ವೈತವೆಲ್ಲವೂ ಸೇರಿಹೋಗಿ ಅಖಂಡಸಚ್ಚಿದಾನಂದಸ್ವರೂಪವೇ ಪರಮಾರ್ಥವು, ಅದೇ ನನ್ನ ಪರಮಾರ್ಥಾತ್ಮವು- ಎಂಬುದು ಅನುಭವಕ್ಕೆ ಬರುವದು. **'ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಪಶ್ಯೇತ್'** (ಬೃ.೪-೫-೧೫) ಎಲ್ಲಿ ಈ ಜ್ಞಾನಿಗೆ ಎಲ್ಲವೂ ಆತ್ಮನೇ ಆಗಿಬಿಟ್ಟಿರುವದೋ ಅಲ್ಲಿ ಏತರಿಂದ ಯಾವದನ್ನು ಕಾಣಲಾದೀತು ?- ಎಂಬ ಶ್ರುತ್ಯರ್ಥವು ಆತನ ಅನುಗ್ರಹದಿಂದ ಅನುಭವದಲ್ಲಿ ತೋರಿಕೊಳ್ಳುವದು.

ঃঃঃঃঃঃঃঃঃ

## ೮. ಜಗತ್ತಿನಲ್ಲಿ ದೃಶ್ಯಗಳಿಗಿರುವ ಮಿಥ್ಯಾಸಂಬಂಧ

**ವಿಶ್ವಂ ಪಶ್ಯತಿ ಕಾರ್ಯಕಾರಣತಯಾ ಸ್ವಸ್ವಾಮಿಸಂಬನ್ಧತಃ**

**ಶಿಷ್ಯಾಚಾರ್ಯತಯಾ ತಥೈವ ಪಿತೃಪುತ್ರಾದ್ಯಾತ್ಮನಾ ಭೇದತಃ ।**

**ಸ್ವಪ್ನೇ ಜಾಗ್ರತಿ ವಾ ಯ ಏಷ ಪುರುಷೋ ಮಾಯಾಪರಿಭ್ರಾಮಿತ-**

**ಸ್ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥**

'ಕಾರ್ಯಕಾರಣಸಂಬಂಧವುಳ್ಳದ್ದು, ನಾನುನನ್ನದೆಂಬ ಸಂಬಂಧವುಳ್ಳದ್ದು, ಶಿಷ್ಯ, ಆಚಾರ್ಯ- ಎಂಬ ಸಂಬಂಧವುಳ್ಳದ್ದು- ಹೀಗೆ ಕನಸಿನಲ್ಲಾಗಲಿ ಎಚ್ಚರದಲ್ಲಾಗಲಿ ಮಾಯೆಯಿಂದ ಭ್ರಾಂತಿಗೊಳಿಸಲ್ಪಟ್ಟು ಈ ಯಾವ ಪುರುಷನು ವಿಶ್ವವನ್ನು ಭಿನ್ನಭಿನ್ನಸಂಬಂಧದಿಂದ ಕೂಡಿದ್ದನ್ನಾಗಿ ಕಾಣುತ್ತಿರುವನೋ ಆ ಶ್ರೀಗುರುಮೂರ್ತಿಯಾದ ಶ್ರೀದಕ್ಷಿಣಾಮೂರ್ತಿಗೆ ಈ ನಮಸ್ಕಾರವು !' ಎಂದು ಶ್ಲೋಕಾರ್ಥ.

ಹಿಂದಿನ ಏಳು ಶ್ಲೋಕಗಳಲ್ಲಿ ಆತ್ಮನು ಒಬ್ಬನೇ ಪರಮಾರ್ಥಸತ್ಯಸ್ವರೂಪನಾದವನು ; ಅವನಲ್ಲಿ ಹುಸಿತೋರಿಕೆಯ ಪ್ರಪಂಚವು ಕಲ್ಪಿತವಾಗಿರುತ್ತದೆ. ನಿಜವಾಗಿ ಅವನಿಗಿಂತ ಬೇರೆಯಾಗಿರುವ ಎರಡನೆಯ ವಸ್ತುವೇ ಇಲ್ಲ. ಈ ತತ್ತ್ವವನ್ನು ಗುರುಮೂರ್ತಿಯ ರೂಪದಲ್ಲಿರುವ ಶ್ರೀದಕ್ಷಿಣಾಮೂರ್ತಿ ಪರಮೇಶ್ವರನ ಅನುಗ್ರಹದಿಂದ ಮನಗಾಣಬೇಕು- ಎಂದು ಬಗೆಬಗೆಯ ವಿಚಾರಗಳಿಂದ ತಿಳಿಸಿಕೊಟ್ಟದ್ದಾಯಿತು: ಈ ತತ್ತ್ವವನ್ನು ನಾವು ಮನಗಾಣುವದಾದರೂ ಹೇಗೆ ? ಎಲ್ಲವೂ ಅದ್ವಿತೀಯಬ್ರಹ್ಮವೇ ಆದರೆ ಯಾರಿಗೆ ಯಾರಿಂದ ಉಪದೇಶ ? ಯಾರು ಅಜ್ಞರು, ಯಾರು ತಜ್ಞರು ? ಯಾರಿಗೆ ಬಂಧ, ಯಾರಿಗೆ ಮೋಕ್ಷ ? ಎಲ್ಲವೂ ಅದ್ವೈತವಾದ

ಆತ್ಮತತ್ತ್ವವೊಂದೇ ಎಂದಾದರೆ ಜಗತ್ತಿನ ವ್ಯವಹಾರವೆಲ್ಲ ಸಾಗುವದು ಹೇಗೆ ? ಅಥವಾ ವ್ಯವಹಾರದಲ್ಲಿ ನಮಗಿರುವ ಅನುಭವಕ್ಕೆ ವಿರುದ್ಧವಾಗಿರುವದರಿಂದ ಈ ಸಿದ್ಧಾಂತವೇ ಸಟೆಯೆಂದೇಕೆ ಹೇಳಬಾರದು ? ಎಂಬುದೇ ಮುಂತಾದ ಶಂಕೆಗಳಿಗೆ ಈಗ ಪರಿಹಾರವನ್ನು ಹೇಳುವದಕ್ಕೆ ಹೊರಟಿದೆ.

ನಮಗೆ ಕಾಣುವ ಈ ವಿಶ್ವವು ಚಿತ್ರವಿಚಿತ್ರವಾಗಿ, ಗೊತ್ತಾದ ದೇಶಕಾಲ ನಿಮಿತ್ತಗಳಿಂದಾಗುವ ಕ್ರಿಯಾಕಾರಕಫಲಗಳ ಗುಂಪಾಗಿದೆ ; ಕಾಲದಲ್ಲಿ ಹೊಸ ಹೊಸದಾದ ರೂಪಗಳನ್ನು ತಳೆಯುತ್ತಿದೆ- ಇಂಥ ಈ ಪ್ರಪಂಚವು ನಿಜವಲ್ಲವೆ ? ಇದರಲ್ಲಿ ಕಾಣಬರುವ ನಾನಾತ್ವವು ಸರಿಯೆ ? ಇದು ನಿಜವಾದರೆ ಅದ್ವೈತ ವೆಂಬುದೆಲ್ಲಿಂದ ಬರುತ್ತದೆ ? - ಹೀಗೆಂಬುದು ಸಾಮಾನ್ಯರ ಮನಸ್ಸಿನಲ್ಲಿ ಆಗಾಗ್ಗೆ ಎದ್ದುಕೊಳ್ಳುವ ಶಂಕೆ. ಈ ಶಂಕೆಗೆ ಪರಿಹಾರವನ್ನು ಆಗಲೆ ಹೇಳಿಯೇ ಇದೆಯಾದರೂ ಈಗ ಇನ್ನೊಂದು ದೃಷ್ಟಿಕೋಣದಿಂದ ಅದನ್ನೇ ಮತ್ತೆ ಇಲ್ಲಿ ಹೇಳಲಾಗುತ್ತದೆ.

ಸತ್ಯ, ಮಿಥ್ಯೆ - ಎಂಬ ಶಾಸ್ತ್ರದ ಮಾತುಗಳ ಅರ್ಥವನ್ನು ಮೊದಲು ನಾವು ಮನಸ್ಸಿನಲ್ಲಿ ಗಟ್ಟಿಯಾಗಿ ನಿಲ್ಲಿಸಿಕೊಳ್ಳಬೇಕು. ಏಕೆಂದರೆ ಅದನ್ನು ಅರಿಯದ್ದ ರಿಂದಲೇ ಈ ಬಗೆಬಗೆಯ ಸಂಶಯಗಳು ಮನಸ್ಸಿನಲ್ಲಿ ಮೊಳಕೆಯಾಗುತ್ತಿರುವವು. ವ್ಯವಹಾರದಲ್ಲಿ ಯಾವದು ಎಲ್ಲರಿಗೂ ನಿಜವೆಂದು ತೋರುವದೋ ಅದನ್ನು 'ಸತ್ಯ'ವೆಂದು ಕರೆಯುತ್ತೇವೆ. ಮಿಕ್ಕೆಲ್ಲರಿಗೂ ತೋರದೆ ಒಬ್ಬನಿಗೆ ಮಾತ್ರವೇ ಪದಾರ್ಥಗಳು ಕಾಣಿಸಿಕೊಂಡರೆ - ಉದಾಹರಣೆಗೆ ಕನಸಿನಲ್ಲಿ ಒಬ್ಬನಿಗೆ ಮಾತ್ರ ಕೆಲವರು ಮನುಷ್ಯರು, ಪ್ರಾಣಿಗಳು , ಗಿಡಮರಗಳು ಅಥವಾ ಜಡವಸ್ತುಗಳು ಕಾಣಿಸಿಕೊಂಡರೆ - ಅವನ್ನು ಸತ್ಯವೆನ್ನುವದಕ್ಕಿಲ್ಲ. ಕನಸಿನಲ್ಲಿ ಕಂಡದ್ದು ಎಚ್ಚರ ವಾಗುತ್ತಲೂ ತನಗೇ ಮಿಥ್ಯೆ, ಹುಸಿ - ಎಂದಾಗಿಬಿಡುವದು ಎಲ್ಲರ ಅನುಭವದಲ್ಲಿಯೂ ಇದೆ. ಇದರಂತೆ ಎಚ್ಚರದಲ್ಲಿಯೇ ದೂರಕ್ಕೆ ಒಂದು ಹಗ್ಗವು ಹಾವಿನಂತೆ ತೋರಿಕೊಂಡರೆ, ಒಂದು ಕಪ್ಪೆಯಚಿಪ್ಪು ಥಳಗುಟ್ಟಿ ಬೆಳ್ಳಿಯೆಂಬ ನಂಬಿಕೆಯನ್ನುಂಟುಮಾಡಿದರೆ, ಅಥವಾ ದೂರದಲ್ಲಿರುವ ಮರಳುಕಾಡಿನಲ್ಲಿ ನೀರಿರುವಂತೆ ತೋರಿದರೆ, ಆ ಕಾಲಕ್ಕೆ ಇಂಥ ದೃಶ್ಯಗಳು ನಿಜವೆಂದು ನಮಗೆ ತೋರಿದರೂ ಸ್ವಲ್ಪ ಪರೀಕ್ಷೆಮಾಡಿದಮೇಲೆ ಅವು ದಿಟವಲ್ಲ - ಎಂದು ಗೊತ್ತಾಗುವದು. ಕನಸಿನಲ್ಲಿ ಕಂಡ ರೂಪಾಯಿ ಎಚ್ಚರದಲ್ಲಿ ವ್ಯವಹಾರಕ್ಕೆ ಬರುವದಿಲ್ಲ. ದೂರದಲ್ಲಿ ಬೆಳ್ಳಿಯೆಂದು ಕಂಡುಬಂದ ಕಪ್ಪೆಚಿಪ್ಪಿನ ಬೆಳ್ಳಿಯಿಂದ ಯಾವ ಒಡವೆಯನ್ನೂ ಮಾಡಿಸಿಕೊಳ್ಳುವದಕ್ಕಾಗುವದಿಲ್ಲ. ಹೀಗೆಯೇ ದೂರದಲ್ಲಿ

ಕಂಡುಬಂದ ಬಯಲಿನ ಬಿಸಿಲುಕುದುರೆಯ ನೀರು ಬಾಯಾರಿಕೆಯನ್ನು ಹಿಂಗಿಸುವದಿಲ್ಲ. ಆದ್ದರಿಂದ ಅವು ಯಾವವೂ ಸತ್ಯವಲ್ಲ- ಎಂಬುದು ನಮ್ಮೆಲ್ಲರ ತೀರ್ಪು. ಹೀಗೆ ವ್ಯವಹಾರದಲ್ಲಿ ಯಾವ ವಸ್ತುವಿನಿಂದ ಯಾವ ನಿರೀಕ್ಷಿತವಾದ **ಅರ್ಥಕ್ರಿಯೆ-** ಪ್ರಯೋಜನವನ್ನುಂಟುಮಾಡುವ ಕೆಲಸ - ಆಗುವದಿಲ್ಲವೋ ಅದು ಮಿಥ್ಯೆ , ಹುಸಿ ; ಯಾವದು ಎಂದೆಂದಿಗೂ ಎಲ್ಲರಿಗೂ ಈ ಅರ್ಥಕ್ರಿಯೆಯನ್ನು ಮಾಡುತ್ತಿರುವದೋ ಅದು ಸತ್ಯ ಎನ್ನುತ್ತೇವೆ. ಈ ಸತ್ಯತ್ವವನ್ನು ನಿರ್ಧರಿಸುವದಕ್ಕೆ ನಮಗೆ ಪ್ರತ್ಯಕ್ಷವೇ ಪ್ರಮಾಣವು ; ದೋಷದಿಂದ ಮಿಥ್ಯಾವಸ್ತುವನ್ನೇ ನಾವು ಸತ್ಯವೆಂದು ಭಾವಿಸಿಕೊಂಡರೂ ಅದನ್ನು ಚೆನ್ನಾಗಿ ಪರೀಕ್ಷಿಸಿದ ಮೇಲೆ ಅರ್ಥಕ್ರಿಯೆಯನ್ನುಂಟುಮಾಡುವದಿಲ್ಲವಾದ್ದರಿಂದ ಅದು ಸತ್ಯವಲ್ಲವೆಂದು ನಿಶ್ಚಯವಾಗಿಬಿಡುತ್ತದೆ. ಕೈಯನ್ನು ಸುಡದಿರುವ ತೋರಿಕೆಯ ಬೆಂಕಿ ನಿಜವಾದ ಬೆಂಕಿಯಲ್ಲ, ಬಾಯಾರಿಕೆಯನ್ನು ನೀಗಿಸದ ನೀರು ನಿಜವಾದ ನೀರಲ್ಲ. ಇತ್ಯಾದಿ. ಹೀಗೆ ವ್ಯವಹಾರದಲ್ಲಿ ಸತ್ಯಮಿಥ್ಯಾವಿಭಾಗವನ್ನು ಜನರು ಮಾಡಿಕೊಂಡಿರುವರು.

ಆದರೆ ಜಗತ್ತು **ಸತ್ಯವೋ, ಅಥವಾ ಮಿಥ್ಯೆಯೋ ?** - ಎಂಬುದನ್ನು ಹೀಗೆ ನಿರ್ಣಯಿಸಿಕೊಳ್ಳುವದಕ್ಕೆ ಬರುವಂತಿಲ್ಲವೆಂದು ಸ್ಪಷ್ಟ. ಏಕೆಂದರೆ ನಮಗೆ ಕಾಣುವ ಜಗತ್ತೆಲ್ಲವನ್ನೂ ಉಂಡೆಯಾಗಿ ಮಾಡಿಟ್ಟರೆ ಅದರೊಳಗೇ ಹೊರಗಿನ ಜನರು, ಪ್ರಾಣಿಗಳು, ಸಸ್ಯಗಳು, ಜಡವಸ್ತುಗಳು - ಮುಂತಾದವುಗಳಲ್ಲದೆ ನಮ್ಮೊಳಗಿನ ಶರೀರ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ - ಎಲ್ಲವೂ ಸೇರಿಬಿಡುವದರಿಂದ, ಈ ಜಗತ್ತು ಸತ್ಯವೆಂದು ಎಲ್ಲರೂ ಒಪ್ಪುತ್ತಾರಾದ್ದರಿಂದ ಸತ್ಯವೆಂದಾಗಲಿ, ಇದು ಅರ್ಥಕ್ರಿಯೆಯನ್ನುಂಟುಮಾಡುವದರಿಂದ ಸತ್ಯವೆಂದಾಗಲಿ, ನಿಶ್ಚಯಿಸುವದು ಸಾಧ್ಯವಿಲ್ಲ. ಏಕೆಂದರೆ 'ಎಲ್ಲರೂ' ಜಗತ್ತಿನಲ್ಲಿಯೇ ಸೇರಿರುತ್ತಾರೆ. ಅರ್ಥಕ್ರಿಯೆಯೂ ಮತ್ತು ಅದು ಯಾರಿಗೆ ಆಗಬೇಕೋ ಅವರ ಆ ಸ್ವರೂಪವೂ ಜಗತ್ತಿನಲ್ಲಿಯೇ ಸೇರಿಬಿಟ್ಟಿರುತ್ತದೆ. ಆದ್ದರಿಂದ ಹಿಂದೆ ಹೇಳಿದ ವ್ಯಾವಹಾರಿಕಸತ್ಯದ ಲಕ್ಷಣವನ್ನು ಇಲ್ಲಿ ಉಪಯೋಗಿಸಿಕೊಳ್ಳುವದಕ್ಕೆ ಬರುವದಿಲ್ಲ. ನಿಜವಾಗಿಯೂ ಸತ್ಯವಾದದ್ದಕ್ಕೆ **ಪರಮಾರ್ಥಸತ್ಯ**ವೆಂದು ಹೆಸರು. ಯಾವದು ಯಾವ ರೂಪದಲ್ಲಿರುವದೆಂದು ಗೊತ್ತಾಗಿರುವದೋ, ಆ ತನ್ನ ರೂಪವನ್ನು ಯಾವಾಗಲೂ ಮಾರ್ಪಡಿಸದೆ ಒಂದೇ ರೂಪದಲ್ಲಿದ್ದರೆ, ಅದು ನಿಜವಾಗಿ ಸತ್ಯವೆಂದು ಹೇಳಬಹುದು. ಭ್ರಾಂತಿಯಲ್ಲಿ ಕಾಣುವ ಹಗ್ಗವು ಹಾವು, ಬಯಲ್ದೊರೆಯ ನೀರು, ಕಪ್ಪೆಯಚಿಪ್ಪಿನ ಬೆಳ್ಳಿ- ಇವೆಲ್ಲ ಆಯಾ ಕಾಲಕ್ಕೆ ಹಾಗೆ ತೋರಿದರೂ ಕಾಲಾಂತರದಲ್ಲಿ ಇದು ಹಾವಲ್ಲ, ಹಗ್ಗ ; ನೀರಲ್ಲ, ಬರಿಯ ಮರಳುನೆಲ ; ಬೆಳ್ಳಿಯಲ್ಲ, ಕಪ್ಪೆಯಚಿಪ್ಪೇ- ಎಂಬ ರೂಪದಲ್ಲಿ ಮಾರ್ಪಟ್ಟುಬಿಡುತ್ತವೆಯಲ್ಲವೆ ? ಆದ್ದರಿಂದ ಆ

ಹಾವು ಮುಂತಾದವು ಬರಿಯ ಹುಸಿತೋರಿಕೆ ; ಅಥವಾ ಅವು ತೋರಿಕೆ ಯೆಂಬುದಕ್ಕಿಂತಲೂ ಹಾಗೆಂದು ಆ ಕಾಲಕ್ಕೆ ನಾವು ಸುಮ್ಮನೆ ಕಲ್ಪಿಸಿಕೊಂಡೆ ವೆಂಬುದೇ ಯುಕ್ತವಾದದ್ದು. ಈ ಲಕ್ಷಣವನ್ನು ಜಗತ್ತಿಗೆ ಹೊಂದಿಸಿನೋಡಿದರೆ ಜಗತ್ತು ಈಗ ನಮಗೆ ಕಾಣುವ ರೂಪದಲ್ಲಿ ಕನಸಿನಲ್ಲಿರುವದಿಲ್ಲ ; ಅಥವಾ ಈ ರೂಪದಲ್ಲಿರುವದಿಲ್ಲವೆನ್ನುವದೇಕೆ, ಇದು ಆಗ ಇರುವದೇ ಇಲ್ಲವೆನ್ನುವದೇ ಯುಕ್ತ. ಕನಸಿನಲ್ಲಿ ಮತ್ತೊಂದು ತೋರಿಕೆಯ ಜಗತ್ತು ಆಗ್ಗೆ ಕಾಣಿಸಿಕೊಳ್ಳುತ್ತಿ ರುತ್ತದೆ. ಅಲ್ಲವೆ ? ಆದ್ದರಿಂದ ಈ ದೃಷ್ಟಿಯಿಂದ ನೋಡಿದಾಗ ಈ **ಜಗತ್ತು** ಈಗ **ತೋರುವ ರೂಪದಿಂದ ಮಿಥ್ಯೆಯೇ,** ಹುಸಿತೋರಿಕೆಯೇ, ನಿಜವೆಂಬುದು ನಾವು ಭ್ರಾಂತಿಯಿಂದ ತಿಳಿದುಕೊಂಡಿರುವದೇ - ಎನ್ನಬಹುದಾಗಿದೆ.

ಈಗ ಒಂದು ಶಂಕೆ : ಒಬ್ಬ ಮನುಷ್ಯನು ತನ್ನ ಮನೆಯನ್ನು ಬಿಟ್ಟು ಬೇರೊಂದು ಕಡೆಗೆ ಹೋಗಿರುವಾಗ, ಊರಿನವರಿಗೆ ಮನೆಯಲ್ಲಿ ಕಾಣಿಸುವದಿಲ್ಲ. ಅಷ್ಟುಮಾತ್ರದಿಂದ ಅವನನ್ನು ಮಿಥ್ಯೆ, ಅವನು ಇಲ್ಲವೇ ಇಲ್ಲ. ಹುಸಿತೋರಿಕೆ ಎನ್ನಬಹುದೆ ? ಈ ಶಂಕೆಯು ಸರಿಯಲ್ಲ. ಏಕೆಂದರೆ ಮನೆಯನ್ನು ಬಿಟ್ಟು ಬೇರೊಂದೂರಿಗೆ ಹೋದವನು ಎಲ್ಲಿಯೂ ಇಲ್ಲವೆಂದೇನೂ ನಾವು ತಿಳಿಯುವ ದಿಲ್ಲ. ಅವನು ಈಗ ಇಲ್ಲಿಲ್ಲ, ನಾಳೆ ಬರುತ್ತಾನೆ ಎನ್ನುತ್ತೇವೆ. ಅಷ್ಟೆ. ಇದರಂತೆ ಕೆಲವು ದಿನ ಇದ್ದು ಆ ಬಳಿಕ ಸತ್ತವನನ್ನು ಆಗ ಇದ್ದನು, ಈಚೆಗೆ ಸತ್ತನು ಕೆಲವು ದಿನ ಇದ್ದು ಆ ಬಳಿಕ ಸತ್ತವನನ್ನು ಆಗ ಇದ್ದನು, ಈಚೆಗೆ ಸತ್ತನು ಎನ್ನುತ್ತೇವೆ. ಅಲ್ಲವೆ ? ಆದ್ದರಿಂದ ಈ ದೃಷ್ಟಾಂತರಗಳನ್ನು ಮಿಥ್ಯೆಗೆ ಕೊಡುವದಕ್ಕೆ ಬರುವದಿಲ್ಲ. ನಮಗೆ ಎಚ್ಚರದಲ್ಲಿ ಕಾಣಬರುವ ಈ ಜಗತ್ತು ಕನಸಿನಲ್ಲಿ ಕಾಣುವದಿಲ್ಲವೆಂಬುದಿಷ್ಟೇ ಅಲ್ಲ 'ಅದು ಈಗ ಇಲ್ಲಿಲ್ಲ, ಅಲ್ಲಿದೆ ' ಅಥವಾ ಅದು ಈಗ ಇಲ್ಲ, ಆಮೇಲೆ ಬರುತ್ತದೆ' ಅಥವಾ 'ಹಿಂದೆ ಇತ್ತು, ಈಗ ಹಾಳಾಯಿತು' ಎಂದೇನೂ ನಾವು ಎಣಿಸುವದಿಲ್ಲ. ಅದರ ಅರಿವಾಗಲಿ, ನೆನಪಾಗಲಿ ನಮಗೆ ಆಗ್ಗೆ ಬರುವದೇ ಇಲ್ಲ! ಆಗ ಇದು ಎಲ್ಲಿಯೋ ಇರುತ್ತದೆ ಎಂದು ಕಲ್ಪಿಸುವದಾದರೆ 'ಕನಸಿನ ಪ್ರಪಂಚವು ಈಗ ಎಲ್ಲಿಯೋ ಇರಬೇಕು' ಎಂದು ಕಲ್ಪಿಸುವದೂ ಸರಿಯೆಂದಾಗುವದು. ಹಾಗೆಂದು ನಾವು ಯಾರೂ ಭಾವಿಸುವದಿಲ್ಲ. ಆದ್ದರಿಂದ ಎಚ್ಚರದ ಪ್ರಪಂಚವು ಕನಸಿನಲ್ಲಿ ಎಲ್ಲಿಯೂ ಇಲ್ಲವೇ ಇಲ್ಲ ಎನ್ನುವದೇ ಯುಕ್ತ. ಈಗ ಯಾರಾದರೂ ಹೀಗೆಂದು ಕೇಳಬಹುದು : ನಮ್ಮ ಕನಸಿನಲ್ಲಿ ನಮಗೆ ಎಚ್ಚರದ ಪ್ರಪಂಚವು ಕಾಣಿಸುವದಿಲ್ಲ ವೆಂಬುದು ಸರಿಯೆ ; ಆದರೆ ಮಿಕ್ಕವರಿಗೆ ಯಾರಿಗೂ ಅದು ಅನುಭವಗೋಚರ ವಾಗುತ್ತಿರುವದಿಲ್ಲವೆ ? ಈ ಶಂಕೆಯೂ ಸರಿಯಲ್ಲ. ಏಕೆಂದರೆ ಕನಸನ್ನು ನಾವು ಬಿಟ್ಟುಬಂದಾಗ 'ಕನಸಿನಲ್ಲಿದ್ದ ಅನೇಕ ಜನರೊಳಗೆ ಯಾವನಾದರೊಬ್ಬನು ಈಗ

ಅದನ್ನು ಕಾಣುತ್ತಿರಬಹುದು' ಎಂದೇನೂ ನಾವು ಯಾರೂ ಶಂಕಿಸುವದಿಲ್ಲ. ಹೀಗಿದ್ದರೂ ಎಚ್ಚರದ ಪ್ರಪಂಚದ ವಿಷಯಕ್ಕೆ ಮಾತ್ರ ಹಾಗೆಂದು ಏತಕ್ಕೆ ಶಂಕಿಸಬೇಕು ? ಕನಸಿನ ಪ್ರಪಂಚವೆಲ್ಲವೂ - ಅದರಲ್ಲಿ ತೋರುವ ಜನರು, ಪ್ರಾಣಿಗಳು ಮುಂತಾದವುಗಳ ಸಹಿತವಾಗಿ - ಕನಸಿಗೇ ಗಂಟುಬಿದ್ದಿರುತ್ತದೆ ; ಕನಸು ಹೋದಬಳಿಕ ಅದು ಎಲ್ಲಿಯೂ ಇರುವದೇ ಇಲ್ಲ - ಎಂದು ನಾವು ಗಟ್ಟಿಯಾಗಿ ನಂಬಿರುವಂತೆಯೇ, ಎಚ್ಚರದ ಪ್ರಪಂಚವು ಎಚ್ಚರಕ್ಕೇ ಗಂಟುಬಿದ್ದಿರುತ್ತದೆ, ಅದು ಕನಸಿನಲ್ಲಿ ಎಲ್ಲಿಯೂ ಇರುವದೇ ಇಲ್ಲ - ಎನ್ನುವದೇ ಯುಕ್ತ.

ಎಚ್ಚರಕನಸುಗಳೆರಡೂ ಆಯಾ ಅವಸ್ಥೆಯ ದೃಷ್ಟಿಯಿಂದ ನೋಡಿದಾಗ, ಯಾವ ತಾರತಮ್ಯವೂ ಇಲ್ಲದೆ ಒಂದೇ ಬಗೆಯ ಅವಸ್ಥೆಗಳಾಗಿ ಕಾಣುತ್ತಿರುವವು. ಅವುಗಳಲ್ಲಿ ಒಂದೊಂದು ನಮಗೆ ಆಗ್ಗೆ ಎಚ್ಚರವೆಂದೇ ಕಾಣುತ್ತಿರುತ್ತದೆ. ಕಾಲ, ದೇಶ, ನಿಮಿತ್ತ - ಇವುಗಳಿಗೆ ಅನುಸಾರವಾಗಿ ಘಟನೆಗಳು ಆಗುತ್ತಿರುವೆಂದೇ ನಮ್ಮ ಆಗಿನ ಭಾವನೆ. ಇದು ಕಾರ್ಯ ಇದು ಕಾರಣ, ನಾನು ಒಡೆಯನು ಇದು ನನ್ನದು, ನಾನುಶಿಷ್ಯನು ಇವನು ಗುರು, ನಾನು ತಂದೆ ಇವನು ಮಗನು, ಇವನು ಅಣ್ಣ ಇವನು ತಮ್ಮ, ಇವಳು ತಾಯಿ ಇವಳು ಮಗಳು, ಇವನು ಮಾವ ಇವನು ಅಳಿಯ, ಇವನು ಕಳ್ಳ ಇವನು ಪ್ರಮಾಣಿಕ, ಇವನು ವಿಷಯಿ ಇವನು ವಿರಕ್ತ, ಇವನು ಬ್ರಾಹ್ಮಣನು ಇವನು ಚಾಣ್ಡಾಲನು, ಇವನು ಬ್ರಹ್ಮಚಾರಿ ಇವನು ಗೃಹಸ್ಥ, ಇವನು ವಾನಪ್ರಸ್ಥ ಇವನು ಯತಿ- ಎಂದು ಬಗೆಬಗೆಯಾದ ಭೇದವೂ ಸಂಬಂಧವೂ ಉಳ್ಳ ಜನರೂ ಇದು ಬೆಟ್ಟ, ಇದು ಸಮುದ್ರ, ಇದು ನದಿ, ಇದು ನೆಲ, ಇದು ಹಡಗು, ಇದು ವಿಮಾನ - ಎಂದು ವಸ್ತುಗಳೂ ಇದು ಹುಲಿ, ಇದು ಕರಡಿ, ಇದು ಎಮ್ಮೆ, ಇದು ಎತ್ತು - ಎಂದು ಮುಂತಾಗಿ ಪ್ರಾಣಿಗಳೂ ಬಗೆಬಗೆಯಿಂದ ಸಲಕ್ಷಣ ವಾಗಿಯೂ ವಿಲಕ್ಷಣವಾಗಿಯೂ ಕಾಣುತ್ತಿರುವವು. ಹೀಗಿದ್ದರೂ ಒಂದು ಅವಸ್ಥೆಯು ಹೋಗಿ ಮತ್ತೊಂದು ಅವಸ್ಥೆ ತಲೆದೋರಿತೆಂದರೆ ಹಿಂದಿನ ಅವಸ್ಥೆಯೂ ಅದರಲ್ಲಿ ಕಾಣಿಸಿಕೊಂಡ ದೃಶ್ಯಗಳೂ ಹೇಳಹೆಸರಿಲ್ಲದಂತೆ ಒರಸಿ ಹೋಗಿಬಿಡುವವು. ಯಾವದಾದರೊಂದು ಕಾಗದದ ಮೇಲೆ ಚಿತ್ರವನ್ನು ಬರೆದು ಅದನ್ನು ಅಳಿಸಿಹಾಕಿದಮೇಲೂ ಆ ಚಿತ್ರದ ಕಲೆಯು ಒಂದಿಷ್ಟು ಉಳಿದೇ ಇರುತ್ತದೆ. ಪಾತ್ರೆಗಳಲ್ಲಿ ಹಾಕಿದ್ದ ಇಂಗು, ಬೆಳ್ಳುಳ್ಳಿ - ಮುಂತಾದ ವಸ್ತುಗಳು ಪಾತ್ರೆಯನ್ನು ಉಜ್ಜಿದಮೇಲೂ ಒಂದಿಷ್ಟು ವಾಸನೆಯು ಉಳಿದುಕೊಂಡಿರುತ್ತದೆ. ಆದರೆ ನಮ್ಮ ಸ್ವರೂಪದಲ್ಲಿಯೇ ನಮ್ಮ ಆತ್ಮನನ್ನು ಆಶ್ರಯಿಸಿಕೊಂಡೇ ತೋರಿಬರುತ್ತಿದ್ದ ಎಚ್ಚರದ ಅಥವಾ ಕನಸಿನ ಪ್ರಮಾತೃಪ್ರಮಾಣಪ್ರಮೇಯಪ್ರಮಿತಿಗಳು- ಅರಿ ಯುವವನು, ಅರಿಯುವದಕ್ಕೆ ಸಾಧನವಾಗಿರುವ ಜ್ಞಾನಸಾಧನ, ಅರಿಯಲ್ಪಡ

ಬೇಕಾಗಿರುವ ವಸ್ತು, ಕೊನೆಗೆ ಉಂಟಾದ ಅರಿವೆಂಬ ಫಲ - ಇವುಗಳೊಳಗೆ ಯಾವದೊಂದರ ಗಂಧವೂ ಆತ್ಮನಿಗೆ ಅಂಟಿಕೊಂಡೇ ಇರುವದಿಲ್ಲವಲ್ಲ! ಎಂಥ ಮಾಯೆಯಿದು!

ನಮ್ಮ ಆತ್ಮನಲ್ಲಿ ಈ ಯಾವ ಸ್ವರೂಪವಾಗಲಿ ಧರ್ಮವಾಗಲಿ ಇರುವದಿಲ್ಲ; ನಾವು ಅರಿಯುವವರಲ್ಲ , ಮಾಡುವವರಲ್ಲ, ಅನುಭವಿಸುವವರೂ ಅಲ್ಲ. ಇಲ್ಲಿ ನಮಗೆ ತೋರುವ ಮನುಷ್ಯರಿಗೂ ಪ್ರಾಣಿಗಳಿಗೂ ವಸ್ತುಗಳಿಗೂ ಇರುವ ಕಾರ್ಯಕಾರಣ, ಸ್ವಸ್ವಾಮಿಭಾವ, ಪಿತಾಪುತ್ರತ್ವ, ಶಿಷ್ಯಾಚಾರ್ಯತ್ವ - ಮುಂತಾದ ಯಾವದೊಂದರ ಸೋಂಕೂ ನಮ್ಮ ಆತ್ಮನಿಗೆ ಇರುವದಿಲ್ಲ. ಆದರೂ ಆಯಾ ಅವಸ್ಥೆಯ ಕಾಲಕ್ಕೆ ನಾವು ನಿಜವಾಗಿಯೇ ಆಯಾ ಮನುಷ್ಯರಿಗೂ ಪ್ರಾಣಿಗಳಿಗೂ ವಸ್ತುವಿಗೂ ಆಯಾ ಸಂಬಂಧದಿಂದ ಸೇರಿಕೊಂಡಿರುವವೆಂದೇ, ಆಯಾ ದೃಶ್ಯಗಳಿಂದ ನಮಗೆ ಸುಖದುಃಖಾದಿಗಳಾಗುವವೆಂದೇ, ಆದ್ದರಿಂದ ಅವುಗಳನ್ನು ಪಡೆದುಕೊಳ್ಳಬೇಕು ಅಥವಾ ದೂರವಾಗಿರಿಸಬೇಕು ಎಂದೇ ಗಟ್ಟಿಯಾಗಿ ನಂಬಿರುವೆವು. ಇದೆಂಥ ಮಾಯೆ!

ನಿಜ. ಇದೆಲ್ಲ ಮಾಯೆಯೇ ; ಹೀಗೆಂದು ತಿಳಿಸಿಕೊಡುವದಕ್ಕೆ ನಮಗೆ ಮತ್ತೊಂದು ಅವಸ್ಥೆಯ ಅನುಭವವೂ ಇದೆ . ಅದೇ **ಸುಷುಪ್ತಿ** ಅಥವಾ ತನಿನಿದ್ರೆ. ಆ ಅವಸ್ಥೆಯಲ್ಲಿ ಯಾವದೊಂದು ದೃಶ್ಯದ ಅರಿವೂ ನನ್ನಲ್ಲಿರುವದಿಲ್ಲ, ನಮ್ಮ ಅರಿವೂ ನಮಗಿರುವದಿಲ್ಲ ನಮಲ್ಲಿ ಕರ್ತೃತ್ವವಾಗಲಿ ಭೋಕ್ತೃತ್ವವಾಗಲಿ ಇರುವದೇ ಇಲ್ಲ. ಆ ಅವಸ್ಥೆಯನ್ನು ಶ್ರುತಿಯು ಹೀಗೆಂದು ಬಣ್ಣಿಸುತ್ತಿರುವದು :

**ಅತ್ರ ಪಿತಾಽಪಿತಾ ಭವತಿ ಮಾತಾಽಮಾತಾ ಲೋಕಾ ಅಲೋಕಾ ದೇವಾ ಅದೇವಾ ವೇದಾ ಅವೇದಾಃ । ಅತ್ರ ಸ್ತೇನೋಽಸ್ತೇನೋ ಭವತಿ ಭ್ರೂಣಹಾಽಭ್ರೂಣಹಾ ಚಾಣ್ಡಾಲೋಽಚಾಣ್ಡಾಲೋ ಪೌಲ್ಕಸೋಽಪೌಲ್ಕಸಃ ಶ್ರವಣೋಽಶ್ರಮಣ-ಸ್ತಾಪಸೋಽತಾಪಸೋಽನನ್ವಾಗತಂ ಪುಣ್ಯೇನಾಽನನ್ವಾಗತಂ ಪಾಪೇನ ತೀರ್ಣೋ ಹಿ ತದಾ ಸರ್ವಾಞ್ಛೋಕಾನ್ ಹೃದಯಸ್ಯ ಭವತಿ ।- ಬೃ. ೪-೩-೨೨.**

ಗಾಢನಿದ್ರೆಯಲ್ಲಿ ನಾವುಗಳೆಲ್ಲರೂ ಪರಮಾತ್ಮನಲ್ಲಿ ಒಂದಾಗಿಬಿಟ್ಟಿರುವೆವು. ಅಲ್ಲಿ ತಂದೆ ತಂದೆಯಾಗಿ ಇರುವದಿಲ್ಲ ; ಏಕೆಂದರೆ ಆಗ ಅವನಿಗೆ ''ಇವನು ನನ್ನ ಮಗನು '' ಎಂಬ ಅರಿವಾಗಲಿ, ಆ ಅರಿವಿಗೆ ವಿಷಯವಾಗಿರುವ ಮಗನಾಗಲಿ ಇರುವದಿಲ್ಲ ; ಯಾವ ಕರ್ಮದಿಂದ ಇವನು ಎಚ್ಚರದಲ್ಲಿ ತಂದೆಯೆನಿಸಿದ್ದನೋ ಆ ಕರ್ಮವೂ ಆಗ ಇರುವದಿಲ್ಲ. ಇದರಂತೆ ಮಗನೂ ಮಗನೆನಿಸಿರುವದಿಲ್ಲ. ಪಿತಾಪುತ್ರರುಗಳಿಗೆ ಸಂಬಂಧಕ್ಕೆ ಕಾರಣವಾಗಿರುವದು ಕರ್ಮವಲ್ಲವೆ ? ಆಗ ಇವನು ಅದನ್ನು ದಾಟಿರುತ್ತಾನೆ. ಇದರಂತೆ ತಾಯಿ ತಾಯಿಯಾಗಿರುವದಿಲ್ಲ.

ಏಕೆಂದರೆ ತಾಯಿತನಕ್ಕೆ ಬೇಕಾದ ಕರ್ಮವೂ ಆಗ ಇರುವದಿಲ್ಲ. ಕರ್ಮದಿಂದ ಜಯಿಸಬೇಕಾದ ಲೋಕಗಳೂ ಆಗ ಇರುವದಿಲ್ಲ ; ಲೋಕಗಳಿಗೂ ಅವುಗಳನ್ನು ಗೆದ್ದುಕೊಂಡವನಿಗೂ ಇರಬೇಕಾದ ಕರ್ಮವೂ ಆಗ ಇರುವುದಿಲ್ಲ. ಇದರಂತೆ ಯಾರಿಗಾಗಿ ಹೋಮಾದಿಕರ್ಮಗಳನ್ನು ಮಾಡುವರೋ ಅಂಥ ದೇವತೆಗಳೂ ಆಗ ಇರುವದಿಲ್ಲ. ಹೀಗೆಯೇ ಇದು ಸಾಧ್ಯವಾದ ಲೋಕ, ಇದು ಸಾಧನವಾದ ಕರ್ಮ ಅಥವಾ ಉಪಾಸನೆ - ಎಂದು ತಿಳಿಸಿಕೊಡುವ ವೇದಗಳೂ ಆಗ ಇರುವದಿಲ್ಲ. ಮಂತ್ರಗಳನ್ನುಪಯೋಗಿಸಿಯಲ್ಲವೆ, ಕರ್ಮವನ್ನು ಮಾಡುವದು ? ಆಗ ಕರ್ಮವೂ ಇಲ್ಲ, ಅವಕ್ಕೆ ಅಂಗವಾಗಿರುವ ವೇದಮಂತ್ರಗಳೂ ಇಲ್ಲ. ಇವೆಲ್ಲ ಪುಣ್ಯಕರ್ಮಗಳ ಸಂಬಂಧವನ್ನು ಕುರಿತು ಹೇಳಿದ ಮಾತಾಯಿತು. ಪುಣ್ಯಕರ್ಮವನ್ನು ಮಾಡಿದವನಿಗೆ ಈ ಅವಸ್ಥೆಯಲ್ಲಿ ಯಾವ ಕರ್ಮಾಂಗಪದಾರ್ಥವೂ ಇರುವದಿಲ್ಲವೆಂದು ತಿಳಿಸಿದ್ದಾಯಿತು. ಹೀಗೆಯೇ ಪಾಪಕರ್ಮವಾಗಲಿ ಅದಕ್ಕೆ ಅಂಗವಾಗಿರುವ ಪದಾರ್ಥಗಳಾಗಲಿ ಅಲ್ಲಿ ಇರುವದಿಲ್ಲ. ಸ್ವರ್ಣಾಪಹಾರಿಯಾದ ಕಳ್ಳನು ಕೂಡ ಅಲ್ಲಿ ಕಳ್ಳನಾಗಿರುವದಿಲ್ಲ. ಭ್ರೂಣಹತ್ಯೆಯನ್ನು ಮಾಡಿದವನಿಗೂ ಅಲ್ಲಿ ಅದರ ಸಂಬಂಧವಿರುವದಿಲ್ಲ. ಪುಲ್ಕಸನು - ಎಂದರೆ ಶೂದ್ರನಿಂದ ಕ್ಷತ್ರಿಯಳಲ್ಲಿ ಹುಟ್ಟಿದ ಜಾತಿಯವನು ; ಅವನೂ- ಆಗ ಪುಲ್ಕಸನಾಗಿ ಉಳಿದಿರುವದಿಲ್ಲ. ಸಂನ್ಯಾಸಿಯು ಸಂನ್ಯಾಸಿಯಾಗಿರುವದಿಲ್ಲ, ತಾಪಸನು ತಾಪಸನಾಗಿರುವದಿಲ್ಲ. ಹೆಚ್ಚು ಹೇಳಿದ್ದರಿಂದೇನು ? ಪುಣ್ಯವೂ ಅವನ ಹಿಂದೆ ಬಂದು ಉಳಿದುಕೊಂಡಿರುವದಿಲ್ಲ. ಪಾಪವೂ ಬೆನ್ನಟ್ಟಿಕೊಂಡಿರುವದಿಲ್ಲ, ಹೃದಯದ ಕಾಮಗಳನ್ನೆಲ್ಲ ದಾಟಿರುತ್ತಾನೆ - ಎಂದು ಶ್ರುತಿಯಲ್ಲಿ ವಿವರಿಸಿದೆ.

ನಮಗೆ ಕಾಣುತ್ತಿರುವ ಪ್ರಪಂಚವು ಬರಿಯ ಪಿತಾಪುತ್ರಾದಿ ಸಂಬಂಧ ಮಾತ್ರದಿಂದಲೇ ಕೂಡಿಕೊಂಡಿರುವದಿಲ್ಲ. 'ಇದು ಕಾರಣ, ಇದು ಕಾರ್ಯ ; ಕಾರಣವು ಗೊತ್ತಾಗಿ ಕಾರ್ಯದ ಹಿಂದಿನ ಕಾಲದಲ್ಲಿಯೇ ಇರುತ್ತದೆ. ಕಾರಣ ವಿದ್ದರೆ ಕಾರ್ಯವುಂಟಾಗುತ್ತದೆ ; ಇಲ್ಲದಿದ್ದರೆ ಇಲ್ಲ'- ಎಂದಿಂತು ಕಾರ್ಯಕಾರಣ ಸಂಬಂಧವೂ ಇಲ್ಲಿ ಗೊತ್ತಾಗಿ ಕಾಣಿಸುತ್ತಿರುತ್ತದೆ. ಇದರಂತೆ 'ಇದು ನನ್ನದು, ನಾನು ಇದರ ಒಡೆಯನು ' ಎಂದು ಸ್ವಸ್ವಾಮಿಸಂಬಂಧದಿಂದಲೂ ಕೂಡಿಕೊಂಡಿರುತ್ತದೆ. ಹೀಗೆಯೇ ಈ ಪ್ರಪಂಚವು ಇವನು ಶಿಷ್ಯನು, ಇವನು ಆಚಾರ್ಯನು - ಎಂದು ಶಿಷ್ಯಾಚಾರ್ಯಸಂಬಂಧದಿಂದಲೂ ಕೂಡಿಕೊಂಡಿರುತ್ತದೆ. ಹೀಗೆ ಒಂದಕ್ಕೊಂದು ಗೊತ್ತಾದ ಸಂಬಂಧದಿಂದ ಸೇರಿಕೊಂಡೇ ಇರುವದರಿಂದ 'ಈ ದೃಶ್ಯಗಳೆಲ್ಲವೂ ಸತ್ಯವೇ' - ಎಂಬ ಭ್ರಾಂತಿಯು ನಮಗೆ ಆಗುತ್ತಿರುವದು. ಆದರೆ ಇಂಥ ಪ್ರಪಂಚವು ತನ್ನ ಸುಳಿವೂ ಇಲ್ಲದಂತೆ ಗಾಢನಿದ್ರೆಯಲ್ಲಿ ಎಲ್ಲಿ ಅಡಗಿತ್ತು ?

ನಾವು ನಿದ್ರಿಸುತ್ತಿರುವಾಗ ಈ ಪ್ರಪಂಚವು ನಮ್ಮ ಹೊರಗೆ ಹಾಗೇ ಇದ್ದು ಕೊಂಡಿರುತ್ತದೆ ಎಂಬ ಬಯಲಭ್ರಾಂತಿಯೊಂದು ನಮಗೆ ಅಂಟಿಕೊಂಡು ಬಿಟ್ಟಿರುತ್ತದೆ. ಆದರೆ ಇದೂ ತಪ್ಪುತಿಳಿವಳಿಕೆಯೇ ಎಂದು ಆಗಲೇ ತೋರಿಸಿಕೊಟ್ಟದ್ದಾಗಿರುತ್ತದೆ. ನಾವು ನೋಡುವ ಕನಸಾಗಲಿ ಆ ಕನಸಿನಲ್ಲಿ ಕಾಣುವ ಪ್ರಪಂಚವಾಗಲಿ, ಎಚ್ಚರದಲ್ಲಿ ಅಥವಾ ಗಾಢನಿದ್ರಾವಸ್ಥೆಯಲ್ಲಿ ನಮ್ಮ ಹೊರಗೆ ಮತ್ತೆಲ್ಲಿಯಾದರೂ ಇದ್ದೀತೆಂದು ನಾವು ಯಾರೂ ಶಂಕಿಸುವದಿಲ್ಲವಲ್ಲವೆ ? ಆದರೂ ಆ ಕನಸಿನಲ್ಲಿ ಪ್ರಪಂಚವೂ ಈ ಎಚ್ಚರದ ಪ್ರಪಂಚದಂತೆಯೇ ಕಾಣಿಸುತ್ತಿರುತ್ತದೆ. ಆಗ್ಗೆ ಸತ್ಯವೆಂದೇ ತೋರುತ್ತಿರುತ್ತದೆ. ಅದರಲ್ಲಿಯೂ ಎಚ್ಚರದ ಪ್ರಪಂಚದ ದೃಶ್ಯಗಳಿಗೆ ಒಂದಕ್ಕೊಂದಕ್ಕೆ ಕಾಣುವ ಸಂಬಂಧಗಳೇ ಇದ್ದುಕೊಂಡಿರುವಂತೆ ಕಾಣುತ್ತಿರುತ್ತದೆ. ಅಲ್ಲವೆ ? ಹಾಗಿದ್ದರೂ ಕನಸಿನ ಅವಸ್ಥೆಯು ಮುಗಿದೊಡನೆ ಅವುಗಳು ಯಾವುವೂ ಎಲ್ಲಿಯೂ ಉಳಿದಿರುವದಿಲ್ಲವೆಂಬುದು ನಿಶ್ಚಿತ. ಆದ್ದರಿಂದ ಎಚ್ಚರ, ಕನಸು - ಈ ಅವಸ್ಥೆಗಳಲ್ಲಿ ತೋರುವ ಪ್ರಪಂಚವೆಲ್ಲವೂ ಮಾಯೆಯೇ, ಹುಸಿತೋರಿಕೆಯೇ. ಮಾಯಾವಿಯು ಮಾಯೆಯಿಂದ ಮಾಡಿ ತೋರಿಸುವ ಪದಾರ್ಥಗಳಿಗೂ ಇದಕ್ಕೂ ಯಾವ ಹೆಚ್ಚು ಕಡಿಮೆಯೂ ಇರುವದಿಲ್ಲ. ಅರ್ಥಕ್ರಿಯೆಯನ್ನುಂಟುಮಾಡಿದ ಮಾತ್ರದಿಂದ ಇದನ್ನು ಸತ್ಯವೆಂದು ಹೇಳಲಾಗದು - ಎಂದು ನಿಶ್ಚಿತವಾಯಿತು.

ನಮ್ಮ ಸ್ವರೂಪವು ಗಾಢನಿದ್ರೆಯಲ್ಲಿ ಹೇಗಿದೆಯೋ ಈಗಲೂ ಹಾಗೆಯೇ ಇದೆ. ಎಚ್ಚರ, ಕನಸು, ಗಾಢನಿದ್ರೆ- ಈ ಮೂರು ಅವಸ್ಥೆಗಳನ್ನೂ ಬೆಳಗುತ್ತ, ನಾನು ನನ್ನ ಚೈತನ್ಯಸ್ವರೂಪದಿಂದಲೇ ಇರುತ್ತೇನೆ. ಎಚ್ಚರಕನಸುಗಳಲ್ಲಿ ಬಗೆಬಗೆಯ ದೃಶ್ಯಗಳನ್ನು ಕಾಣುವ ಮಾಯಾಸ್ವರೂಪವೊಂದು ನಮಗೆ ಆಗ್ಗೆ ತೋರಬಹುದು. ಆದರೆ ಅದು ನಿಜವಾಗಿ ನನ್ನ ಸ್ವರೂಪವಲ್ಲ. ನಾನು ಯಾವಾಗಲೂ ಈ ಮೂರು ಅವಸ್ಥೆಗಳನ್ನೂ ಬೆಳಗುತ್ತಿರುವ ಸಾಕ್ಷಿಚೈತನ್ಯಸ್ವರೂಪನು, ಅದ್ವಿತೀಯನು, ನಿರ್ಗುಣನು - ಎಂಬ ಅರಿವನ್ನು ಸದ್ಗುರುವಿನ ಬೋಧೆಯಿಂದ ಪಡೆದುಕೊಳ್ಳಬೇಕು. ಅಂಥ ಗುರುವಿನ ಉಪದೇಶವನ್ನು ಕರುಣಿಸಲೆಂದು ಪರಮೇಶ್ವರನನ್ನು ನಿರಂತರವೂ ಪ್ರಾರ್ಥಿಸುತ್ತಿರಬೇಕು.

ಃಃಃಃಃಃಃಃಃ

# ೯. ಪರಮೇಶ್ವರನ ಸರ್ವಾತ್ಮಕತ್ವ

**ಭೂರಮ್ಭಾಂಸ್ಯನಲೋಽನಿಲೋಽಮ್ಬರಮಹರ್ನಾಥೋ ಹಿಮಾಂಶುಃ ಪುಮಾನ್**
**ಇತ್ಯಾಭಾತಿ ಚರಾಚರಾತ್ಮಕಮಿದಂ ಯಸ್ಯೈವ ಮೂರ್ತ್ಯಷ್ಟಕಮ್ ।**
**ನಾನ್ಯತ್ಕಿಞ್ಚನ ವಿದ್ಯತೇ ವಿಮೃಶತಾಂ ಯಸ್ಮಾತ್ಪರಸ್ಮಾದ್ವಿಭೋ -**
**ಸ್ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥**

ಈವರೆಗೆ ಪ್ರತಿಪಾದಿಸಿರುವದರ ಸಾರವಿಷ್ಟು : ಪರಮೇಶ್ವರನು ನಮ್ಮಗಳೆಲ್ಲರ ಆತ್ಮನೇ ಆಗಿರುತ್ತಾನೆ. ಪರಮಾತ್ಮನಲ್ಲಿ ಅವಿದ್ಯಾಕಲ್ಪಿತವಾಗಿರುವ ನಾಮರೂಪ ಮಾಯೆಯ ವಿಕಾರವೇ ಈ ಜಗತ್ತು. ವ್ಯಾಕೃತ (ಬಿಡಿಬಿಡಿಯಾಗಿ ತೋರುವ) ನಾಮರೂಪಪ್ರಪಂಚ, ಅವ್ಯಾಕೃತ (ಬೀಜರೂಪವಾಗಿರುವ) ನಾಮರೂಪಪ್ರಪಂಚ ಎಂಬೀ ಎರಡು ಉಪಾಧಿಗಳಿಂದೊಡಗೂಡಿದ ಪರಮಾತ್ಮನು - ಮಾಯಾವಿಯು ಅಥವಾ ಒಬ್ಬ ಮಹಾಯೋಗಿಯು ತಾನೊಬ್ಬನೇ ಇದ್ದರೂ ಬಗೆಬಗೆಯ ಚೇತನಾ ಚೇತನಪದಾರ್ಥಗಳಾಗಿ ತೋರಿಕೊಳ್ಳುವಂತೆ- ಗೊತ್ತಾದ ದೇಶಕಾಲನಿಮಿತ್ತಗಳುಳ್ಳ ಕ್ರಿಯಾಕಾರಕಫಲರೂಪವಾಗಿ ತೋರಿಸಿಕೊಳ್ಳುತ್ತಿರುತ್ತಾನೆ. ಆತನ ಚೈತನ್ಯದ ಪ್ರಕಾಶದಿಂದಲೇ ಜಗತ್ತಿನಲ್ಲಿರುವ ಮಾಯಿಕಪದಾರ್ಥಗಳೆಲ್ಲ ತೋರಿಕೊಳ್ಳುತ್ತಿರುವವು. ಆತನೇ ಸಾಧಕರಿಗೆ ಗುರುರೂಪದಿಂದ ಬಂದು ನೀನೇ ಈ ಜಗತ್ತಿಗೆ ಕಾರಣವಾಗಿರುವ ಸದ್ಬ್ರಹ್ಮವು ಎಂದು ಬೋಧಿಸುತ್ತಾನೆ. ಆ ಬೋಧೆಯಿಂದ ತಮ್ಮ ಪರಮಾರ್ಥಸ್ವರೂಪವನ್ನು ನೇರಾಗಿ ಅನುಭವಕ್ಕೆ ತಂದುಕೊಂಡವರು ಮತ್ತೆ ಸಂಸಾರದಲ್ಲಿ ಜೀವರಾಗಿ ಹುಟ್ಟುವದಿಲ್ಲ. ಜೀವರು 'ಇಗೊ, ಇದನ್ನು ನಾನು ಇಂಥ ಕರಣದಿಂದ ಅರಿತುಕೊಂಡೆನು' ಎಂದು ಭಾವಿಸುತ್ತಿರುವದಕ್ಕೆ ಆ ಪರಮಾತ್ಮನ ಚೈತನ್ಯ ಪ್ರಕಾಶವೇ ಕಾರಣ. ಆತನ ಬೆಳಕಿನ ಸಹಾಯವಿಲ್ಲದೆ ಪ್ರಮಾತೃಪ್ರಮಾಣಪ್ರಮೇಯಗಳಲ್ಲಿ ಯಾವದೊಂದೂ ಬೆಳಗಲಾರದು. ಅವಿವೇಕಿಗಳಾದವರು ದೇಹವನ್ನು, ಪ್ರಾಣವನ್ನು, ಇಂದ್ರಿಯಗಳನ್ನು ಅಥವಾ ಬುದ್ಧಿಯನ್ನು ಅಥವಾ ಶೂನ್ಯವನ್ನೇ, ತಮ್ಮ ಆತ್ಮನೆಂದು ಅರಿತುಕೊಂಡಿರುವರು ; ತಮ್ಮ ಸಿದ್ಧಾಂತವೇ ಸರಿಯೆಂದು ಮತ್ತೊಬ್ಬರೊಡನೆ ವಾದ ಮಾಡುತ್ತಲೂ ಇರುವರು, ಇದೆಲ್ಲವೂ ಪರಮಾತ್ಮನ ಮಾಯಾಶಕ್ತಿಯ ವಿಲಾಸವೇ ; ಯಾವಾಗ ಆತನ ಅನುಗ್ರಹವಾಗುವದೋ, ಆಗ ಈ ಮಾಯಾವಿಲಾಸದ ಉಪಸಂಹಾರವಾಗಿ, ಪರಮಾರ್ಥವು ಇದ್ದದ್ದು ಇದ್ದಂತೆ ಮನದಟ್ಟಾಗುವದು.

ಈ ಪರಮಾತ್ಮಸ್ವರೂಪವು ಯಾವಾಗಲೂ ಸ್ವಯಂಜ್ಯೋತಿಯೇ ಆಗಿರುತ್ತಿದ್ದರೂ ಸುಷುಪ್ತಿಯಲ್ಲಿ ಕರಣಗಳ ಉಪಸಂಹಾರವಾಗಿರುವಾಗ - ಸೂರ್ಯನು

ರಾಹುಗ್ರಸ್ತನಾಗಿದಾನೆ, ಎಂದು ಮೂಢರಿಗೆ ತೋರುವಂತೆ- ತನಿನಿದ್ರೆಯಲ್ಲಿ ನಮಗೆ ಏತರ ಅರಿವೂ ಆಗಲಿಲ್ಲ- ಎಂಬ ಭಾವವನ್ನು ಅವಿವೇಕಿಗಳಿಗೆ ಉಂಟುಮಾಡುತ್ತಿರುವದು. ಆದರೆ ನಿಜವಾಗಿ ಸೂರ್ಯನನ್ನು ರಾಹುವು ಎಂದೆಂದಿಗೂ ಹೇಗೆ ಮುಟ್ಟಿಯೇ ಇರುವದಿಲ್ಲವೋ, ಹಾಗೆ ನಮ್ಮ ಆತ್ಮಸ್ವರೂಪಚೈತನ್ಯಕ್ಕೆ ಯಾವಾಗಲೂ ನಿದ್ರೆಯಿಲ್ಲ, ಎಚ್ಚರವೂ ಇರುವದಿಲ್ಲ. ''ನಾನು ಆಗ ಏನನ್ನೂ ಅರಿಯಲಿಲ್ಲ'' - ಎಂಬುದು ಯಾವ ಅನುಭವಕ್ಕೆ ಗೋಚರವಾಗುವದೋ ಆ ಅನುಭವವೇ ನಮ್ಮ ಪರಮಾರ್ಥವಾದ ಆತ್ಮಸ್ವರೂಪವು. ಬಾಲ್ಯ, ಯೌವ್ವನ, ಕೌಮಾರ, ವಾರ್ಧಕ - ಎಂಬ ನಾಲ್ಕು ಅವಸ್ಥೆಗಳನ್ನು ಒಂದರಹಿಂದೊಂದನ್ನು ನಾವು ಪಡೆದೆವೆಂದು ಜನರು ಅರಿತುಕೊಳ್ಳುತ್ತಿರುವಾಗಲೂ ಅವರ ಆತ್ಮದಲ್ಲಿ ಯಾವ ಮಾರ್ಪಾಡೂ ಆಗಿರುವದೇ ಇಲ್ಲ. ಶರೀರದಲ್ಲಿರುವ ಬಾಲ್ಯಾದಿಧರ್ಮಗಳನ್ನೇ ಅವರು ಎಲ್ಲವನ್ನೂ ಯಾವಾಗಲೂ ಬೆಳಗುತ್ತಿರುವ ಕೂಟಸ್ಥಚೈತನ್ಯದಲ್ಲಿ ಹುಟ್ಟುಹಾಕಿಕೊಳ್ಳುತ್ತಿರುತ್ತಾರೆ. ಇದರಂತೆಯೇ 'ಎಚ್ಚರವಾಗಿದೇನೆ, ಕನಸು ಕಂಡಿದ್ದೆನು ಅಥವಾ ಗಾಢನಿದ್ರೆಯಲ್ಲಿದ್ದೆನು' ಎಂದು ಜನರು ವ್ಯವಹರಿಸುತ್ತಿರುವಾಗಲೂ - ಆ ಅವಸ್ಥೆಗಳು ಒಂದಿರುವಾಗ ಇನ್ನೆರಡೂ ಇಲ್ಲವೇ ಇಲ್ಲವಾದ್ದರಿಂದಲೂ, ಆತ್ಮಸ್ವರೂಪವು ಮಾತ್ರ ಈ ಎಲ್ಲಾ ಅವಸ್ಥೆಗಳಲ್ಲಿಯೂ ಹೊಂದಿಕೊಂಡೇ ಬಂದಿರುತ್ತದೆಯಾದ್ದರಿಂದಲೂ -ಆತ್ಮನ ಕೂಟಸ್ಥಚೈತನ್ಯಸ್ವರೂಪದಲ್ಲಿ ಯಾವ ಮಾರ್ಪಾಡೂ ಆಗಿರುವದಿಲ್ಲ. ಈ ವೃತ್ತಿಗಳೆಲ್ಲ ಮನಸ್ಸಿಗೇ ಸೇರಿರುತ್ತವೆಯಾದರೂ ವಿಷಯವಾದ ಮನಸ್ಸಿನ ಧರ್ಮಗಳನ್ನು ವಿಷಯಿಯಾದ ಚೈತನ್ಯದ ಮೇಲೆ ಹಾಕಿಕೊಂಡು ಜನರು ಭ್ರಾಂತರಾಗುತ್ತಿರುವರು. ಯಾರು ಪರಮೇಶ್ವರನನ್ನು ಎಡೆಬಿಡದೆ ಭಜಿಸುತ್ತಿರುವರೋ, ಅವರಮೇಲೆ ದಯೆಯಿಂದ ಆ ಭಗವಂತನು ಶ್ರೀಗುರುರೂಪದಿಂದ ತತ್ತ್ವೋಪದೇಶವನ್ನು ಮಾಡಿ ತನ್ನ ನಿಜವನ್ನು ಪ್ರಕಟಗೊಳಿಸಿಕೊಳ್ಳುವನು. ಎಚ್ಚರ, ಕನಸು- ಈ ಎರಡೂ ಅವಸ್ಥೆಗಳೂ ಆತ್ಮನಿಗಿಂತ ಬೇರೆಯಾಗಿರುವ ಆಧ್ಯಾತ್ಮಿಕ, ಆದಿಭೌತಿಕ, ಆಧಿದೈವಿಕ - ಎಂದು ವಿಭಕ್ತವಾಗಿರುವ ಪ್ರಪಂಚವನ್ನು ತೋರಿಸುವ ಅವಸ್ಥೆಗಳು. ಆ ಅವಸ್ಥೆಗಳಲ್ಲಿರುವ ದೃಶ್ಯಗಳಿಗೆ ಕಾರ್ಯಕಾರಣಭಾವ, ಸ್ವಸ್ವಾಮಿಭಾವ- ಮುಂತಾದ ನಿತ್ಯಸಂಬಂಧಗಳಿರುವಂತೆ ಜನರಿಗೆ ಕಾಣುತ್ತಿರುತ್ತದೆ. ಅವಿದ್ಯಾಕಲ್ಪಿತವಾದ ಮಾಯೆಯಲ್ಲಿಯೇ ಮನಸ್ಸಿಟ್ಟು, ಅದರಿಂದ ಮೋಹಿತರಾಗಿರುವದರಿಂದಲೇ ಹೀಗೆ ಜಗತ್ತು ಆತ್ಮನಿಗಿಂತ ಬೇರೆಯಾಗಿದೆ ಎಂದು ಮಾಯಾಭ್ರಾಂತಿಯಾಗುತ್ತಿರುವದು.

ಈಗ ಈ ಒಂಬತ್ತನೆಯ ಶ್ಲೋಕದ ಅಭಿಪ್ರಾಯವೇನೆಂಬುದನ್ನು ಒಳಹೊಕ್ಕು ನೋಡಬಹುದಾಗಿದೆ. ಹೀಗೆ ಎಚ್ಚರಕನಸುಗಳಲ್ಲಿರುವ ದೃಶ್ಯಗಳಿಗೆಲ್ಲ

ನಿಜವಾಗಿ ಪರಮೇಶ್ವರನೇ ಸಾರವಾಗಿರುತ್ತಾನಾದರೂ ಆ ಆತ್ಮನಲ್ಲಿ ಈ ಮಾಯಾದೃಶ್ಯಗಳ ಧರ್ಮಗಳನ್ನು ಹುಟ್ಟುಗಟ್ಟಿಕೊಳ್ಳುತ್ತಾ ಜನರು ನಾನು, ನನ್ನದು - ಎಂದು ವ್ಯವಹರಿಸುತ್ತಾ ಸಂಸಾರದಲ್ಲಿ ತೊಳಲುತ್ತಿರುವರು. ಅವರಿಗೆ ಹೊರಗಿನ ಪದಾರ್ಥಗಳೆಲ್ಲ ಬೇಕಾದವು ಅಥವಾ ಬೇಡವಾದವು- ಎಂದು ವಿಭಕ್ತವಾಗಿ ತೋರುತ್ತಿರುವವು. ಇದಕ್ಕೆ ಕಾರಣವೇನೆಂದರೆ, ಹೊರಕ್ಕೆ ತೋರಿಸಿಕೊಳ್ಳುತ್ತಿರುವ ಈ ಮಾಯೆಯೆಲ್ಲ ಸತ್ತ್ವ , ರಜಸ್ಸು, ತಮಸ್ಸು- ಎಂಬ ಮೂರು ಗುಣಗಳ ವಿಲಾಸವೇ ಆಗಿರುತ್ತದೆ. ಅದನ್ನು ನೋಡುತ್ತಿರುವವನ ಅಂತಃಕರಣದಲ್ಲಿಯೂ ಸತ್ತ್ವ, ರಜಸ್ಸು, ತಮಸ್ಸು- ಎಂಬ ಮೂರು ಗುಣಗಳಿಂದಾಗಿರುವ ವಿಕಾರಗಳ ವಾಸನೆಗಳೇ ತುಂಬಿತುಳುಕುತ್ತಿರುವವು. ಸತ್ತ್ವದಿಂದ ಜ್ಞಾನ - ರಜಸ್ಸಿನಿಂದ ಕಾಮಕರ್ಮಲೋಭಗಳು, ತಮಸ್ಸಿನಿಂದ ಮೋಹ- ಹೀಗೆ ಅಂತಃಕರಣದಲ್ಲಿ ವಿಕಾರಗಳು ಆಗುತ್ತಲೇ ಇರುವವು. ಆ ವಿಕಾರಗಳು ತಮಗೆ ಬೇಕಾದವು ಅಥವಾ ಬೇಡದವು - ಎಂದು ಅಭಿನಿವೇಶವಿದ್ದುಕೊಂಡಿರುವದರಿಂದಲೇ ಜನಗಳು ಇದು ನನಗೆ ಬೇಕಾದದ್ದು, ಇದು ಬೇಡವಾದದ್ದು- ಎನ್ನುತ್ತಾ ಬೇಕಾದದ್ದನ್ನು ಸಂಪಾದಿಸಿಕೊಳ್ಳುವದಕ್ಕೂ ಬೇಡವಾದದ್ದನ್ನು ತಪ್ಪಿಸಿಕೊಳ್ಳುವದಕ್ಕೂ ಪ್ರಯತ್ನಿಸುತ್ತಿರುವದು. ಇದೇ ಸಂಸಾರವು. ಆದರೆ ಪರಮಾತ್ಮನ ಸ್ವರೂಪವೇ ನಮ್ಮ ನಿಜವಾದ ಆತ್ಮನು. ಆ ಆತ್ಮನಲ್ಲಿ ಈ ಮೂರು ಗುಣಗಳಿಂದ ಯಾವ ವಿಕಾರವೂ ಎಂದಿಗೂ ಆಗುವಂತೆಯೇ ಇಲ್ಲ. ಈ ಗುಟ್ಟನ್ನು ತಿಳಿದುಕೊಂಡವರು ಈ ಮಾಯೆಗೆ ಸಿಕ್ಕಿಬಿದ್ದು ವ್ಯಥೆಪಡುವ ಕಾರಣವಿರುವದಿಲ್ಲ.

ಈ ಜ್ಞಾನವು ಜನರಿಗೆ ಉಂಟಾಗುವದಾದರೂ ಹೇಗೆ ? ಅದು ಉಂಟಾದ ಮೇಲಲ್ಲವೆ, ಮಾಯೆಯನ್ನು ದಾಟುವ ಮಾತು ? - ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರವೇನೆಂದರೆ : ನಿಜವಾಗಿ ಮಾಯೆ ಎಂಬುದು ಬೇರೆಯಾಗಿರುವದೇ ಇಲ್ಲ ಈ ಸಚರಾಚರಜಗತ್ತೆಲ್ಲವೂ ಆ ಪರಮಾತ್ಮನ ವಿಭೂತಿಯೇ. ಯಾರಿಗೆ ತಮ್ಮತಮ್ಮಶರೀರೇಂದ್ರಿಯಸಂಘಾತದಲ್ಲಿ ನಾನೆಂಬ ಬುದ್ಧಿಯೂ ಅದಕ್ಕೆ ಸೇರಿದ ಪತ್ನೀಪುತ್ರಾದಿಗಳಲ್ಲಿ ನನ್ನದು ಎಂಬ ಬುದ್ಧಿಯೂ ಬಲವಾಗಿದ್ದುಕೊಂಡಿರುವವೋ, ಅವರಿಗೆ ಮಾತ್ರವೇ ಈ ತ್ರಿಗುಣಾತ್ಮಕವಾದ ಮಾಯೆ ತಾನೇ ಸ್ವತಂತ್ರವಾಗಿರುವಂತೆ ಕಾಣಿಸಿಕೊಳ್ಳುತ್ತಿರುತ್ತದೆ. ಅವರಿಗೇ ಮಾಯಾಜಾಲಕ್ಕೆ ಸಿಕ್ಕಿಬಿದ್ದು ಸಂಕಟಪಡುವ ಸಂಸಾರದ ಬೇಗೆಯ ತಾಪವೂ ಕಾಣಿಸಿಕೊಳ್ಳುತ್ತಿರುವದು. ಈ ಮಾಯೆಯನ್ನು ದಾಟುವದಕ್ಕೆ ಮತ್ತೆ ಯಾವ ಹೆಚ್ಚಿನ ಪ್ರಯತ್ನವನ್ನೂ ಮಾಡಬೇಕಾದದ್ದಿಲ್ಲ. ಈವರೆಗೆ ಈ ಸ್ತೋತ್ರದಲ್ಲಿ ಹೇಳಿರುವ ವಿಷಯಗಳ ಮರ್ಮವನ್ನು ಗುರುಸೇವೆಯಿಂದ ತಿಳಿದುಕೊಂಡು, ಪರಮೇಶ್ವರನ

ಜ್ಞಾನವನ್ನು ಸಂಪಾದಿಸಿಕೊಂಡರೆ ಸಾಕು, ಸೂರ್ಯೋದಯವಾದ ಕೂಡಲೆ ಮಂಜಿನ ಕಾವಳವು ಕಣ್ಮರೆಯಾಗುವಂತೆ, ಅದು ಮಾಯವಾಗಿಬಿಡುತ್ತದೆ ; ಪರಮಾತ್ಮನೊಬ್ಬನೇ ಪರಮಾರ್ಥವಾಗಿ ಎಂದೆಂದಿಗೂ ಇರುವವನು - ಎಂಬ ನಿಜವಾದ ಜ್ಞಾನವು ಮನದಲ್ಲಿ ಮಿಂಚಿಬಿಡುತ್ತದೆ.

ಈ ಜ್ಞಾನವು ಬರುವದಕ್ಕೆ ನಿತ್ಯಾನಿತ್ಯವಿವೇಕ, ಇಹಪರಲೋಕಗಳಲ್ಲಿ ಸಿಕ್ಕಬಹುದಾದ ಫಲಗಳನ್ನು ಭೋಗಿಸುವ ಆಸೆಯನ್ನು ತೊರೆಯುವದು, ಶಮದಮಾದಿಗಳನ್ನು ಅಳವಡಿಸಿಕೊಳ್ಳುವದು, ನನಗೆ ಈ ಬಂಧನವು ಹೇಗಾದರೂ ಹೋಗಲೇಬೇಕೆಂಬ ಹೆಚ್ಚಿನ ಹಂಬಲು - ಈ ನಾಲ್ಕು **ಸಾಧನಸಂಪತ್ತು**ಗಳು ಮಾತ್ರ ಅತ್ಯವಶ್ಯ. ಈ ಸಾಧನೆಗಳಿಂದೊಡಗೂಡಿರುವ ಅಧಿಕಾರಿಯು ಸದ್ಗುರುವನ್ನು ಸೇರಿದರೆ ಆತನ ಉಪದೇಶದಿಂದ ಅವಶ್ಯವಾಗಿ ಜ್ಞಾನವು ಲಭಿಸುವದು. ಸದ್ಗುರುವೆಂದರೆ ಪರಮೇಶ್ವರನಿಗಿಂತ ಬೇರೆ ಎಂದು ತಿಳಿಯಬಾರದು. ಸಾಕ್ಷಾತ್ ದಕ್ಷಿಣಾಮೂರ್ತಿಯಾದ ಪರಶಿವನೇ ಆತನು - ಎಂಬ ಹೆಚ್ಚಿನ ಭಕ್ತಿಯೂ ಅತ್ಯವಶ್ಯ. ಹೀಗಾದರೆ ಆ ಪರಮೇಶ್ವರನ ದಯೆಯಿಂದಲೇ ಜ್ಞಾನವು ಲಭಿಸುತ್ತದೆ.

ಇಂಥ ಉತ್ತಮವಾದ ಸಾಧನಸಂಪತ್ತು ಇಲ್ಲದವರು ಏನು ಮಾಡಬೇಕು ?- ಎಂದರೆ ಅದಕ್ಕೆ ಉತ್ತರವು ಈ ಶ್ಲೋಕದಲ್ಲಿದೆ. ಈ ಇಡಿಯ ಜಗತ್ತೇ ಆ ಪರಮೇಶ್ವರನ ಬಹೀರೂಪವು - ಎಂಬ ದೃಢವಾದ ಭಾವನೆಯಿಂದ ಆ ಭಗವಂತನನ್ನು ಸೇವಿಸಬೇಕು. ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ - ಈ ಪಂಚಮಹಾಭೂತಗಳೂ ಸೂರ್ಯಚಂದ್ರರು, ಈ ಒಟ್ಟಿಗೆ ಅಭಿಮಾನಿಯಾದ ವಿರಾಟ್ಪುರುಷ - ಇವು ಎಂಟೂ ಆ ಪರಮಾತ್ಮನ ಮೂರ್ತಿಗಳೇ ಎಂದು ದೃಢವಿಶ್ವಾಸದಿಂದ ಚಿಂತನೆಮಾಡುವದಕ್ಕೆ ಮೊದಲುಮಾಡಬೇಕು. ಈ ಭೂತಗಳ ಕಾರ್ಯವೂ ಸೂರ್ಯಚಂದ್ರರ ಅನುಗ್ರಹವೂ ನಮ್ಮ ನಮ್ಮ ಶರೀರದಲ್ಲಿಯೂ ಇರುತ್ತದೆ. ಹೊರಗಿನ ಬ್ರಹ್ಮಾಂಡಕ್ಕೆ ಅಭಿಮಾನಿಯಾದ ವಿರಾಟ್ಪುರುಷನಂತೆಯೇ ನಮ್ಮ ಜೀವಾತ್ಮ ರೂಪವೂ ಈ ಶರೀರದಲ್ಲಿದ್ದುಕೊಂಡಿರುತ್ತದೆ. ಆದ್ದರಿಂದ ಜಗತ್ತಿನಲ್ಲಿರುವದೆಲ್ಲ ಆ ಪರಮೇಶ್ವರನ ಅಷ್ಟಮೂರ್ತಿಗಳೇ ಎಂದು ಶ್ರದ್ಧಾಭಕ್ತಿಗಳಿಂದ ಉಪಾಸನೆ ಮಾಡುತ್ತಿರುವವರಿಗೆ ಮಾಯೆಯ ಕಾಟವಿರುವದಿಲ್ಲ. ಈ ಜಗತ್ತಿನಲ್ಲಿರುವ ವಸ್ತುಗಳು ಕೆಲವು ನಮಗೆ ಬೇಕಾದವು, ಮತ್ತೆ ಕೆಲವು ಬೇಡವಾದವುಗಳು - ಎಂಬ ಭಾವನೆಯಿಂದಲೇ ನಮಗೆ ನಾನುನನ್ನದೆಂಬ ತಪ್ಪುತಿಳಿವಳಿಕೆಯುಂಟಾಗಿರುತ್ತದೆ. ಈ ಜಗತ್ತೆಲ್ಲವೂ ಆ ಪರಮೇಶ್ವರನ ವಿಭೂತಿಯೇ, ಇವೆಲ್ಲಕ್ಕೂ ಆತ್ಮನಾಗಿ ಆ ಪರಮಾತ್ಮನಿರುತ್ತಾನೆ. ಆತನೇ ನಮ್ಮಗಳೆಲ್ಲರ ಆತ್ಮನು - ಎಂಬ ಭಾವನೆಯು ಗಟ್ಟಿಗೊಳ್ಳುತ್ತಾ ಬಂದಂತೆಲ್ಲ ನಮಗೆ

ಧೈರ್ಯವುಂಟಾಗುತ್ತದೆ. 'ಪರಮೇಶ್ವರನನ್ನು ಶರಣುಹೊಕ್ಕಿದ್ದೇನೆ. ನನಗೆಲ್ಲಿಯ ಮಾಯೆಯ ಮೋಹ ? ಮಾಯೆ ಎಂಬುದು ಆ ಪರಮೇಶ್ವರನ ಪ್ರಕೃತಿ, ಆ ಪರಮೇಶ್ವರನೇ ಇದನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವ ಮಹಾ ಮಾಯಾವಿ. ಆದ್ದರಿಂದ ಆತನನ್ನೇ ಶರಣುಹೊಕ್ಕಿರುವ ನಮ್ಮಂಥವರಿಗೆ ಈ ಸಂಸಾರ ಮಾಯೆಯ ಉಪಟಳವು ಎಂದಿಗೂ ಇರಲಾರದು ' - ಎಂದು ದೃಢವಾಗಿ ನಂಬಬೇಕು.

ಈ ಉಪಾಸನೆಯನ್ನು ಮಾಡುತ್ತಿರುವಾಗ, ಯಾವದಾದರೊಂದು ದೃಶ್ಯದಲ್ಲಿ 'ಇದು ಚೇನತವಾದ ಅಥವಾ ಅಚೇತನವಾದ ಸ್ವತಂತ್ರಪದಾರ್ಥ' ಎಂಬ ಭಾವವು ಯಾವಾಗಲಾದರೂ ಪಾಪಸಂಸ್ಕಾರದಿಂದ ಬರುವದಾದರೆ, ಕೂಡಲೆ ಅದನ್ನು ಹಿಂತಳ್ಳಿ 'ಛೇ ! ಪಂಚಭೂತಗಳ ವಿಕಾರವಲ್ಲದೆ ಈ ಜಗತ್ತಿನಲ್ಲಿ ಮತ್ತೇನಿದೆ ? ಆ ಪಂಚಭೂತಗಳೆಲ್ಲ ಆ ಪರಮೇಶ್ವರನ ಮೂರ್ತಿಯಲ್ಲವೆ ? ಆತನಿಗಿಂತ ಬೇರೆಯಾದ ಇರವು ಇವಕ್ಕೆ ಎಲ್ಲಿ ಬಂತು ? ಆಕಾಶದಲ್ಲಿ ಹೊಳೆಯುತ್ತಿರುವ ಸೂರ್ಯ, ಚಂದ್ರ, ನಕ್ಷತ್ರಗಳು - ಮುಂತಾದ ಜ್ಯೋತಿಗಳೂ ಸ್ವಯಂ ಜ್ಯೋತಿಯಾದ ಆ ಪರಮೇಶ್ವರನ ಮೂರ್ತಿಗಳೇ. ನನ್ನ ಶರೀರವಾದರೂ ಏನು ? ಅದೂ ಪಂಚಭೂತಗಳ ವಿಕಾರವಲ್ಲವೆ ? ಇದರೊಳಗೆ ಕೆಲಸಮಾಡುವಂತೆ ತೋರುವ ಪ್ರಾಣವು ವಾಯುವಿಶೇಷವಲ್ಲವೆ ? ಮನೋಬುದ್ಧ್ಯಹಂಕಾರ ಗಳಾದರೂ ಆತನ ಅನುಗ್ರಹವಲ್ಲವೆ ? ಇನ್ನು ನನ್ನ ಆತ್ಮನೆಂಬುದಾದರೂ ಏನು ? ಸರ್ವಪ್ರಾಣಿಗಳೊಳಗೂ ಇರುವ ಆತ್ಮನೆಂಬುದೂ ಆತನ ವಿಭೂತಿಯೇ ಅಲ್ಲದೆ ಮತ್ತೇನು ? ' - ಎಂದು ಮತ್ತೆಮತ್ತೆ ಮನಸ್ಸಿನಲ್ಲಿ ಹೊರಳಾಡಿಸಬೇಕು. ಆಗ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವ ಆ ಅಷ್ಟಮೂರ್ತಿಗಿಂತ ಬೇರೆಯಾಗಿ ಚರಾಚರಜಗತ್ತೆಂಬುದು ಇಲ್ಲವೇ ಇಲ್ಲ - ಎಂಬ ದೃಢಭಾವನೆಯು ಬೇರೂರಿ ಕೊಂಡುಬಿಡುತ್ತದೆ. ಈ ಭಾವನೆಯೇ ಆ ಪರಮಶಿವನ ತತ್ತ್ವದ ಸಾಕ್ಷಾತ್ಕಾರಕ್ಕೆ ದ್ವಾರವಾಗಿ ಪರಿಣಮಿಸಿ ಬಿಡುತ್ತದೆ.

ঃঃঃঃঃঃঃঃঃ

## ೧೦. ಸರ್ವಾತ್ಮಭಾವ

**ಸರ್ವಾತ್ಮತ್ವಮಿತಿ ಸ್ಫುಟೀಕೃತಮಿದಂ ಯಸ್ಮಾದಮುಷ್ಮಿಂಸ್ತವೇ**
**ತೇನಾಸ್ಯ ಶ್ರವಣಾತ್ತದರ್ಥಮನನಾದ್ಧ್ಯಾನಾಚ್ಚಸಂಕೀರ್ತನಾತ್ ।**
**ಸರ್ವಾತ್ಮತ್ವಮಹಾವಿಭೂತಿಸಹಿತಂ ಸ್ಯಾದೀಶ್ವರತ್ವಂ ಸ್ವತಃ**
**ಸಿಧ್ಯೇತ್ತತ್ಪುನರಷ್ಟಧಾ ಪರಿಣತಂ ಚೈಶ್ವರ್ಯಮವ್ಯಾಹತಮ್ ॥೧೦॥**

ಸ್ತೋತ್ರದ ಅರ್ಥವನ್ನು ಅನುಭವಕ್ಕೆ ತಂದುಕೊಂಡವನಿಗೆ ಆಗುವ ಫ ವನ್ನು ಇಲ್ಲಿ ಹೇಳಿರುತ್ತದೆ. '' ಈ ಸ್ತೋತ್ರದಲ್ಲಿ ಸರ್ವಾತ್ಮಕತ್ವವನ್ನು ಹೀ ಸ್ಫುಟಗೊಳಿಸಲಾಗಿರುವದಷ್ಟೆ ? ಆದ್ದರಿಂದ ಇದನ್ನು ಶ್ರವಣಮಾಡಿ, ಇದ ಅರ್ಥವನ್ನು ಮನನಮಾಡಿಕೊಂಡು, ಅದನ್ನೇ ಧ್ಯಾನಮಾಡುತ್ತಾ, ಸಂಕೀರ್ತ ಮಾಡುವದರಿಂದ 'ಸರ್ವಾತ್ಮತ್ವ'ವೆಂಬ ಮಹಾವಿಭೂತಿಯಿಂದೊಡಗೂಡಿ ಈಶ್ವರತ್ವವು ಉಂಟಾಗುವದು. ಎಂಟು ಬಗೆಯಾಗಿ ಪರಿಣಮಿಸುವ, ಯಾ ಅಡ್ಡಿಯೂ ಇಲ್ಲದ ಐಶ್ವರ್ಯವೂ ತಾನೇ ಸಿದ್ಧಿಸುವದು '' ಎಂಬುದು ಶ್ಲೋಕ ಅಕ್ಷರಾರ್ಥವು.

ಪರಮಾತ್ಮನೇ ಪರಮಾರ್ಥತತ್ತ್ವವು, ಅವನಿಗಿಂತ ಬೇರೆಯಾಗಿರುವದ ಮತ್ತೆ ಯಾವದೂ ಇರುವದೇ ಇಲ್ಲ; ಈ ಜಗತ್ತೆಲ್ಲವೂ ಆತನ ಮಹಿಮೆಯೇ . ಎಂಬುದು ಈ ಸ್ತೋತ್ರದ ಒಟ್ಟರ್ಥವಷ್ಟೆ ? ಈ ಅರ್ಥವನ್ನು ಅರಿತುಕೊಂ ಪ್ರತಿಯೊಬ್ಬನಿಗೂ ' ನನ್ನ ಆತ್ಮನು ಆ ಪರಮಾತ್ಮನೇ ' - ಎಂಬ ಅನುಭವ ಉಂಟಾಗಿ ಬಿಡುತ್ತದೆಯಾದ್ದರಿಂದ ಅವನಿಗೆ ಬೇಕಾದ ಪುರುಷಾರ್ಥವು ಮತ್ತೆ ಯಾವದೂ ಉಳಿಯುವದಿಲ್ಲವೆಂಬುದು ಸ್ಪಷ್ಟವಾಗಿದೆ. ಆದರೆ ಈ ಸ್ತೋತ್ರವನ್ನು ಸುಮ್ಮನೆ ಓದಿದ ಮಾತ್ರದಿಂದ ಇಂಥ ಅನುಭವವು ಬರಲಾರದೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಅದಕ್ಕಾಗಿ ಏನುಮಾಡಬೇಕೆಂಬುದನ್ನು ಇಲ್ಲಿ ತಿಳಿ ಕೊಟ್ಟಿರುತ್ತದೆ.

ಈ ಸ್ತೋತ್ರದ ಅಭಿಪ್ರಾಯವನ್ನು ಸದ್ಗುರುವಿನ ಮುಖದಿಂದ ಶ್ರವಣ ಮಾಡಬೇಕು. ಅಧಿಕಾರಿಯಾದ ಸಾಧಕನು ಸದ್ಗುರುವಿನ ಬಳಿಗೆ ವಿನಯದಿಂದ ಹೋಗಿ ಆತನನ್ನು ತತ್ತ್ವದ ವಿಷಯವಾಗಿ ಸಮಯವರಿತು ಪ್ರಶ್ನಿಸಬೇಕು. ದಯಾಘನನಾದ ಆ ಗುರುವು ಉಪದೇಶಿಸುವದನ್ನು ಮನಸ್ಸಿಟ್ಟು ಕೇಳಿ, ಅರ್ಥವನ್ನು ಗ್ರಹಿಸಬೇಕು. ಉತ್ತಮಾಧಿಕಾರಿಯಾಗಿದ್ದರೆ ಸದ್ಗುರುವು ಒಮ್ಮೆ ತಿಳಿಸಿಕೊಟ್ಟ ಮಾತ್ರದಿಂದಲೇ ವಿಷಯವು ಮನವರಿಕೆಯಾಗಿಬಿಡಬಹುದು. ಆದರೆ ಚಿತ್ತದಲ್ಲಿ ಕಲ್ಮಷವಿರುವವರಿಗೆ ಗುರುಬೋಧೆಯ ವಾಕ್ಯದಲ್ಲಿರುವ ಪದಾರ್ಥಗಳ ಅರಿವು ಆಗಲಾರದು. ಆ ವಿಷಯಕ್ಕೆ ಅವರಿಗೆ ಸಂಶಯವೂ ತಪ್ಪುತಿಳಿವಳಿಕೆಯೂ ಉಂಟಾಗಬಹುದು. ಆದ್ದರಿಂದ ಅದೇ ವಿಷಯವನ್ನು ತರ್ಕಕ್ಕೆ ಹೊಂದಿಸಿ ಸಂಶಯವನ್ನೂ ತಪ್ಪುತಿಳಿವಳಿಕೆಯನ್ನೂ ಹೋಗಲಾಡಿಸಿಕೊಳ್ಳಬೇಕು. ತರ್ಕವೆಂದರೆ ಅನುಮಾನಾದಿ ಪ್ರಮಾಣಗಳಿಂದ ವಿಷಯವನ್ನು ಪರೀಕ್ಷಿಸುವದೆಂದೇನೂ ಅರ್ಥವಲ್ಲ ; ಏಕೆಂದರೆ ಎಲ್ಲರಿಗೂ ಆತ್ಮನಾಗಿರುವ ಪರಮೇಶ್ವರನು ಯಾವ ಪ್ರಮಾಣಕ್ಕೂ ವಿಷಯನಲ್ಲ. ಪ್ರಮಾಣಕ್ಕೆ ವಿಷಯನಾಗಿರುವದು ಹೊರಗಿನ ಜ್ಞೇಯಪದಾರ್ಥವು. ಪರಮೇಶ್ವರನು ಪ್ರಮಾತೃವಾದ ಜಿಜ್ಞಾಸುವಿಗೆ ಆತ್ಮನೇ

ಆಗಿರುತ್ತಾನೆ. ಆ ಆತ್ಮನ ಬೆಳಕಿನಿಂದಲೇ ಪ್ರಮಾತೃ, ಪ್ರಮಾಣ, ಪ್ರಮೇಯ - ಈ ಮೂರೂ ಬೆಳಗುತ್ತಿರುವವೆಂದು ಆಗಲೇ ತಿಳಿಸಿದ್ದಾಗಿದೆ. ಹೀಗೆ ಸ್ವತಃ ಚೈತನ್ಯಪ್ರಕಾಶಸ್ವರೂಪವೇ ಆಗಿದ್ದರೂ ಆ ಆತ್ಮನು ಅಂತಃಕರಣದಲ್ಲಿ ಮಲವಿಕ್ಷೇಪಗಳೆಂಬ - ಮಂಕು, ಹರಿದಾಟ ಎಂಬ ದೋಷವಿರುವವರಿಗೆ ತಿಳಿಯದೆ ಇರುತ್ತಾನೆ. ತನ್ನ ನಿಜವಾದ ಸ್ವರೂಪದಿಂದ ಕಾಣದೆ, ಬೇರೆಯ ರೂಪದಿಂದಲೇ ಕಾಣಿಸುತ್ತಿರುತ್ತಾನೆ. ಆದ್ದರಿಂದ ಶಾಸ್ತ್ರದಲ್ಲಿ ಹೇಳಿರುವ ರೀತಿಯಿಂದ, ಮತ್ತು ಸದ್ಗುರುವು ತಿಳಿಸಿಕೊಡುವ ಯುಕ್ತಿಗಳಿಂದ , ಅಜ್ಞರು ಆತ್ಮನಲ್ಲಿ ಹುಟ್ಟುಗಟ್ಟಿ ಕೊಂಡಿರುವ ಕಲ್ಪಿತರೂಪಗಳನ್ನು ಕಳೆದುಹಾಕಬೇಕು. ಈ ಕ್ರಮಕ್ಕೆ **ಮನನ**ವೆಂದು ಹೆಸರು. ಆಗ ಆತ್ಮನು ತನ್ನ ಸ್ವರೂಪದಿಂದ ತಾನೆ ಬೆಳಗುತ್ತಾನೆ.

ಯಾರ ಮನಸ್ಸು ಹೊರಗಡೆಗೇ ಹರಿಯುತ್ತಿರುವದೋ, ಅವರಿಗೆ ತಮ್ಮೊಳಗೆ ಇರುವ ಸರ್ವಸಾಕ್ಷಿಯಾಗಿರುವ ಆತ್ಮನು ಎಂದಿಗೂ ಕಾಣಿಸಲಾರ ನೆಂಬುದು ಸ್ಪಷ್ಟವಾಗಿರುತ್ತದೆ. ಅಂಥವರು ಮೊಟ್ಟಮೊದಲು ಪರಾಗ್‌ದೃಷ್ಟಿಯನ್ನು - ಹೊರಕ್ಕೆ ನೋಡುವ ಇಂದ್ರಿಯಗಳ ನೋಟವನ್ನು - ಹಿಮ್ಮೆಟ್ಟಿಸಿಕೊಂಡು ತಮ್ಮೊಳಗೇ ನೋಡುವ ಅಭ್ಯಾಸವನ್ನು ಮೊದಲು ಮಾಡಿಕೊಳ್ಳಬೇಕು. ಶ್ರವಣಕ್ಕೆ ಅನುಗುಣವಾಗಿ ಮನನವನ್ನು ಮಾಡಿಕೊಂಡರೂ ಯಾರಿಗೆ **ಆತ್ಮತತ್ತ್ವದ** ಅನುಭವವು ಉಂಟಾಗುವದಿಲ್ಲವೋ, ಅಂಥವರು **ನಿದಿಧ್ಯಾಸನ**ವನ್ನು ಮಾಡಬೇಕು. ಒಳನೋಟದಿಂದ ಆತ್ಮನನ್ನು ಧ್ಯಾನಿಸಬೇಕು.

**ಧ್ಯಾನ**ವೆಂಬ ಮಾತಿಗೆ ಎರಡು ಅರ್ಥಗಳಿರುತ್ತವೆ. ಶಾಸ್ತ್ರದಲ್ಲಿ ಹೇಳಿರುವ ವಸ್ತುವನ್ನು ಹಾಗೆಯೇ ಆಯಾ ಗುಣ, ಆಕಾರ - ಮುಂತಾದವುಗಳಿಂದ ಕೂಡಿಕೊಂಡಿರುವಂತೆ ಮನಸ್ಸಿನಲ್ಲಿಯೇ ಕಲ್ಪಿಸಿಕೊಂಡು ಭಾವನೆಮಾಡುವದು ಒಂದು ಬಗೆಯ ಧ್ಯಾನವು. ಯಾವದಾದರೊಂದು ಮಂತ್ರವನ್ನು ಜಪಿಸುವವರಿಗೆ ಆಯಾ ದೇವತೆಯನ್ನು ಹೀಗೆ ಹೀಗೆ ಧ್ಯಾನಿಸಬೇಕೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಅದರಂತೆಯೇ ಭಾವನೆಮಾಡುವ ಕ್ರಮವು ಈ ಬಗೆಯ ಧ್ಯಾನವಾಗಿರುತ್ತದೆ. ಇದನ್ನು **ಉಪಾಸನೆ** ಎಂದು ಕರೆಯುವದು ವಾಡಿಕೆ. ಇದು ಪುರುಷಪ್ರಯತ್ನದಿಂದ ಆಗಬೇಕಾಗಿರುತ್ತದೆ. ; ಧ್ಯೇಯವಸ್ತು ಹೇಗಿದೆ ಎಂಬುದು ಶಾಸ್ತ್ರಸಮರ್ಪಿತ ವಾಗಿರುತ್ತದೆಯೇ ಹೊರತು ಮೊದಲೇ ಧ್ಯಾತೃವಿಗೆ ಗೋಚರವಾಗಿರುವದಿಲ್ಲ. ಆದ್ದರಿಂದ ಶಾಸ್ತ್ರದಲ್ಲಿ ಹೇಳಿದಂತೆ ಕಲ್ಪಿಸಿಕೊಳ್ಳುವದು ಮಾತ್ರ ಅಲ್ಲಿ ಸಾಕಾಗಿರುತ್ತದೆ. ನಮ್ಮೆಲ್ಲರ ಆತ್ಮನನ್ನು ಧ್ಯಾನಿಸುವದೆಂದರೆ ಹೀಗಲ್ಲ. ಪರಮೇಶ್ವರನು ದೇಹ, ಪ್ರಾಣ, - ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ- ಮುಂತಾದವು ಗಳೆಲ್ಲಕ್ಕಿಂತಲೂ ಒಳಗಿದ್ದು, ಅವುಗಳೆಲ್ಲಕ್ಕಿಂತಲೂ ಸೂಕ್ಷ್ಮನಾಗಿರುತ್ತಾನೆ ; ಅವನ ಚೈತನ್ಯಪ್ರಕಾಶವೇ ಇವುಗಳೆಲ್ಲವನ್ನೂ ಬೆಳಗುತ್ತಿರುತ್ತದೆ- ಎಂದು ಶಾಸ್ತ್ರದಲ್ಲಿ

ತಿಳಿಸಿರುತ್ತದೆಯಷ್ಟೆ ? ಹೊರಗೆ ಇಂದ್ರಿಯಗಲಿಂದ ವಿಷಯಗಳನ್ನು ನೋಡುವ ಹವ್ಯಾಸವನ್ನು ತೊರೆದು ಮನಸ್ಸನ್ನು ಮೆಲ್ಲಮೆಲ್ಲಗೆ ಒಳಸರಿಯಿಸಿಕೊಂಡು ಸಾಧನದಿಂದ ಅದನ್ನು ಸೂಕ್ಷ್ಮವಾಗಿ ಮಾಡಿಕೊಂಡು, ನಮ್ಮೊಳಗೇ ಇರುವ ಆತ್ಮಸ್ವರೂಪವನ್ನು ಕಂಡುಕೊಳ್ಳುವದಕ್ಕೆ ಪ್ರಯತ್ನಿಸುತ್ತಿರುವ ಶ್ರದ್ಧಾಳುವಾದ ಸಾಧಕನಿಗೆ ಮನಸ್ಸು ಅಮನಸ್ಸಾಗಿ ಆತ್ಮನಲ್ಲಿ ಕರಗಿಹೋಗಿಬಿಡುತ್ತದೆ ; ಆಗ ಆತ್ಮನೊಬ್ಬನೇ ಉಳಿದುಕೊಳ್ಳುತ್ತಾನೆ. ಆ ಆತ್ಮನನ್ನು ಸಾಧಕನು ಆತ್ಮರೂಪ ದಿಂದಲೇ ನೋಡಿ ಅನುಭವಕ್ಕೆ ತಂದುಕೊಳ್ಳುತ್ತಾನೆ. ಬಹಳ ಸೂಕ್ಷ್ಮವಾಗಿರುವ ವಸ್ತುಗಳನ್ನು ಕಂಡುಹಿಡಿಯುವದಕ್ಕೆ ದೃಷ್ಟಿಯನ್ನು ಸೂಕ್ಷ್ಮವಾಗಿ ಮಾಡುವಂತೆ- ಉದಾಹರಣೆಗೆ ರತ್ನಪರೀಕ್ಷಕನಾಗಿರುವವನು ಅದನ್ನೇ ನಿಟ್ಟಿಸಿನೋಡಿ ಪರೀಕ್ಷಿಸಿ ಇದು ಇಂಥ ರತ್ನವು ಎಂದು ನಿರ್ಣಯಿಸುವಂತೆ- ಆತ್ಮನ ಕಡೆಗೇ ಮನಸ್ಸನ್ನು ಏಕಾಗ್ರತೆಯಿಂದ ಹರಿಯಿಸಿ ಆತ್ಮನನ್ನು ಕಂಡುಕೊಳ್ಳುವ ಧ್ಯಾನವು **ನಿಧಿಧ್ಯಾಸನ** ವೆನಿಸುವದು.

ಹೀಗೆ ಆತ್ಮನನ್ನೇ ಶ್ರವಣಮಾಡಿ, ಆತ್ಮತತ್ತ್ವವನ್ನು ಶ್ರವಣಕ್ಕನುಗುಣವಾಗಿ ಮನನಮಾಡಿ, ಅದಕ್ಕೆ ಅನುಸಾರವಾಗಿ ನಿದಿಧ್ಯಾಸನಮಾಡಿದರೆ ಆ ತತ್ತ್ವದ ಅನುಭವವುಂಟಾಗುತ್ತದೆ. ಈ ಸಾಧನಗಳು ಅಳವಡದೆ ಇರುವವರು ಈ ಸ್ತೋತ್ರವನ್ನು ದೊಡ್ಡವರಿಂದ ಹೇಳಿಸಿಕೊಂಡು ಇದರ ಅರ್ಥವನ್ನು ಮನಸ್ಸಿನಲ್ಲಿ ಹೊರಳಾಡಿಸುತ್ತಾ, ಇದನ್ನು ಗಟ್ಟಿಯಾಗಿ ಹೇಳಿಕೊಳ್ಳುತ್ತಿರಬೇಕು ; ಶಾಂತಿ ದಾಂತ್ಯಾದಿ ಸಾಧನಗಳನ್ನೂ ಅಳವಡಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿರಬೇಕು ; ಸದ್ಗುರುವಿನ ದರ್ಶನವನ್ನು ಅನುಗ್ರಹಿಸೆಂದು ಪರಮೇಶ್ವರನನ್ನು ಪ್ರಾರ್ಥಿಸುತ್ತಿರ ಬೇಕು. ಅಂಥವರಿಗೂ ಕಾಲಕ್ರಮದಲ್ಲಿ ಸದ್ಗುರುವಿನ ಅನುಗ್ರಹವು ದೊರೆತು ಶ್ರವಣಾದಿಗಳಿಂದ ಈ ಸ್ತೋತ್ರದ ಅಭಿಪ್ರಾಯವು ಮನದಟ್ಟಾಗುವದು.

ಈ ಸ್ತೋತ್ರಕ್ಕೆ ಸರ್ವಾತ್ಮತ್ವವೇ ಫಲವು. ಸರ್ವಾತ್ಮತ್ವವೆಂದರೆ ಇದೆಲ್ಲವೂ ತಾನೇ ಎಂಬ ಅನುಭವವು. ಈ ಅನುಭವವು ಹೇಗೆ ಬರುವದೆಂಬುದನ್ನು ಉಪನಿಷತ್ತಿನಲ್ಲಿ ಹೀಗೆಂದು ತಿಳಿಸಿರುತ್ತದೆ :

**ಬ್ರಹ್ಮ ವಾ ಇದಮಗ್ರ ಆಸೀತ್ತದಾತ್ಮಾನಮೇವಾವೇತ್ । ಅಹಂ**
**ಬ್ರಹ್ಮಾಸ್ಮೀತಿ ತಸ್ಮಾತ್ತತ್ಸರ್ವಮಭವತ್ ತದ್ಯೋ ಯೋ ದೇವಾ**
**ನಾಂ ಪ್ರತ್ಯಬುಧ್ಯತ ಸ ಏವ ತದಭವತ್ತಥರ್ಷೀಣಾಂ ತಥಾ**
**ಮನುಷ್ಯಾಣಾಂ ತದ್ಧೈತತ್ಪಶ್ಯನ್ನೃಷಿರ್ವಾಮದೇವಃ ಪ್ರತಿ**
**ಪೇದೇಽಹಂ ಮನುರಭವಂ ಸೂರ್ಯಶ್ಚೇತಿ ತದಿದಮಪ್ಯೇತರ್ಹಿ**
**ಯ ಏವಂ ವೇದಾಹಂ ಬ್ರಹ್ಮಾಸ್ಮೀತಿ ಸ ಇದಂ ಸರ್ವಂ ಭವತಿ ॥**

ಇದು ಮೊದಲು ಬ್ರಹ್ಮವೇ ಆಗಿತ್ತು ; ಅದು ತನ್ನನ್ನೇ 'ನಾನು ಬ್ರಹ್ಮವಾಗಿರುವೆನು' ಎಂದು ಅರಿತುಕೊಂಡಿತು. ಅದರಿಂದ ಅದು ಎಲ್ಲವೂ ಆಯಿತು. ಇದನ್ನು ದೇವತೆಗಳಲ್ಲಿ ಯಾವಯಾವನು ಅರಿತುಕೊಂಡನೇ ಅವನೇ ಅದಾದನು ; ಋಷಿಗಳೊಳಗೂ ಹಾಗೆಯೇ, ಮನುಷ್ಯರೊಳಗೂ ಹಾಗೆಯೇ. ಆ ಇದನ್ನು ಅರಿತುಕೊಂಡು ವಾಮದೇವಋಷಿಯು 'ನಾನೇ ಮನುವಾದೆನು'ಸೂರ್ಯನೂ ಆದೆನು' ಎಂದು ಅದನ್ನು ಪಡೆದುಕೊಂಡನು. ಆ ಇದನ್ನು ಈಗಲೂ ಯಾವನು 'ನಾನು ಬ್ರಹ್ಮವಾಗಿರುವೆನು' ಎಂದು ಅರಿತುಕೊಳ್ಳುವನೋ ಅವನು ಇದೆಲ್ಲವೂ ಆಗುವನು- ಎಂಬುದು ವಾಕ್ಯದ ಅಕ್ಷರಾರ್ಥ.

ಜ್ಞಾನವಾಗುವ ಮುಂಚೆಯೂ ದೇವತೆಗಳು, ಋಷಿಗಳು, ಮನುಷ್ಯರು- ಎಲ್ಲರೂ ಬ್ರಹ್ಮವೇ, ಪರಮಾತ್ಮನೇ ಆಗಿರುತ್ತಾರೆ. ಆದರೆ ಅಷ್ಟುಮಾತ್ರದಿಂದ ಅವರಿಗೆ ಯಾವ ಪ್ರಯೋಜನವೂ ಇಲ್ಲ. ಯಾವನು ಆ ಬ್ರಹ್ಮವೇ ನಾನು- ಎಂಬ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಾನೋ ಅವನಿಗೆ ಮಾತ್ರ- ನಾನೇ ಇದೆಲ್ಲವೂ, ನನಗಿಂತ ಬೇರೆಯಾಗಿ ಯಾವದೊಂದೂ ಇಲ್ಲ- ಎಂಬ ಸರ್ವಾತ್ಮಭಾವವು ಪ್ರಾಪ್ತಿಯಾಗುವದು. ದೇವತೆಗಳಿಗೆ, ಋಷಿಗಳಿಗೆ- ಇಂಥ ಮಹಾತ್ಮರಿಗೆ ಮಾತ್ರ ಈ ಸರ್ವಾತ್ಮತ್ವವು ಬರುವದೆಂದೂ ನಮ್ಮಂಥವರಿಗೆ ದಕ್ಕಲಾರೆಂದೂ ನಿರಾಶೆಯಾಗಬಾರದು. ಯಾರು ಯಾರು ಈ ಜ್ಞಾನವನ್ನು ಸಂಪಾದಿಸಿಕೊಳ್ಳುವರೋ, ಅವರವರಿಗೆ ಈ ಸರ್ವಾತ್ಮಭಾವವು ಬರುತ್ತದೆ- ಎಂಬುದು ವಾಕ್ಯಾರ್ಥ.

ಇದರಿಂದ ಏನು ಸಿದ್ಧವಾಯಿತೆಂದರೆ ನಮ್ಮಲ್ಲಿ ಪ್ರತಿಯೊಬ್ಬನೂ ನಿಜವಾಗಿ ಆ ಪರಮಾತ್ಮನೇ ಆಗಿರುತ್ತಾನೆ. ಆದರೆ ಹಾಗೆಂಬ ತಿಳಿವಳಿಕೆ ಅವನಿಗೆ ಇಲ್ಲ. ನಾನು ಜೀವನು, ದ್ರಷ್ಟೃ (ನೋಡುವವನು), ಶ್ರೋತೃ (ಕೇಳುವವನು), ಮನ್ತೃ (ಯೋಚಿಸುವವನು) - ಎಂದು ಮುಂತಾಗಿ ಇಂದ್ರಿಯಗಳ ಧರ್ಮವನ್ನು ತಪ್ಪು ತಿಳಿವಳಿಕೆಯಿಂದ ತನ್ನ ಮೇಲೆ ಹಾಕಿಕೊಂಡಿರುತ್ತಾನೆ. ಈ ತಪ್ಪುತಿಳಿವು ಹೋಯಿತೆಂದರೆ ಸಾಕು, 'ಆ ಕೂಡಲೇ ನಾನು ಹಿಂದೆಯೂ ಬ್ರಹ್ಮವೇ ಆಗಿದ್ದೆ, ಈಗಲೂ ಆಗಿರುತ್ತೇನೆ, ಮುಂದೂ ಆಗಿರುವೆನು ; ನಾನು ಎಂದಿಗೂ ಜೀವನಲ್ಲ' ಎಂಬ ತಿಳಿವಳಿಕೆ ಆಗಿಬಿಡುತ್ತದೆ. ಆ ಬ್ರಹ್ಮಜ್ಞಾನವು ಬಂದಿತೆಂದರೆ ಈ ಜಗತ್ತಿನಲ್ಲಿರುವ ಆತ್ಮನೂ ನಾನೇ ಎಂಬ ಅರಿವು ಉಂಟಾಗಿಬಿಡುತ್ತದೆ. ಇದೇ ಸರ್ವಾತ್ಮಭಾವವೆಂಬ **ಮಹಾವಿಭೂತಿಯ ಪ್ರಾಪ್ತಿ.**

ಅಬ್ರಹ್ಮತ್ವವೂ ಅಸರ್ವಾತ್ಮತ್ವವೂ ನಮಗೆ ಅನಾದಿಯಾದ **ಅವಿದ್ಯೆ**ಯಿಂದ- ತಪ್ಪು ತಿಳಿವಳಿಕೆಯಿಂದ ಇದ್ದುಕೊಂಡಿದೆ. ಇದು **ವಿದ್ಯೆ**ಯಿಂದ- ನಿಜವಾದ ಆತ್ಮಾನುಭವವನ್ನು ಕೊಡುವ ತಿಳಿವಳಿಕೆಯಿಂದ- ಹೋದರೆ ಕೂಡಲೆ ಬ್ರಹ್ಮತ್ವವೂ ಸರ್ವಾತ್ಮತ್ವವೂ ಬಂದುಬಿಡುತ್ತದೆ. ಈ ಮಹಾವಿಭೂತಿಯ ಪ್ರಾಪ್ತಿಗೆ ಅಡ್ಡಲಾಗಿರುವದು ಮತ್ತೇನೂ ಅಲ್ಲ, ಅವಿದ್ಯೆ - (ತಪ್ಪುತಿಳಿವಳಿಕೆ) ಯೊಂದೇ ಅಡ್ಡಿ.

ಸರ್ವಾತ್ಮತ್ವವೆಂಬ ಈ ಮಹಾವಿಭೂತಿಯು ದೊರಕಿದರೆ ಕೂಡಲೆ **ಅಷ್ಟೈಶ್ವರ್ಯ**ಗಳೂ ಪ್ರಾಪ್ತವಾಗುವವು ಎಂದು ಈ ಸ್ತೋತ್ರದಲ್ಲಿ ಫಲಶ್ರುತಿಯಿದೆ. ಇದರ ಅರ್ಥವನ್ನು ಈಗ ವಿಚಾರಮಾಡೋಣ.

ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ ವಶಿತ್ವ- ಎಂಬ ಅಷ್ಟಸಿದ್ಧಿಗಳು ದೇವತೆಗಳಿಗೂ ಋಷಿಗಳಿಗೂ ಇರುವವೆಂದು ಶಾಸ್ತ್ರಗಳಲ್ಲಿ ಹೇಳಿದೆ. ಯೋಗಾಭ್ಯಾಸದಿಂದ ಸಿದ್ಧನಾದವನಿಗೆ ಈ ಸಿದ್ಧಿಗಳು ದೊರಕುವವೆಂದೂ ಯೋಗಶಾಸ್ತ್ರಗಳಲ್ಲಿ ಹೇಳಿರುತ್ತದೆ. ಅತ್ಯಂತ ಸಣ್ಣವಾದ ವಸ್ತುಗಳಿಗೂ ಆತ್ಮನಾಗುವದು **ಅಣಿಮಾ** ಎಂಬ ಸಿದ್ಧಿ. ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿ ಅದಕ್ಕಿಂತಲೂ ವ್ಯಾಪಕನಾಗುವದು **ಮಹಿಮಾ** ಎಂಬ ಸಿದ್ಧಿ. ಅತ್ಯಂತವಾಗಿ ಹಗುರವಾಗಿರುವ ವಸ್ತುಗಳಿಗಿಂತಲೂ ಹಗುರವಾಗುವದು **ಲಘಿಮಾ ;** ಅತ್ಯಂತವಾಗಿ ಭಾರವಾಗುವದು **ಗರಿಮಾ.** ಅತ್ಯಂತ ದೂರದಲ್ಲಿರುವ ವಸ್ತುಗಳನ್ನು ಇದ್ದಲ್ಲಿಂದಲೇ ಪಡದುಕೊಳ್ಳುವದು **ಪ್ರಾಪ್ತಿ.** ಆಕಾಶದಲ್ಲಿ ಅಥವಾ ನೀರಿನ ಮೇಲೆ ನಡೆಯುವದು- ಮುಂತಾದ ತನಗೆ ಇಷ್ಟವಾದ ಸಿದ್ಧಿಗಳನ್ನೆಲ್ಲ ಪಡೆದುಕೊಳ್ಳುವದು **ಪ್ರಾಕಾಮ್ಯ.** ಜಗತ್ತೆಲ್ಲವನ್ನೂ ಸೃಷ್ಟಿಸ್ಥಿತಿ- ಮಾಡಬಲ್ಲ ಶಕ್ತಿಯು **ಈಶಿತ್ವವು.** ವಿಶ್ವದಲ್ಲಿರುವವರೆಲ್ಲರನ್ನೂ ವಶದಲ್ಲಿಟ್ಟುಕೊಳ್ಳಬಲ್ಲ ಸಾಮರ್ಥ್ಯವು **ವಶಿತ್ವವು.** ಈ ಎಂಟು ಬಗೆಯ ಸಿದ್ಧಿಗಳು ಮಹಾಮಹಿಮರಾದ ದೇವತೆಗಳಿಗೂ ತಪಸ್ವಿಗಳಾದ ಋಷಿಗಳಲ್ಲಿ ಕೆಲವರಿಗೂ ಮಹಾಯೋಗಿಗಳಿಗೂ ದೊರಕುವವಂತೆ. ಆದರೆ ಸರ್ವಾತ್ಮಭಾವವನ್ನು ಪಡೆದುಕೊಂಡಿರುವ ಮಹಾನುಭಾವರಿಗೆ ಬ್ರಹ್ಮಜ್ಞಾನವು ಉಂಟಾದಮಾತ್ರದಿಂದ, ತಾನೇ ಮತ್ತೆ ಯಾವ ಪ್ರಯತ್ನವೂ ಇಲ್ಲದೆ , ಇವು ಉಂಟಾಗಿರುವವೆಂದು ಇಲ್ಲಿ ಜ್ಞಾನವನ್ನು ಹೊಗಳಿರುತ್ತದೆ. ಜ್ಞಾನಿಯಾದವನು ಎಲ್ಲರಿಗೂ ಆತ್ಮನೇ ಆಗಿರುವದರಿಂದ ದೇವತೆಗಳ, ಋಷಿಗಳ, ಯೋಗಿಗಳ ಮತ್ತು ಮನುಷ್ಯರಲ್ಲಿ ಚಕ್ರವರ್ತಿಗಳೇ ಮುಂತಾದವರ ಮಹಿಮೆಯೆಲ್ಲವೂ ಜ್ಞಾನಿಯದೇ ಎಂಬುದು ಯುಕ್ತವೂ ಆಗಿದೆ.

ಹೀಗಿರುವದರಿಂದ ಜ್ಞಾನಿಗಳಾದವರಿಗೆ ಅಣಿಮಾದಿಸಿದ್ಧಿಗಳು ಕಾಣಿಸಿಕೊಳ್ಳುವದೇ ಗುರುತೆಂದು ಭ್ರಮಿಸಬಾರದು. ಪರಮಾತ್ಮನಲ್ಲಿ ತಾದಾತ್ಮ್ಯವನ್ನು ಹೊಂದಿರುವ ಜ್ಞಾನಿಗೆ ಇಂಥ ಐಶ್ವರ್ಯಸಿದ್ಧಿಯಲ್ಲಿ ಯಾವ ಆಸೆಯೂ ಇರುವದಿಲ್ಲ. ಏಕೆಂದರೆ ನಿತ್ಯಸಿದ್ಧನಾದ ಪರಮೇಶ್ವರನೇ ಅವನ ಆತ್ಮನಾಗಿರುತ್ತಾನೆ.

ಶ್ರೀದಕ್ಷಿಣಾಮೂರ್ತಿಯ ಅನುಗ್ರಹದಿಂದ ಜಿಜ್ಞಾಸುಗಳಿಗೆ ಇಂಥ ಸರ್ವಾತ್ಮಭಾವವನ್ನು ಪಡೆಯುವ ಜ್ಞಾನವು ಲಭಿಸುವದು.

ಹರಿಃ ಓಮ್

6. **ಶಾಂಕರವೇದಾಂತದ ಮೂಲತತ್ತ್ವಗಳು :** 1966 ನೇ ಇಸವಿಯಲ್ಲಿ ದಾವಣಗೆರೆಯಲ್ಲಿ ನಡೆದ ಶಂಕರಸಪ್ತಾಹದ ಸಂದರ್ಭದಲ್ಲಿ ಶ್ರೀಶ್ರೀಗಳವರು ಅನುಗ್ರಹಿಸಿದ **ಇಪ್ಪತ್ತೊಂದು** ಉಪನ್ಯಾಸಗಳಿವೆ. ಶಂಕರರ ಪರಮಸಿದ್ಧಾಂತವನ್ನು ಅರಿಯಲು ಈ ಗ್ರಂಥದ ಅವಲೋಕನವು ಸಹಕಾರಿಯಾಗಿದೆ. **(ತೃತೀಯ ಮುದ್ರಣ : ೧೯೯೯ ಪು. ಡೆಮ್ಮಿ ೪ + ೧೧೪)**

7. **ಅಧ್ಯಾತ್ಮವಿದ್ಯೆ :** 1964ನೆಯ ಇಸವಿಯ ಚಾತುರ್ಮಾಸ್ಯದಲ್ಲಿ ಹೊಳೆನರಸೀಪುರದಲ್ಲಿ ಮಾಡಿದ **ಇಪ್ಪತ್ತಾರು** ಉಪನ್ಯಾಸಗಳಿವೆ. ಅಧ್ಯಾತ್ಮವಿದ್ಯೆ ಎಂಬುದು ವಸ್ತುಪ್ರಧಾನವಾದ ಜ್ಞಾನ, ಭಾವನಾ ಪ್ರಧಾನವಾದ ಉಪಾಸನೆ - ಎಂದು ಎರಡು ವಿಧವಾಗಿ ಉಪನಿಷತ್ತುಗಳಲ್ಲಿ ವರ್ಣಿಸಲ್ಪಟ್ಟಿರುವ ವಿಚಾರವು ಈ ಗ್ರಂಥದಲ್ಲಿ ಅಡಗಿದೆ. ಬೃಹದಾರಣ್ಯಕದ ನಾಲ್ಕನೆಯ ಅಧ್ಯಾಯದ ತಾತ್ಪರ್ಯವನ್ನು ತಿಳಿಯಲು ಸಹಾಯಕವಾದ ಅಮೂಲ್ಯ ವಿಷಯಗಳಿವೆ.

**(ದ್ವಿತೀಯ ಮುದ್ರಣ : ೧೯೯೨ ಪು. ಡೆಮ್ಮಿ ೬ + ೧೬೦)**

8. **ಜೀವಂತ ವೇದಾಂತ :** 1962ರಲ್ಲಿ ಶ್ರೀಶ್ರೀಗಳವರು ಬೆಂಗಳೂರಿನಲ್ಲಿ ಚಾತುರ್ಮಾಸ್ಯದಲ್ಲಿ ಅನುಗ್ರಹಿಸಿದ **ಐವತ್ತೈದು** ಉಪನ್ಯಾಸಗಳಿವೆ. ವೇದಾಂತವು ಜೀವನದರ್ಶನವೆನ್ನುವುದಕ್ಕೆ ಗುರುತುಗಳೇನು ? ಎಂಬ ವಿಷಯವನ್ನು ಮನೋಹರ ರೀತಿಯಿಂದ ವರ್ಣಿಸಿರುತ್ತಾರೆ. ಕೇವಲ ವಿದ್ವಾಂಸರಿಗೇ ಅಲ್ಲದೆ ಸಾಮಾನ್ಯ ವಿದ್ಯಾಭ್ಯಾಸವುಳ್ಳ ಸ್ತ್ರೀಪುರುಷರಿಗೂ ಹೆಚ್ಚು ಪ್ರಯೋಜನವಾಗುವಂತೆ ಸರಳಭಾಷೆಯಿಂದ ವೇದಾಂತದ ಸಾಧನ- ಸಿದ್ಧಾಂತ ಎಂಬ ಭಾಗಗಳನ್ನು ವಿವರಿಸಿದೆ. **(ದ್ವಿತೀಯ ಮುದ್ರಣ : ೧೯೯೩ ಪು. ಡೆಮ್ಮಿ ೪ + ೩೦೬)**

9. **ಶಂಕರ ಭಗವತ್ಪಾದರ ಸರ್ವಸಮ್ಮತೋಪದೇಶಗಳು :** ಶ್ರೀಶ್ರೀಗಳವರು 1953ರಲ್ಲಿ ಹುಬ್ಬಳ್ಳಿಯಲ್ಲಿ ಚಾತುರ್ಮಾಸ್ಯ ಕಾಲದಲ್ಲಿ ಮಾಡಿದ **ಐವತ್ನಾಲ್ಕು** ಉಪನ್ಯಾಸಗಳಿವೆ. ಶ್ರುತಿ, ಯುಕ್ತ್ಯನುಭವಗಳ ಆಧಾರದಿಂದ ತತ್ತ್ವವನ್ನೂ ಸಾಧನ ಕ್ರಮವನ್ನೂ ವಿಗಂಡವಾಗಿ ಪ್ರತಿಪಾದಿಸಿದೆ. ಭಾಷ್ಯ ವಿರುದ್ಧವಾದಗಳನ್ನೆಲ್ಲಾ ನಿರಾಕರಿಸಿ ಜಿಜ್ಞಾಸುಗಳ ಸಂದೇಹವನ್ನು ದೂರಮಾಡಿದೆ. ಅತ್ಯುತ್ತಮವಾದ ಗ್ರಂಥ. **(ತೃತೀಯ ಮುದ್ರಣ : ೨೦೦೦ ಪು. ಡೆಮ್ಮಿ ೮ + ೩೯೨)**

10. **ಶಾಂಕರವೇದಾಂತಸಾರ :** ಶ್ರೀಶ್ರೀಗಳವರು ತುರೀಯಾಶ್ರಮವನ್ನು ಸ್ವೀಕರಿಸಿದ ( 1948) ಮೊದಲನೆಯ ಚಾತುರ್ಮಾಸ್ಯದಲ್ಲಿ ತಮ್ಮ ಮನನಕ್ಕಾಗಿ ಬರೆದುಕೊಂಡಿದ್ದ ಗ್ರಂಥ. ಇದರಲ್ಲಿ ಒಟ್ಟು **ಮೂವತ್ತೆಂಟು** ಪಾಠಗಳಿವೆ. ಶ್ರೀಶಂಕರಭಗವತ್ಪಾದರವರ ವೇದಾಂತ ಪ್ರಕ್ರಿಯೆಯ ಸಾರವನ್ನು ಪ್ರಸ್ಥಾನತ್ರಯಭಾಷ್ಯಗಳ ಆಧಾರದಿಂದ ಹಿಂಡಿಟ್ಟಿರುವ ಗ್ರಂಥ. ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಅಲ್ಲಲ್ಲಿ ಆಚಾರ್ಯರು ಒಂದೇ ವಿಷಯಕ್ಕೆ ಬರೆದಿರುವ ಅಭಿಪ್ರಾಯಗಳನ್ನೆಲ್ಲಾ ಒಂದು ಕಡೆಗೆ ಕೂಡಿಸಿ ಪ್ರಮಾಣ ವಚನಗಳ ಮೂಲವನ್ನು , ಸ್ಥಾನ ನಿರ್ದೇಶ ಸಮೇತವಾಗಿ ಬರೆದಿರುವದಲ್ಲದೆ ಆಯಾವಾಕ್ಯಗಳ ಅಭಿಪ್ರಾಯವನ್ನು ಗದ್ಯರೂಪವಾಗಿ ಸುಲಭಶೈಲಿಯಲ್ಲಿ ವಿವರಿಸಿದೆ. ವೇದಾಂತೋಪನ್ಯಾಸಗಳನ್ನು ಮಾಡುವ ಪಂಡಿತರಿಗೂ ಮತ್ತು ಜಿಜ್ಞಾಸುಗಳಿಗೂ ಅತ್ಯುತ್ತಮವಾದ ಗ್ರಂಥವಿದು. **(ತೃತೀಯ ಮುದ್ರಣ : ೨೦೦೦ ಪು. ಡೆಮ್ಮಿ ೮ + ೨೯೨)**

ಪೂರ ಬೆಲೆ ಪಟ್ಟಿಗೆ ಅಧ್ಯಾತ್ಮಪ್ರಕಾಶಕಾರ್ಯಾಲಯವನ್ನು ಸಂಪರ್ಕಿಸಿರಿ.

# ಸಂಸ್ಥಾಪಕರ ಸ್ಮರಣೆ

ಕರ್ನಾಟಕದೇಶದ ಅಭಿನವಶಂಕರಾಚಾರ್ಯರೆಂದೇ ಸುಪ್ರಸಿದ್ಧರಾಗಿರುವ ಬ್ರಹ್ಮೀಭೂತ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳು ಶಾಂಕರ ವೇದಾಂತದ ವಿಷಯಕ್ಕೆ 20ನೆಯ ಶತಮಾನದ ಅಧಿಕೃತ ವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯ ಶ್ರೀಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಪೀಠಿಕೆಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯ ಭಾಷ್ಯಗಳು ಸಂಸ್ಕೃತವುಬಾರದ ಕನ್ನಡಿಗರಾದ ಅಧ್ಯಾತ್ಮವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ. 5.1.1880 ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು ವೈ.ಸುಬ್ಬರಾವ್ ಎಂದಿತ್ತು. 1948 ರವರೆಗೆ (68ನೆಯ ವಯಸ್ಸಿನವರೆಗೆ) ಅವರು ಸುಬ್ರಾಯ ರೆಂದೇ ಪ್ರಖ್ಯಾತರಾಗಿದ್ದರು. 10.6.1948 ರಂದು ಸಂನ್ಯಾಸವನ್ನುಸ್ವೀಕರಿಸಿ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಾದರು.

ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು ಪುರುಷಸರಸ್ವತಿ ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ ಅಧ್ಯಾತ್ಮಪ್ರಕಾಶಕಾರ್ಯಾಲಯವು ದೇಶವಿದೇಶಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧ್ಯಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕ ಅಭಿನವಶಂಕರಾಚಾರ್ಯರಾಗಿ ಬಾಳಿ 1975ನೇ ಆಗಸ್ಟ್ 5 (1880-1975)ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿಪೀಠವು ಹೊಳೆನರಸೀಪುರದಲ್ಲಿದೆ.

---

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥

ಓಂ ನಮೋ ಭಗವತೇ ಸಚ್ಚಿದಾನಂದಾಯ